ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಸಂಪುಟ 2 ಸಂಚಿಕೆ 43

ಅಕ್ಟೋಬರ್ 26, 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org


ಮಲಬಾರ್ ನೌಕಾ ಕವಾಯತು ಭಾರತಕ್ಕೆ ಆಪತ್ತು





ರಾಷ್ಟ್ರೀಯ ಸಮಗ್ರತಾ ಮಂಡಳಿ ಮಾತುಗಳ ಸರಮಾಲೆ ಶೂನ್ಯ ಕ್ರಿಯೆ

ಯಡವನಹಳ್ಳಿ ಚರ್ಚ್‌ನಲ್ಲಿ ಬೆಂಕಿ ಹೊತ್ತಿಕೊಂಡದ್ದಲ್ಲ ಹಚ್ಚಿದ್ದು



ದಲಿತರ ಮೇಲೆ ಬಿಜೆಪಿ ಸಮರ

ಬೆಂಗಳೂರು ವಿಶ್ವವಿದ್ಯಾಲಯದ ಸಂಶೋಧನೆಗಳು

ನೋಟ




ಡಾ. ಜಿ. ಭಾಸ್ಕರ ಮಯ್ಯ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪವಾಡಗಳನ್ನು ಸಂಶೋಧಿಸುವ ಒಂದು ಸಮಿತಿ ರಚಿಸಲಾಗಿತ್ತು. ಅದರ ಮುಖ್ಯಸ್ಥರು ಡಾ. ಎಚ್. ನರಸಿಂಹಯ್ಯನವರಾಗಿದ್ದರು. ಅವರಲ್ಲದೆ ಆ ಸಮಿತಿಯಲ್ಲಿ ಡಾ. ಎ. ಆ. ವಾಸುದೇವ ಮೂರ್ತಿ (ಪ್ರೊಫೆಸರ್ ಆಫ್ ಕೆಮಿಸ್ಟ್ರಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್), ಪ್ರೊ. ಆರ್. ನರಸಿಂಹ (ಪ್ರೊಫೆಸರ್ ಆಫ್ ಆರೊನಾಟಿಕ್ಸ್), ಡಾ. ಕೆ.ಪಿ. ಸಿನ್ಹಾ (ಪ್ರೊ. ಫಿಜಿಕ್ಸ್), ಪ್ರೊ. ಕುಪ್ಪುಸ್ವಾಮಿ (ನಿವೃತ್ತ ಮನೋಶಾಸ್ತ್ರ ಪ್ರಾಧ್ಯಾಪಕರು), ಡಾ. ವಿನೋದಾ ಎನ್. ಮೂರ್ತಿ (ಪ್ರೊ. ಸೈಕಾಲಜಿ, ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಮತ್ತು ನ್ಯೂರೊ ಸೈಯನ್ಸಸ್), ಡಾ. ಎನ್. ಆ. ನಾರಾಯಣ್ (ಸರ್ಜನ್), ಬಿ. ನೀಲಕಂಠನ್ (ನಿವೃತ್ತ ಟೆಲ್‌ಕಾಮ್ ಇಂಜನಿಯರ್), ಪ್ರೊ. ಧರ್ಮಲಿಂಗಮ್ (ಪ್ರೊಫೆಸರ್ ಆಫ್ ಲಾ) ಮತ್ತು ಎಸ್. ಕೆಂಡಗಣ್ಣ ಸ್ವಾಮಿ (ಡೆಪ್ಯುಟಿ ರಿಜಿಸ್ಟ್ರಾರ್, ಬೆಂಗಳೂರು ವಿಶ್ವವಿದ್ಯಾಲಯ) - ಇವರುಗಳು ಇದ್ದರು. ಈ ಸಮಿತಿಯು ತಾನು ಯಾವುದೆ ದೇವರು ಅಥವಾ ಧರ್ಮಕ್ಕೆ ವಿರೋಧವಾದುದಲ್ಲ ಎಂಬುದನ್ನು ಸ್ಪಷ್ಟಪಡಿಸಿತು. ಅತೀಂದ್ರಿಯವಾಗಿ 'ಸೃಷ್ಟಿಸುವ' ರೆನ್ನಲಾದ ಪವಾಡ ಪುರುಷರ ಬಗ್ಗೆ ಈ ಸಮಿತಿ ವರದಿಗಳನ್ನು ಸಂಗ್ರಹಿಸಿತು. ಕರ್ನಾಟಕದಲ್ಲಿ ಇಂತಹ ಮಂದಿ ನಾಲ್ಕೊ ಐದೊ ಇದ್ದರು. ಅವರಲ್ಲೊಬ್ಬ ಶ್ರೀ ಶಿವಬಾಲಯೋಗಿ ತನ್ನ ಆಶ್ರಮಕ್ಕೆ (ಬೆಂಗಳೂರು) ಸಮಿತಿ ಭೇಟಿ ಕೊಡುವುದನ್ನು ಒಪ್ಪಿದ್ದರಿಂದ ನರಸಿಂಹಯ್ಯನವರು ತಮ್ಮ ಸಹಚರರೊಂದಿಗೆ ಆ ದೇವಮಾನವನನ್ನು ಭೆಟ್ಟಿಯಾದರು. ಚರ್ಚೆಯಲ್ಲಿ ಆ ಸ್ವಾಮೀಜಿ ತಾನೇನೂ ಸೃಷ್ಟಿಸುವುದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದರು. ಇನ್ನಿಬ್ಬರು - ಅಂಥ ಶಕ್ತಿ ಇದೆಯೆಂದು ಹೇಳಿಕೊಳ್ಳುತ್ತಿರುವವರು ಕೊಡಗಿನ ಶ್ರೀ ಸಾಯಿ ಶಂಕರ ಮತ್ತು ಗಣಪತಿ ಸಚ್ಚಿದಾನಂದ ಸ್ವಾಮಿ (ಮೈಸೂರಿನ ಹತ್ತಿರ) - ಅವರಿಬ್ಬರೂ ಪವಾಡ ಮಾಡಲು ಅಸಮರ್ಥರು ಎಂದು ಒಪ್ಪಿಕೊಂಡರು.

ಈ ನಡುವೆ ಒಬ್ಬ ಸಣ್ಣ ಹುಡುಗ ಬೆಂಗಳೂರಿನ 'ಶ್ರೀ ಬಾಲ ಶಿವಯೋಗಿ' ಆಹ್ವಾನವಿತ್ತ. ಅಲ್ಲಿಗೆ ಸಮಿತಿ ಭೇಟಿ ಕೊಟ್ಟಾಗ ಆತನ ಬೆರಳುಗಳು ತನ್ನ ಕಷಾಯ ಜುಬ್ಬಾದಲ್ಲಿ ಸುಳಿದಾಡುವುದು ಕಾಣಿಸುತ್ತಿತ್ತು. ನಾವು ಚರ್ಚಿಸುತ್ತಿದ್ದಂತೆಯೇ ಆತ ಕೂಡಲೇ ತನ್ನ ಕೈಯನ್ನ ಎಳೆದುಕೊಂಡ ಹಾಗೂ ಕೈಯನ್ನು ಮುಷ್ಟಿ ಮಾಡಿ ಒಂದು ವೃತ್ತದಂತೆ ತಿರುಗಿಸಿದ. ಒಂದು ಸಣ್ಣ 'ಪ್ರತಿಮೆ' (Image) ಮತ್ತು ಒಂದು ರುದ್ರಾಕ್ಷಿಯನ್ನು ಕೊಟ್ಟ. ನರಸಿಂಹಯ್ಯನವರಿಗೆ ಆಗ ಆಶ್ಚರ್ಯವಾಗಲಿಲ್ಲ. ಅವರಿಗೆ ಇಂಥ ಹಲವಾರು ಸ್ವಯಂ ಘೋಷಿತ

'ನಮ್ಮ ದೇಶದಲ್ಲಿ ಹಲವರು ಅತೀಂದ್ರಿಯ ಶಕ್ತಿಯನ್ನು ಪಡೆದಿದ್ದೇವೆಂದು ಘೋಷಿಸಿಕೊಳ್ಳುತ್ತಾರೆ. ಇದು ವಿಜ್ಞಾನದ ಯಾವುದೇ ತೀರ್ಮಾನಕ್ಕೂ ಒಗ್ಗದ ವಿಚಾರ. ನಮ್ಮ ದೇಶ ಮೂಢ ನಂಬಿಕೆಗಳ ಸುಳಿಯಲ್ಲಿ ಸಿಲುಕಿದೆ. ಇಂಥ ವಿಚಾರಗಳೆಲ್ಲಾ ದೇಶವನ್ನು ಇನ್ನೂ ಅವನತಿಯತ್ತ ಕೊಂಡೊಯ್ಯುತ್ತದೆ.



ಕಪಟ ದೇವಮಾನವರ ಕುರಿತು ತಿಳಿದಿತ್ತು. ಆತನನ್ನು ತೀವ್ರ ಪ್ರಶ್ನೆಗೆ ಹಾಗೂ ಪರೀಕ್ಷೆಗೆ ಗುರಿಪಡಿಸಲಾಗಿ - ತಾನು ಪವಾಡವನ್ನು ಸೃಷ್ಟಿಸಲಾರೆ - ಸತ್ಯ ಸಾಯಿಬಾಬರನ್ನು ಸಂಶೋಧಿಸಿದ ಮೇಲೆ ಮಾತ್ರ ತಾನು ತನ್ನ ಈ ತಂತ್ರದ ರಹಸ್ಯವನ್ನು ಹೇಳುವುದಾಗಿ ವಿನಯದಿಂದ ಒಪ್ಪಿಕೊಂಡ.

ದೇವರ ಮಗನ ಸೋಲು:

ಮೈಸೂರಿನ ಹತ್ತಿರ ಒಂದು ಪುಟ್ಟ ಹಳ್ಳಿ ಪಾಂಡವಪುರ. ಅಲ್ಲಿ ಒಬ್ಬ ಸಾಯಿಕೃಷ್ಣನೆಂಬ ಬಾಲಕನಿದ್ದ. ಸಾಯಿ ಕೃಷ್ಣನ ತಂದೆತಾಯಂದಿರಿಗೆ ಆತನ ಪವಾಡಗಳ ಬಗ್ಗೆ ಸಂಶೋಧಿಸಲು ಅನುಮತಿ ಕೊಡುವಂತೆ ಸಮಿತಿಯು ಪ್ರಾರ್ಥನಾ ಪತ್ರ ಕಳಿಸಿತು. ಅದಕ್ಕೆ ಉತ್ತರ ಬರಲಿಲ್ಲ. ಮತ್ತೆ ಮತ್ತೆ ಮರು ಓಲೆ ಕಳಿಸಿದರು ಉತ್ತರವಿಲ್ಲ. ಕೊನೆಗೆ ಸಮಿತಿ ಸಂಶೋಧನಾ ಕಾರ್ಯಕ್ಕೆ ನೇರವಾಗಿಯೇ ಹೋಗುವುದೆಂದು ತೀರ್ಮಾನಿಸಿತು.

ಭಕ್ತಾದಿಗಳಂತೆ ಸಮಿತಿಯ ಸದಸ್ಯರು ಸಾಯಿಕೃಷ್ಣನಲ್ಲಿಗೆ ತೆರಳಿದರು. ಪವಾಡಪುರುಷನ ಮನೆಯವರು ಯಾರಿಗೂ ಅವಕಾಶ ಕೊಡುತ್ತಿರಲಿಲ್ಲ. ಆದರೆ ಆ ಮಗುವನ್ನು ಅವರು ಮುಟ್ಟಲು ಬಿಡುತ್ತಿರಲಿಲ್ಲ. ಅಂದು ಕಮಿಟಿಯ ಸದಸ್ಯರಾದ ಡಾ. ವಿನೋದ್ ಎನ್. ಮೂರ್ತಿ, ಪ್ರೊ. ಕು. ವೈ. ಸ್ವಾಮಿ ಮತ್ತು ಡಾ. ಅನ್ನಪೂರ್ಣ ನಿರಂಜನ್ - ಪಾಂಡವಪುರಕ್ಕೆ ಹೋದರು. (ಗುರುವಾರ 8 ಜುಲೈ 1976) ಆ ದಿನ ದೊಡ್ಡದೊಂದು ಭಜನಾ ಸಮಾರಂಭವಿತ್ತು. ಈ ಸಮಿತಿಯ ಸದಸ್ಯರು ತಮ್ಮ ಗುರುತು ಕೊಡದೆ ಭಕ್ತರಂತೆಯೇ ಜಂಗುಳಿಯಲ್ಲಿ ಸೇರಿಕೊಂಡರು. ಆ ದಿನ ಯಾವುದೇ ಪವಾಡ ನಡೆಯಲಿಲ್ಲ.

ಗುರುವಾರ 15 ಜುಲೈ 1976 ರಂದು ಸಮಿತಿಯವರು ಪುನಃ ಅದೇ ಉಡುಪಿನಲ್ಲಿ ಅಲ್ಲಿಗೆ ತೆರಳಿದರು - ಭಜನೆ ಮುಗಿಯಿತು. ನಿದ್ರಿಸಿದ ಹುಡುಗ ಎಚ್ಚೆತ್ತ. ಆದರೆ ಪವಾಡವಾಗಲಿಲ್ಲ. ಭಕ್ತಾದಿಗಳು ಚದುರಲು ತೊಡಗಿದ್ದರಷ್ಟೆ. ಆ ಹುಡುಗ ಪದೇ ಪದೇ ತನ್ನ ಕೈಗಳನ್ನು ಸೊಂಟದ ಹತ್ತಿರ ತರುತ್ತಾ ಏನೋ ತೊಂದರೆಯನ್ನು ಅನುಭವಿಸುತ್ತಿದ್ದುದನ್ನು ಡಾ. ವಿನೋದ ಎನ್. ಮೂರ್ತಿ ಕಂಡರು ಮತ್ತು ಒಂದು ಸಣ್ಣ ದಾರ ಅಲ್ಲಿ ಅಲ್ಪ ಸ್ವಲ್ಪ ನೇತಾಡುತ್ತಿದ್ದುದನ್ನೂ ಕಂಡರು. ಅವರು ಕುತೂಹಲದಿಂದ ತಕ್ಷಣ ಓಡಿ ಆ ನೂಲನ್ನು ಎಳೆದು ಬಿಟ್ಟರು. ಕೂಡಲೇ ಆತನ ಚಡ್ಡಿಯ ಮೇಲಿಂದ 'ಅಡಗಿಸಿಟ್ಟ' ಬೂದಿ ಹೊರ ಹೊಮ್ಮಿತು. ಆ ಕ್ಷಣ ಅಲ್ಲಿ ಭಯಂಕರ ಕೋಲಾಹಲವುಂಟಾಯಿತು. ಸಮಿತಿಯ ಸದಸ್ಯರಿಗೆ ಹಿಡಿ ಶಾಪ ಹಾಕಲಾಯಿತು. ಕೊನೆಯಲ್ಲಿ ಆಕೆಯ ತಾಯಿ ತಾವು ಸತ್ಯ ಸಾಯಿಬಾಬರ ಭಕ್ತರು ಹಾಗೂ ಅವರೇ ಮುಖ್ಯ ಸ್ವಿಚ್ ಮತ್ತು ತಮ್ಮ ಸಾಯಿ ಕೃಷ್ಣ ಕೇವಲ ಒಂದು ಬಲ್ಬ್ ಅಷ್ಟೆ ಎಂದರು.

ಈ ರೀತಿ ಅತೀಂದ್ರಿಯ ಶಕ್ತಿಯ ಮರಿ ಸಾಯಿಬಾಬ ಬಯಲಾದ. ಇದು ಈ ದೇಶದ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿಯೂ ಪ್ರಕಟವಾಗಿದೆ. ಈ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ರಾಜ್ಯ ಮಟ್ಟದ ಮಾನ್ಯತೆಯನ್ನು ಗಳಿಸಿತು. ಇಂಥ ಪ್ರಯತ್ನ ಭಾರತದಲ್ಲಿ ಮಾತ್ರವಲ್ಲ ಪ್ರಪಂಚದಲ್ಲೇ ಮೊದಲಿನದ್ದು ಎನಿಸುತ್ತದೆ.

ಸಾಯಿಬಾಬ ಮತ್ತು ಬೆಂಗಳೂರು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯವು ಜೂನ್ 2 ನೆಯ ತಾರೀಕು 1976 ರಂದು ಸಾಯಿಬಾಬರಿಗೊಂದು ಪತ್ರ ಬರೆಯಿತು. ಅದರ ಸಾರಾಂಶವೇನೆಂದರೆ -

'ನಮ್ಮ ದೇಶದಲ್ಲಿ ಹಲವರು ಅತೀಂದ್ರಿಯ ಶಕ್ತಿಯನ್ನು ಪಡೆದಿದ್ದೇವೆಂದು ಘೋಷಿಸಿಕೊಳ್ಳುತ್ತಾರೆ. ಇದು ವಿಜ್ಞಾನದ ಯಾವುದೇ ತೀರ್ಮಾನಕ್ಕೂ ಒಗ್ಗದ ವಿಚಾರ. ನಮ್ಮ ದೇಶ ಮೂಢ ನಂಬಿಕೆಗಳ ಸುಳಿಯಲ್ಲಿ ಸಿಲುಕಿದೆ. ಇಂಥ ವಿಚಾರಗಳೆಲ್ಲಾ ದೇಶವನ್ನು ಇನ್ನೂ ಅವನತಿಯತ್ತ ಕೊಂಡೊಯ್ಯುತ್ತದೆ.

ನಾವು ಬೆಂಗಳೂರು ವಿಶ್ವವಿದ್ಯಾಲಯದವರು ಇದಕ್ಕಾಗಿಯೇ ಒಂದು ಸಮಿತಿಯನ್ನು ಮಾಡಿದ್ದೇವೆ. ಇದು ಧರ್ಮದ ವಿರುದ್ಧವಾಗಲೀ ದೇವರ ವಿರುದ್ಧವಾಗಲೀ ಖಂಡಿತವಾಗಿಯೂ ಅಲ್ಲ.

ಇದು ಕೇವಲ ಸತ್ಯಾನ್ವೇಷಣೆ. ನಿಮ್ಮ ಪವಾಡಗಳ ಬಗ್ಗೆ ನಾವು ಬಹಳಷ್ಟು ಕೇಳಿದ್ದೇವೆ. ನೀವು ಧರ್ಮ ಮತ್ತು ಸತ್ಯವನ್ನು ಪ್ರತಿಪಾದಿಸುವವರೆಂದೂ ತಿಳಿದಿದ್ದೇವೆ. ಆದ್ದರಿಂದ, ತಾವು ದಯವಿಟ್ಟು ನಮ್ಮ ಸಂಶೋಧನಾ ಸಮಿತಿಯ ವಿಜ್ಞಾನದ ಪರೀಕ್ಷೆಗೆ ಒಳಪಡಿಸುವಂತೆ ನಮ್ಮೊಡನೆ ಚರ್ಚಿಸಲು ಒಂದು ಅವಕಾಶವನ್ನು ಕೊಡುತ್ತೀರಾ? ನಿಜವಾದ ದೇವರು ಖಂಡಿತವಾಗಿಯೂ ಇಂಥ ಶೋಧನೆಗೆ ಅವಕಾಶ ಕೊಡುತ್ತಾರೆಂದು ನಾವು ಭಾವಿಸುತ್ತೇವೆ. ತಾವು ಅನುಕೂಲವಾದ ದಿನ. ಸಮಯ ತಿಳಿಸಿದರೆ ನಾವು ಅತ್ಯಂತ ಸಂತೋಷದಿಂದ ನಿಮ್ಮನ್ನು ಭೇಟಿಯಾಗುತ್ತೇವೆ.'

ಇದು ಕೇವಲ ಪತ್ರದ ಸಾರಾಂಶ. ಪತ್ರಕ್ಕೆ ಸಹಿ ಮಾಡಿದವರು ಡಾ. ಎಚ್. ನರಸಿಂಹಯ್ಯ, ಉಪಕುಲಪತಿ ಮತ್ತು ಪವಾಡ ಹಾಗೂ ಮೂಢ ನಂಬಿಕೆಗಳ ಸಂಶೋಧನಾ ಸಮಿತಿಯ ಅಧ್ಯಕ್ಷ.

ಪತ್ರಕ್ಕೆ ಉತ್ತರವಿಲ್ಲ.

Under Certificate of posting ನಲ್ಲಿ ಎರಡನೆಯ ಕಾಗದ ಜೂನ್ 16, 1976 ರಂದು ಹೋಯಿತು.

ಎರಡು ಕಾಗದಗಳಿಗೂ ಉತ್ತರವಿಲ್ಲ. ಮೂರನೆಯ ಕಾಗದ ಜುಲೈ 8, 1976 ರಂದು ಹೋಯಿತು - ಅದರ ಸಾರಾಂಶ:

'ನಮ್ಮೆರಡು ಪತ್ರಗಳಿಗೂ ತಮ್ಮಿಂದ ಉತ್ತರವಿಲ್ಲದುದಕ್ಕೆ ನಾವು ವಿಶಾದಿಸುತ್ತೇವೆ. ನೀವು ಪವಾಡಗಳನ್ನು ಮಾಡುತ್ತೀರೆಂಬ ಕಾರಣದಿಂದ ನಿಮ್ಮ ಸುತ್ತ ಇಂಥ ಪ್ರಭಾವಲಯ ನಿರ್ಮಾಣವಾಗಿದೆ ಎಂದು ನಾವು ತಿಳಿಯುತ್ತೇವೆ. ಒಂದು ಪಕ್ಷ ನೀವು ಮಾಡುವ ಪವಾಡವು ಸುಳ್ಳೆಂದಾದಲ್ಲಿ ನೀವೊಬ್ಬ ಸಾಮಾನ್ಯ ಮನುಷ್ಯರಾಗುತ್ತೀರಿ. ಹೌದೆಂದಾದಲ್ಲಿ ನೀವು ದೇವಮಾನವರೆಂಬುದು ಖಚಿತವಾಗುತ್ತದೆ. ಆದರೆ ಇಂಥ ಪ್ರಭಾವಲಯವನ್ನು ಪರೀಕ್ಷಿಸುವ ಎಲ್ಲ ತಾರ್ಕಿಕ ವಿಧಾನಗಳಿಂದಲೂ ತಾವೇಕೆ ದೂರವಿರುತ್ತೀರಿ?

ಯಾವನೇ ಒಬ್ಬ ಸಂಭಾವಿತ ಮನುಷ್ಯನೆನಿಸಿಕೊಂಡವನು ನುಡಿದಂತೆ ನಡೆಯಬೇಕಾದದ್ದು ಅನಿವಾರ್ಯ. ಆದರೆ ತಮ್ಮ ಈ ವರ್ತನೆಯಿಂದ ತಾವು ಜನರನ್ನು ಹಾದಿ ತಪ್ಪಿಸುವುದರಲ್ಲಿ ಸಂಶಯವಿಲ್ಲವೆಂಬುದನ್ನು ನೀವು ಖಂಡಿತವಾಗಿಯೂ ಬಲ್ಲಿರಿ. ಪ್ರತಿಯೊಬ್ಬರೂ ತಮ್ಮ ಆತ್ಮಸಾಕ್ಷಿಗೆ ಸರಿಯಾಗಿ ನಡೆಯಬೇಕು - ಅದು ನಮ್ಮನ್ನೆಲ್ಲ ಮುನ್ನಡೆಸುತ್ತದೆ. ದೇವತಾ ಮನುಷ್ಯನಿಗೆ ಖಂಡಿತವಾಗಿಯೂ ಈ ಎಲ್ಲಾ ಅರಿವು ಇದ್ದೇ ಇರಬೇಕು, ಅಲ್ಲವೆ?

ಮಹಾನ್ ವ್ಯಕ್ತಿಗಳು ತಾವು ನುಡಿದಂತೆ ನಡೆದರು - ಉದಾಹರಣೆಗೆ: ಭಗವಾನ್ ಬುದ್ಧ, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿ - ಇವರೆಲ್ಲ ತಮ್ಮನ್ನು ವೀಕ್ಷಿಸಿ ವಿಮರ್ಶಿಸಿ ಮತ್ತೆ ನಮ್ಮನ್ನು ಒಪ್ಪಿಕೊಳ್ಳಿರಿ ಎಂದರು. ಅವರ ಬದುಕೆಲ್ಲವೂ ತೆರೆದಿಟ್ಟ ಪುಸ್ತಕ. ಯಾವ ಪ್ರಶ್ನೆಯನ್ನೂ ಅವರು ಸಣ್ಣದೆಂದು ಎಂದೂ ಪರಿಗಣಿಸಲಿಲ್ಲ. ಅವರು ವಿನೀತರು, ಸರಳರು, ಬಡವರೊಂದಿಗೆ ಕುಟೀರಗಳಲ್ಲಿ ವಾಸಿಸುತ್ತಿದ್ದರು. ಅಲ್ಲೆಲ್ಲಾದರೂ ಗುಪ್ತ ಪವಾಡಗಳನ್ನು ಈ ದೇವತಾಪುರುಷರು ಮಾಡಿದ್ದರೆ? ನಿಮ್ಮ ಜೀವನವೆಂಬುದು ಅಂಥ 'ದೈವಿಕ'ವೆನ್ನುವ ಅಥವಾ ಅತ್ಯಂತ ಧಾರ್ಮಿಕ ಎಂಬೆಲ್ಲಾ ವ್ಯಕ್ತಿಗಳಿಗಿಂತ ಭಿನ್ನವಾದುದು. ನಿಮ್ಮ ಗುಪ್ತಗಾಮಿತ್ವವೆಂಬುದು ನಮಗೆ ಸತ್ಯದ ಬಲಿದಾನವೆನ್ನಿಸುತ್ತದೆ.

ದುರದೃಷ್ಟಕರವಾದ ಸಂಗತಿಯೆಂದರೆ - ಬಹಳ ಹಿಂದಿನ ಕಾಲದಿಂದಲೂ ಜೀವನವನ್ನು ಧೈರ್ಯದಿಂದ ಎದುರಿಸಲಾಗದ ಜನರು ಮೂಢಾತ್ಮರಾಗಿ ಧರ್ಮದ ಹೆಸರಿನಲ್ಲಿ ಶೋಷಿತರಾಗುತ್ತಾ ಹೋಗಿದ್ದಾರೆ.

ಈ ಕಾಗದದ ಉದ್ದೇಶ ತಮಗೆ ಯಾವ ನೋವನ್ನುಂಟು ಮಾಡುವುದು ಅಲ್ಲ - ಅಥವಾ

ಪುಟ 15ಕ್ಕೆ

ಸಂಪಾದಕೀಯ

ಸಮಗ್ರತೆಗೆ ಮಾರಕವಾದ ನಿಲುವು

ಹಲವು ವರುಷಗಳ ನಂತರ ರಾಷ್ಟ್ರೀಯ ಭಾವೈಕ್ಯತೆ ಮಂಡಳಿ ಇದೇ 13 ರಂದು ಸಭೆ ಸೇರಿದೆ. ಆ ದಿನ ಭಜರಂಗದಳದ 25ನೇ ವಾರ್ಷಿಕೋತ್ಸವದ ದಿನವೂ ಆಗಿದ್ದು ಕಾಕತಾಳೀಯವೂ ಇರಬಹುದು. ಅದನ್ನು ಒಂದು ಸಂಕೇತದಂತೆಯೂ ಭಾವಿಸಬಹುದು.

ಇಂದು ದೇಶದ ಐಕ್ಯತೆ, ಸಮಗ್ರತೆಗೆ ಗಂಭೀರ ಅಪಾಯ ಒದಗಿರುವ ಸನ್ನಿವೇಶದಲ್ಲಿ ಈ ಸಭೆ ಜರುಗಿದ್ದು ಸ್ವಾಗತಾರ್ಹ. ಆದರೆ ಕ್ರೂರ ವಾಸ್ತವವೆಂದರೆ ಕಳೆದ 51 ವರುಷಗಳಲ್ಲಿ ಇದು ಸೇರಿದ್ದು 14ನೇ ಬಾರಿ ಮಾತ್ರ. ಪ್ರತಿಬಾರಿಯೂ ಆದಷ್ಟು ಬೇಗನೇ ಸಭೆ ಸೇರಬೇಕು ಎಂದು ನಿರ್ಣಯಿಸಿದರೂ ಅಂತಹದ್ದು ಸಂಭವಿಸದೇ ಇರುವಲ್ಲಿ ಕೇಂದ್ರ ಸರ್ಕಾರದ ನಿಷ್ಕಾಳಜಿ ಅಥವಾ ದುರುದ್ದೇಶವೂ ಅಡಗಿರುವುದು ಸ್ಪಷ್ಟ.

ಈ ಬಾರಿಯ ಸಭೆಯೂ ಸಹ ವಿಶಾಲ ಅಜೆಂಡಾಗಳನ್ನು ಇಡಲಾಗಿತ್ತು. ಸಾಮಾಜಿಕ ನ್ಯಾಯ, ಜಾತಿಯಲ್ಲಿ ತಾರತಮ್ಯ, ದಮನ, ಪ್ರಾದೇಶಿಕ ಆರ್ಥಿಕ, ಅಸಮಾನತೆ, ಪ್ರಾದೇಶಿಕ ಸಂಕುಚಿತವಾದ ಪ್ರತ್ಯೇಕವಾದ ಧಾರ್ಮಿಕ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕ್ರಮಗಳು... ಹೀಗೆ.. ಇವೆಲ್ಲಾ ಭಾರಿ ಪ್ರಮುಖವೇ. ಆದರೆ ಇಂತಹ ಒಂದು ಸಭೆಯಲ್ಲಿ ಚರ್ಚಿಸಲು ಸಾಧ್ಯವಾದೀತೆ ಎಂಬುದು. ಕೇಂದ್ರ ಸರ್ಕಾರವು ಸಭೆಯನ್ನು ನಾಮಾಕವಸ್ಥೆಗೊಳಿಸುವ ಯತ್ನಗಳನ್ನು ಮರೆಯುವಂತಿಲ್ಲ. ಈ ಸಭೆಯಲ್ಲಿ ಕೋಮುವಾದ, ಭಯೋತ್ಪಾದನೆ, ಪ್ರಶ್ನೆಗಳು, ತೀವ್ರವಾಗಿ ಪ್ರಸ್ತಾಪಿತವಾಗಿವೆ. ವಿಶೇಷವಾಗಿ ಒರಿಸ್ಸಾ ಹಾಗೂ ಕರ್ನಾಟಕದಲ್ಲಿ ಸಂಭವಿಸುತ್ತಿರುವ ಅಲ್ಪಸಂಖ್ಯಾತ ಕ್ರೈಸ್ತರ ಹಾಗೂ ಪ್ರಾರ್ಥನಾ ಮಂದಿರಗಳ ಮೇಲಿನ ಅವ್ಯಾಹತ ದಾಳಿಗಳೂ ಪ್ರಸ್ತಾಪಿತವಾಗಿವೆ ಚರ್ಚೆಗೂ ಬಂದಿವೆ.


ಮೊದಲಬಾರಿಗೆ ಇಂತಹ ರಾಷ್ಟ್ರಮಟ್ಟದ ವೇದಿಕೆಯಲ್ಲಿ ಕರ್ನಾಟಕವು ರಾಷ್ಟ್ರೀಯ ಸಮಗ್ರತೆಗೆ ಬಾಧಕವಾದ ಪಾತ್ರ ವಹಿಸುತ್ತಿರುವುದು ಪ್ರಸ್ತಾಪವಾಗಿ ಆತಂಕ ವ್ಯಕ್ತಗೊಳ್ಳುವಂತಾದದ್ದು ಕಪ್ಪು ಚುಕ್ಕೆಯಾಗಿದೆ. ಇದರ 'ಕೀರ್ತಿ'ಯನ್ನು ಬಿಜೆಪಿ ಸಂಘಪರಿವಾರವೇ ಹೊರಬೇಕು. ಹಿಂದೆಲ್ಲಾ ಕರ್ನಾಟಕವೆಂದರೆ ಶಾಂತಿ, ಸೌಹಾರ್ದತೆಯ ನಾಡು ಎಂದೆಲ್ಲ ಗುರುತಿಸಲ್ಪಡುತ್ತಿತ್ತು. ಆದ್ದರಿಂದ ಸತತವಾಗಿ ಕೋಮುದ್ವೇಷದಿಂದ ಉರಿಯುತ್ತಿರುವ ಜ್ವಾಲೆ, ಭಯೋತ್ಪಾದನೆಯ ಕರಿನೆರಳು, ಮೂಲಕ ಗುರುತಿಸಿಕೊಳ್ಳುವಂತಾಗಿರುವುದು ನಾಡನ್ನು ಅಧಿಕಾರಸ್ಥರು ದುರಂತಕ್ಕೆ ದೂಡುತ್ತಿರುವುದರ ದ್ಯೋತಕವಾಗಿದೆ.

ಈ ಸಭೆಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಯಡಿಯೂರಪ್ಪನವರು ದೇಶದ ಸಂವಿಧಾನಕ್ಕೆ ಮತ್ತು ಸಮಗ್ರತೆಯ ಮೇಲೆ ಧಾಳಿ ನಡೆಸುತ್ತಿರುವ ಕೋಮುವಾದಿ ಫಾಶಿಸ್ಟ್ ಶಕ್ತಿಗಳಿಂದ ಘಟಿಸಿದ ಘಟನೆಗಳ ಬಗ್ಗೆ ಚಕಾರವನ್ನೇ ಎತ್ತದಿರುವುದು. ಭಜರಂಗದಳ ಒಳಗೊಂಡು ಸಂಘ ಪರಿವಾರದ ಸಂರಕ್ಷಕನಂತೆ ಅವರು ವರ್ತಿಸಿದ್ದು, ನಾಚಿಕೆಗೇಡಿನ, ಖಂಡನೀಯ ಸಂಗತಿಯಾಗಿದೆ. ಇಂತಹ ಜ್ವಲಂತ ಪ್ರಶ್ನೆಗಳ ಬಗ್ಗೆ ಮಾತನಾಡದೇ ಕೇವಲ ಮತಾಂತರ ಹಾಗೂ ಭಯೋತ್ಪಾದನೆ ಬಗ್ಗೆ ಚರ್ಚೆ ನಡೆಸುವ ಮುಖ್ಯಮಂತ್ರಿಗಳ ಕ್ರಮ ದುರುದ್ದೇಶದಿಂದ ಕೂಡಿದೆ ರಾಜ್ಯದಲ್ಲಿ ಅಂತಹ ದಾಳಿಗಳನ್ನು ನಿಲ್ಲಿಸುವ ಬದಲು ಹೆಚ್ಚಿಸಲು 'ಆ' ಶಕ್ತಿಗಳಿಗೆ ನೀಡಿದ ಕುಮ್ಮಕ್ಕು ಹಾಗೂ ಪ್ರೋತ್ಸಾಹವೇ ಆಗಿದೆ. ಹೀಗೆ ದೇಶದ ಸಂವಿಧಾನ, ಪ್ರಜಾಪ್ರಭುತ್ವ, ಸೆಕ್ಯುಲರ್ ಮೌಲ್ಯಗಳಿಗೆ, ಪರಂಪರೆಗೆ ಬದ್ಧವಾಗದೇ ಭಜರಂಗದಳಕ್ಕೆ ಬದ್ಧತೆ ಘೋಷಿಸಿರುವುದು ಅಪಾಯದ ಸೂಚನೆಯೂ ಆಗಿದೆ ಹಾಗೂ ಸರ್ಕಾರದ ಪರೋಕ್ಷ ಬೆಂಬಲದ ಸಾಕ್ಷಿ ಇದಾಗಿದೆ.

ಅದೇ ರೀತಿ ಮತಾಂತರ ತಡೆಯಲು ಕ್ರಮ, ಭಯೋತ್ಪಾದನೆ ನಿಗ್ರಹಕ್ಕೆ ಪೋಟಾ ಮಾದರಿ ಕಾನೂನು ಇಂತಹ ಪರಿಹಾರವನ್ನೇ ಸೂಚಿಸಿರುವುದು ನಿಜ ಪ್ರಶ್ನೆಗಳ ಇತ್ಯರ್ಥಕ್ಕೆ ಸಿದ್ಧವಿಲ್ಲದಿರುವುದನ್ನು ತೋರಿಸಿದೆ.

ಒಟ್ಟಾರೆ ರಾಷ್ಟ್ರೀಯ ಭಾವೈಕ್ಯತೆ ಮಂಡಳಿಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರ ತಳೆದ ನಿಲುವು ಇಂದಿನ ಪ್ರಕ್ಷುಬ್ಧ ವಾತಾವರಣವನ್ನು ತಿಳಿಗೊಳಿಸದೇ ಉಲ್ಬಣಗೊಳಿಸುವ ದಿಕ್ಕಿನಲ್ಲಿರುವುದು ಅಪಾಯಕಾರಿಯಾಗಿದೆ. ಇದನ್ನು ಎದುರಿಸಲು ಎಲ್ಲಾ ಶಾಂತಿ ಸೌಹಾರ್ದತೆ ಬಯಸುವ, ದೇಶದ ಸಮಗ್ರತೆ ಕಾಪಾಡಲು ಬದ್ಧವಾಗಿರುವ ಶಕ್ತಿಗಳಿಗೆ ಸವಾಲಿನ ಸಂದರ್ಭವೂ ಆಗಿದೆ. ○

ಪ್ರಜಾಸತ್ತೆಗೆ ಕಂಟಕ ಯಾರು?




ಭಾರತದ ಭಾವೀ ಪ್ರಧಾನಿಯೆಂದೇ ಸ್ವಪಕ್ಷೀಯರಿಂದ ಬೊಗಳೆ ಹೊಡೆಸಿಕೊಳ್ಳುತ್ತಿರುವ ಲಾಲ್‌ಕೃಷ್ಣ ಆಡ್ವಾನಿಯವರು ಭಾರತದಲ್ಲಿ ಪ್ರಜಾಪ್ರಭುತ್ವ ಉಳಿದಿರುವುದು ಹಿಂದುಗಳಿಂದ ಎಂದು ತಮ್ಮ ಸಂಶೋಧನೆಯನ್ನು ಹೊರಗೆಡಹಿದ್ದಾರೆ. ಇಲ್ಲಿ ಅದ್ವಾನಿಯವರು ಹಿಂದುಗಳನ್ನು ಕೊಂಡಾಡುತ್ತಿದ್ದಾರೆ ಎಂದು ಯಾರಾದರೂ ಭಾವಿಸಿದರ ಅದು ತಪ್ಪಾದೀತು. ಯಾಕೆಂದರೆ ಅದ್ವಾನಿಯವರು ಒಂದು ಕಲ್ಲಿಗೆ ಎರಡು ಹಕ್ಕಿ ಹೊಡೆಯುವ, ಯಾವುದೇ ವಿಷಯದ ತಲೆ ಕೆಳಕು ಮಾಡಿ ವ್ಯಾಖ್ಯಾನಿಸುವುದರಲ್ಲಿ ನಿಷ್ಣಾತರು. ಅವರ ಮಾತಿನ ಗುರಿ ಇದ್ದದ್ದೂ ಹಿಂದು ಹೊರತುಪಡಿಸಿ ಉಳಿದ ಧರ್ಮೀಯರು ಪ್ರಜಾಪ್ರಭುತ್ವಕ್ಕೆ ಕಂಟಕ ಎಂಬುದೇ ಆಗಿದೆ. ಇದು ಸಂಘ ಪರಿವಾರ ವಿಪುಲವಾಗಿ ಬೆಳೆಸಿದ ವಿಷಭಾಷೆ! ಶೈಲಿ!

ಭಾರತದ ಸಮಾಜ, ಸಂಸತಿ, ಪ್ರಜಾಪ್ರಭುತ್ವ ಇತ್ಯಾದಿಗಳನ್ನು ಬೆಳವಣಿಗೆ ಯಾವುದೇ ಒಂದು ಧರ್ಮದ ಸ್ವತ್ತಲ್ಲ. ವಿವಿಧ ಜನಾಂಗಗಳು, ಜಾತಿಗಳು, ಧರ್ಮೀಯರ ಕೊಡುಗೆ ಇದಕ್ಕೆ ಅಪಾರವಿದೆ. ಅದ್ವಾನಿಯವರು ಹೇಳುತ್ತಿರುವ ಹಿಂದೂ ಧರ್ಮವೆನ್ನುವ ಚಾತುರ್ವರ್ಣ್ಯ ಧರ್ಮದಲ್ಲಿಯೇ ಅಸಮಾನತೆ, ಅಸಹಿಷ್ಣುತೆ ಅಮಾನವೀಯತೆ ಇದೆ. ಪಿರಮಿಡ್ಡಿನ ವ್ಯವಸ್ಥೆಯಲ್ಲಿ ನಟ್ಟಿರುಳು ನಲುಗಿದವರ ಇತಿಹಾಸವೇ ಇದೆ. ಹೀಗಿರುವಾಗ ಪ್ರಜಾಪ್ರಭುತ್ವ ಎಂಬುದು ಅಲ್ಲಿರಲು ಸಾಧ್ಯವೇ ಇಲ್ಲ. ಮೇಲಾಗಿ ಸ್ವತಃ ಬಿಜೆಪಿ ತಾನು ಪ್ರಜಾಪ್ರಭುತ್ವದ ಮಹಾರಕ್ಷಕವೆಂಬಂತೆ ತುರ್ತು ಪರಿಸ್ಥಿತಿ ಹೇರಿದ್ದ ದಿನದಂದು ವರುಷಕ್ಕೊಂದು ಬಾರಿ ಪೂಜು ನೀಡಿದರೂ ಅದು ಪ್ರಜಾಪ್ರಭುತ್ವದ ಮೌಲ್ಯಗಳನ್ನೇ ಸರ್ವನಾಶ ಮಾಡುವ ಫ್ಯಾಸಿಸ್ಟ್ ಗುಣದ್ದಾಗಿರುವದಕ್ಕೆ ಹೆಚ್ಚಿನ ಪುರಾವೆಗಳೇ ಬೇಕಿಲ್ಲ. ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ, ಸಮಬಾಳು, ಸಾಮರಸ್ಯ ಕಂಡರೆ ಕೆಂಡಮಂಡಲವಾಗಿ ನಿತ್ಯವೂ ಧಾಳಿ ನಡೆಸುವವರು ಪ್ರಜಾಪ್ರಭುತ್ವವನ್ನು ಕಾಪಾಡುವುದಾದರೂ ಹೇಗೆ? ಹೀಗೆ ಜನತಂತ್ರಕ್ಕೆ ಕಡುವಿರೋಧಿಯಾಗಿರುವ ಈ ಫ್ಯಾಸಿಸ್ಟರು ಅದರ ಎಲ್ಲಾ ಅವಕಾಶ ಬಳಸಿ ಅಧಿಕಾರ ಹಿಡಿದು. ಕೊನೆಗೆ ಅದರ ನಾಶಕ್ಕೆ ತೊಡಗುವುದು, ಪ್ರಭುತ್ವದ ಬಲವನ್ನೇ ಬಳಸುವುದು ದೇಶದಲ್ಲಿಯೇ ಕಂಡಿದ್ದೇವೆ. ಅಂದರೆ ಅದ್ವಾನಿಯವರ ಮಾತಿಗೆ ಏನು ಬೆಲೆ?

ಬೆಂಕಿ ಹಚ್ಚಿ ವಿದ್ಯುತ್ ಎಂದರು!

ಈಗ ಬಿಜೆಪಿ ಅಧಿಕಾರ ನಡೆಸಿದ, ನಡೆಸುತ್ತಿರುವ ರಾಜ್ಯಗಳನ್ನೇ ನೋಡಬಹುದು. ಗುಜರಾತ್, ಮಧ್ಯಪ್ರದೇಶ, ಯು.ಪಿ, ರಾಜಸ್ಥಾನ್ ಇತ್ಯಾದಿಗಳಿರಲಿ ಕರ್ನಾಟಕವನ್ನೇ ತೆಗೆದುಕೊಳ್ಳೋಣ. ತೀರಾ ಇತ್ತೀಚಿನ ಘಟನೆ ಎಂದರೆ ಆನೇಕಲ್ ತಾಲ್ಲೂಕಿನ ಯಡವನಹಳ್ಳಿ ಚರ್ಚ್ ಮೇಲೆ ಅಕ್ಟೋಬರ್ 12 ರಂದು ಮಧ್ಯರಾತ್ರಿ ನಡೆದ ದಾಳಿ, ಅಲ್ಲಿ 'ದುಷ್ಕರ್ಮಿ'ಗಳು ಹಚ್ಚಿದ ಬೆಂಕಿಗೆ ಹತ್ತು ಲಕ್ಷ ರೂಪಾಯಿಗಳಷ್ಟು ಹಾನಿ ಸಂಭವಿಸಿದೆ. ಅಲ್ಲಿ ನಡೆದಿರುವ ವಸ್ತುಸ್ಥಿತಿಯನ್ನು ಪರಿಶೀಲಿಸಿದ ಯಾರೇ ಆಗಲಿ ಅದು ಯಾರೋ ದುಷ್ಕರ್ಮಿಗಳು ಮಾಡಿದ ಕೃತ್ಯ ಎಂಬುದನ್ನು ತಕ್ಷಣವೇ ಅರಿಯಬಲ್ಲರು. ಆದರೆ ಸರ್ಕಾರ ಅದರ ತನಿಖೆಯನ್ನು ನಡೆಸದೇ ಪೋಲೀಸರ ಮೂಲಕ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಎಂದು ಪ್ರಚಾರಿಸತೊಡಗಿದೆ. ಅಂದರೆ ದಾಳಿ ನಡೆದಿರುವುದನ್ನು, ನಡೆಸಿದವರನ್ನು ರಕ್ಷಿಸುತ್ತಿದೆ. ಪೋಲೀಸರ ಕಾವಲಿನಲ್ಲಿಯೇ ಇದು ನಡೆದಿರುವುದನ್ನು ಗಮನಿಸಿದ ಹಲವು ನಿಯೋಗಗಳು ಪೋಲೀಸರ ಮೂಲಕವೇ ಯಾಕೆ ಮಾಡಿಸಿರಬಾರದು ಎಂಬ ಆಕ್ಷೇಪಣೆ, ಅನುಮಾನ ವ್ಯಕ್ತಪಡಿಸಿವೆ. ಇನ್ನೂ ಗಂಭೀರ ಸಂಗತಿಯೆಂದರೆ ಅಲ್ಲಿನ ಪಾದ್ರಿ ಸಂತೋಷ್‌ರವರು ಈ ಕೃತ್ಯಗಳ ಬಗ್ಗೆ ಪೋಲೀಸ್ ಠಾಣೆಗೆ ದೂರು ನೀಡಲು ಹೋದರೆ, ದೂರನ್ನೇ ದಾಖಲಿಸದೇ ತಿರಸ್ಕರಿಸಿ ವಾಪಾಸು ಕಳುಹಿಸಿರುವುದು ಪ್ರಜಾಪ್ರಭುತ್ವದ ರಕ್ಷಣೆಯೇ? ಇದೇ ದಾರಿಯಲ್ಲಿಯೇ ಗೃಹಸಚಿವರು ಆಡುತ್ತಿರುವುದು ಏನನ್ನೂ ತೋರಿಸುತ್ತಿದೆ? ಹೀಗಾಗಿಯೇ ಈ ಘಟನೆಗಳನ್ನು ಕಲಸು ಮೇಲೋಗರ ಮಾಡುವ ಉಸ್ತುವಾರಿಯನ್ನು ಬೆಂಗಳೂರು ಗ್ರಾಮೀಣ ಎಸ್.ಪಿ ಮಹೇಶ್ ವಹಿಸಿಕೊಂಡಿದ್ದಾರೆ. ಕೊನೆಗೆ ವಿಪರೀತ ಒತ್ತಡ ಹೆಚ್ಚಿ ದೂರು ದಾಖಲಿಸದೇ ಇದ್ದಲ್ಲಿ ವಿಕೋಪಕ್ಕೆ ಹೋಗಲಿದೆ ಎಂದು ಎಚ್ಚರಿಸಿದ ನಂತರವೇ ಅರೆ ಮನಸ್ಸಿನಿಂದ ಶಾರ್ಟ್ ಸರ್ಕ್ಯೂಟ್ ಅಥವಾ ದುಷ್ಕರ್ಮಿಗಳ ಧಾಳಿ ಎರಡನ್ನೂ ತನಿಖೆಗೆ ಒಳಪಡಿಸಲಾಗುವುದು ಎಂದು

ಇಂಥವರ ಕೈಯಲ್ಲಿ ಪ್ರಜಾಪ್ರಭುತ್ವ ಸುರಕ್ಷಿತವೇ?



ಹೇಳಿ ಉದಾರತೆಯನ್ನು ತೋರಿಸಿದ್ದು.

ಇದೇ ಸಂದರ್ಭದಲ್ಲಿ ಒಂದು ಘಟನೆ ನೆನಪಿಸಿಕೊಳ್ಳಬೇಕಿದೆ. ಇತ್ತೀಚೆಗೆ ಒರಿಸ್ಸಾದ ಕುದಮಾಲ್‌ನಲ್ಲಿ ಕ್ರಿಶ್ಚಿಯನ್ನರ ಮೇಲೆ ಬಜರಂಗದಳದಿಂದ ನಡೆದ ಧಾಳಿ ಸಂದರ್ಭದಲ್ಲಿ ಮೊಕದ್ದಮೆಯನ್ನು ಜಿಲ್ಲಾ ಎಸ್.ಪಿ.ಗಳೇ ದಾಖಲಿಸುತ್ತಿಲ್ಲ ಎಂದು, ಕೇಸ್ ದಾಖಲಿಸಲು ನಿರ್ದೇಶನ ನೀಡುವಂತೆ ಕೋರಿ ಸುಪ್ರಿಂ ಕೋರ್ಟ್‌ನ ಮೊರೆ ಹೋಗಬೇಕಾಗಿ ಬಂದಿದೆ. ಒರಿಸ್ಸಾದಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ ಸರ್ಕಾರವಲ್ಲ. ಅದು ಬಿಜು ಪಟ್ನಾಯಕ್‌ರನ್ನು ಬೆಂಬಲಿಸುತ್ತಿದೆ. ಹೀಗೆ ಅಪೂರ್ಣ ಸ್ಥಿತಿಯಲ್ಲಿದೆ. ಆ ಪರಿಸ್ಥಿತಿ ಇರುವಾಗ, ಪೂರ್ಣ ಅಧಿಕಾರ ಹಿಡಿದಿರುವ ಕರ್ನಾಟಕದಲ್ಲಿ ಸ್ಥಿತಿ ಇನ್ನು ಮುಂದೆ ಹೀಗಿರಬಹುದು? ಅದೂ ಪಕ್ಷೇತರರ ಮೇಲೆ ಅವಲಂಬನೆಯಿಂದ ಹೊರಗೆ ಬಂದು ತನ್ನದೇ ಪೂರ್ಣ ಬಹುಮತಕ್ಕೆ ಇನ್ನೂ ಮೂರು ಶಾಸಕರನ್ನು ಸೆಳೆದುಕೊಳ್ಳಲು ಯತ್ನಿಸುತ್ತಿರುವಾಗ....

ಇಂತಹವರ ಕೈಯಲ್ಲಿ ಪ್ರಜಾಪ್ರಭುತ್ವ ಉಳಿಯುವುದು ಸಾಧ್ಯವೇ? ಅಂದರೆ ಅದ್ವಾನಿಯವರ ಹಾಗೂ ಹಡಿಯೂರಪ್ಪ ಆಚಾರ್ಯರ ಪ್ರಜಾಪ್ರಭುತ್ವ ಎಂತಹದು. ಕರ್ನಾಟಕ ಗುಜರಾತ್‌ನ ಹೊಸ ಪ್ರಯೋಗಗಳನ್ನು ಕಾಣತೊಡಗಿದೆ.

ರಾಮಚಂದ್ರಾಪುರ ಮಠಕ್ಕೆ ಗೋಕರ್ಣ ದೇವಸ್ಥಾನವನ್ನು ವರ್ಗಾಯಿಸಿದ ಸರ್ಕಾರದ ಕ್ರಮವನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್‌ನ ಸಂಚಾರಿ ಪೀಠವು ಆ ದಿಕ್ಕಿನಲ್ಲಿ ಯಾವುದೇ ವ್ಯವಹಾರ ಮುಂದುವರಿಸದಂತೆ ತಡೆ ನೀಡಿರುವುದು ಸರ್ಕಾರಕ್ಕೆ ಪ್ರಾಥಮಿಕ ಕಪಾಳಮೋಕ್ಷವೆಂದೇ ಹೇಳಬಹುದು. ಬಿಜೆಪಿ ಸರ್ಕಾರ, ಎಲ್ಲಾ ನೀತಿ, ನಿಯಮ, ಕಾನೂನುಗಳನ್ನು ಗಾಳಿಗೆ ತೂರಿ ಆರ್.ಎಸ್.ಎಸ್.ನ ಸ್ವಾಮಿಯನ್ನು ಕೊಬ್ಬಿಸಲು

ಪುಟ 5 ಕ್ಕೆ

ಯಾದಗಿರಿ ಜಿಲ್ಲೆಯಾದರಷ್ಟೇ ಸಾಕೆ?

ಸೆಪ್ಟೆಂಬರ್ 26 ರಂದು ಗುಲಬರ್ಗಾದಲ್ಲಿ ನಡೆದ ಯಡಿಯೂರಪ್ಪ ಮಂತ್ರಿ ಮಂಡಲದ ಸಂಪುಟ ಸಭೆ ಯಾದಗಿರಿ ಜಿಲ್ಲೆ ಎಂದು ಘೋಷಣೆ ಮಾಡಿ ಕಾಂಗ್ರೆಸ್‌ನ ಪ್ರಭಾವಿ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಿರಪಯುಕ್ತ ನಾಯಕ ಎಂದು ಬಿಂಬಿಸುವಂತೆ ಮಾಡಿದೆ. ಯಾದಗಿರಿ ಜಿಲ್ಲೆ ಎಂದು ಘೋಷಿಸುವುದೇ ಈ ಸಂಪುಟ ಸಭೆಯ ಒಂದಂಶದ ಕಾರ್ಯಕ್ರಮದಂತಿತ್ತು. ಖರ್ಗೆಯವರ ಉದಾಸೀನ ನೀತಿಯೇ ಅವರಿಗೆ ಮುಳುವಾಗಿ ಪರಿಣಮಿಸಿತು.

ಕಳೆದ ನಾಲ್ಕು ದಶಕಗಳಿಂದ ಯಾದಗಿರಿ ತಾಲ್ಲೂಕಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಖರ್ಗೆ, ಯಾದಗಿರಿ ಜಿಲ್ಲೆ ಮಾಡಲು ಬೇಕಾಗುವ ಎಲ್ಲ ಮೂಲಭೂತ ಸೌಕರ್ಯ ಕಲ್ಪಿಸಿದ್ದರು. ಆದರೆ ಜಿಲ್ಲೆ ಎಂದು ಘೋಷಣೆ ಮಾಡುವಲ್ಲಿ ವಿಫಲರಾಗಿದ್ದರು. ಇದರ ಸಂಪೂರ್ಣ ಲಾಭವನ್ನು ಬಿಜೆಪಿ ಪಡೆದಿದೆ. ಕಾಂಗ್ರೆಸ್ಸಿನ ಮೃದು ಧೋರಣೆಯೇ ಬಿಜೆಪಿ ಬೆಳವಣಿಗೆಗೆ ಕಾರಣ ಎಂಬುದಕ್ಕೆ ಇದೊಂದು ಚಿಕ್ಕ ನಿದರ್ಶನವಾಗಿದೆ.

ಯಾದಗಿರಿ ತಾಲ್ಲೂಕಿನ ಜನರಿಗೆ ಜಿಲ್ಲೆ ಘೋಷಣೆಯಾದರೆ ಲಾಭವೇನು? ಸರ್ಕಾರಿ ಕಛೇರಿಗಳ ಸ್ಥಾಪನೆ-ರಸ್ತೆಗಳು ಅಭಿವೃದ್ಧಿಯಾದರೆ ಜನಸಾಮಾನ್ಯರು ಆರ್ಥಿಕವಾಗಿ-ಸಾಮಾಜಿಕವಾಗಿ-ಶೈಕ್ಷಣಿಕವಾಗಿ ಸಬಲರಾಗುವರೇ? ಈ ಬಗ್ಗೆ ಸರ್ಕಾರ ಯೋಚಿಸಬೇಕಾಗಿದೆ.

ಕೂಲಿಗಾಗಿ ಬೆಂಗಳೂರಿಗೆ ಗುಳೆ ಬಂದ ಹತ್ತು ಜನರಲ್ಲಿ ಓರ್ವ ಯಾದಗಿರಿಯವನಾಗಿರುತ್ತಾನೆ. ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ಸಾಮಾನು-ಸರಂಜಾಮುಗಳೊಂದಿಗೆ ಗುಳೆ ಹೊರಟ ಕೃಷಿ ಕೂಲಿಕಾರರಿಂದ ತುಂಬಿ ತುಳುಕುತ್ತಿರುತ್ತದೆ. ಬೆಂಗಳೂರು- ಮುಂಬೈ- ಹೈದ್ರಾಬಾದ್‌ಗೆ ತೆರಳುವ ರೈಲುಗಳ ಸಾಮಾನ್ಯ ಬೋಗಿಯಲ್ಲಿ ಕುರಿಗಳಂತೆ ಪ್ರಯಾಣ ಮಾಡುತ್ತಾರೆ. ಇದಕ್ಕೆ ಕಾರಣ ಇಲ್ಲದಿಲ್ಲ.

ಯಾದಗಿರಿ ಸುತ್ತಮುತ್ತ ಉದ್ಯೋಗ ನೀಡುವಂತಹ ಕಾರ್ಖಾನೆಗಳಿಲ್ಲ. ಕೃಷಿ ಭೂಮಿ ಫಲವತ್ತತೆಯಿಂದ ಕೂಡಿಲ್ಲ. ನೀರಾವರಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಜಮೀನ್ದಾರಿ ಪದ್ಧತಿ-ಜೀತ ಪದ್ಧತಿ-ದಲಿತರ ಮೇಲಿನ ಶೋಷಣೆ ಇಲ್ಲಿ ಅವ್ಯಾಹತವಾಗಿ ನಡೆಯುತ್ತಿವೆ. ಜನಸಾಮಾನ್ಯರ ತಲಾ ಆದಾಯ ತೀರಾ ಕಡಿಮೆ. ಹೀಗಾಗಿ ಯಾದರಿಗಿ ತಾಲ್ಲೂಕಿನ ಶ್ರೀಸಾಮಾನ್ಯರು ಗುಳೆ ಹೋಗುವುದು ಸಹಜವಾಗಿದೆ. ಇದು ಕಳೆದ ನಾಲ್ಕು ದಶಕಗಳಿಂದ ಯಥಾವತ್ತಾಗಿ ನಡೆದುಕೊಂಡು ಬರುತ್ತಿದೆ. ಇದಕ್ಕಾಗಿಯೇ ಏನೋ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಗುರುಮಿಠಕಲ್-ಜೇವರ್ಗಿ ಮತಕ್ಷೇತ್ರದ ನಾಗರೀಕರು 'ಭಿಕ್ಷುಕರು' ಎಂದು ಮೂದಲಿಸಿದ್ದರು. ಹೈ-ಕ ಭಾಗ ಮಾನವ ಅಭಿವೃದ್ಧಿ ವಂಚಿತ ಎಂಬ ಅಂಶ ಕುಮಾರಸ್ವಾಮಿ ಅವರ ಗಮನಕ್ಕೂ ಬಂದಿತ್ತು. ಆದರೆ ಅವರ ಹೇಳಿಕೆ ರಾಜಕೀಯ ಪ್ರೇರಿತವಾಗಿತ್ತು. ಮಾನವ ಅಭಿವೃದ್ಧಿ ಬಗ್ಗೆ ಅರ್ಥೈಸಲು ಅವರು ವಿಫಲರಾಗಿದ್ದರು. 'ಮೌನ ಒಪ್ಪಿಗೆಯ ಸಂಕೇತ' ಎಂಬಂತೆ ಕುಮಾರಸ್ವಾಮಿ ಕ್ರಿಯೆಗೆ ಖರ್ಗೆ-ಧರ್ಮಸಿಂಗ್ ಪ್ರತಿಕ್ರಿಯಿಸದೇ ಜಾರಿಕೊಂಡಿದ್ದರು.

'ಮಾನವ ಅಭಿವೃದ್ಧಿ' ಎಂಬ ಶಬ್ಧಕ್ಕೆ ಪರಿಭಾಷೆ ಏನು? ಸೆ.23ರ ರಾತ್ರಿ ಉದಯ ವಾರ್ತೆ ವಾಹಿನಿಯಲ್ಲಿ ಬಿತ್ತರಗೊಂಡ ಕಾರ್ಯಕ್ರಮದಲ್ಲಿ ಹೈ-ಕ ಅಭಿವೃದ್ಧಿ ಬಗ್ಗೆ ಒಂದು ಗಂಟೆ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಸಿಪಿಐ(ಎಂ)ನ ಮುಖಂಡ ಮಾರುತಿ ಮಾನ್ಪಡೆ, ಕಾಂಗ್ರೆಸ್ಸಿನ ಬಿ.ಆರ್.ಪಾಟೀಲ್ ಹಾಗೂ ಬಿಜೆಪಿಯ ಶಶೀಲ್ ನಮೋಶಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮಾರುತಿ ಮಾನ್ಪಡೆ ಮಾನವ ಅಭಿವೃದ್ಧಿಯ ಪರಿಭಾಷೆ ಮನಮುಟ್ಟುವಂತೆ ವಿಶ್ಲೇಷಿಸಿದರು.

ಯಡಿಯೂರಪ್ಪನವರು ತಮ್ಮ ಬಜೆಟ್‌ನ ಅರ್ಧದಷ್ಟು ಭಾಗ ಸಿವಿಲ್ ಕಾಮಗಾರಿಗೆ ಮೀಸಲಿಟ್ಟಿರುವುದಕ್ಕೆ ಕಟುವಾಗಿ ಟೀಕಿಸಿದ ಮಾನ್ಪಡೆಯವರು, ಒಂದು ಪ್ರದೇಶದ ಅಭಿವೃದ್ಧಿ ಅಳೆಯಬೇಕಾದರೆ ಅಲ್ಲಿ ವಾಸಿಸುವ ನಾಗರಿಕತೆಯ ಅಭಿವೃದ್ಧಿ ಮಾನದಂಡವಾಗಬೇಕು. ಹಿಂದುಳಿದ ಭಾಗದ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಬೇಕಾದರೆ ಗ್ರಾಮ ಪಂಚಾಯತಗಳಿಗೆ ನೀಡುತ್ತಿರುವ 5-6 ಲಕ್ಷ ರೂ. ಅನುದಾನ ಕನಿಷ್ಟ 3 ಕೋಟಿ ರೂಪಾಯಿಗಳಿಗೆ ಏರಿಸಬೇಕು, ಔದ್ಯೋಗಿಕವಾಗಿ ಅಭಿವೃದ್ಧಿಪಡಿಸಬೇಕು, ಆದ್ಯತೆ ಮೇರೆಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕು,. ಪ್ರತಿಯೊಬ್ಬ ನಾಗರೀಕರಿಗೆ ಆಹಾರ ಭದ್ರತೆ ಒದಗಿಸಬೇಕು, ತಲಾದಾಯ ಮುಂದುವರೆದ ಭಾಗದ ನಾಗರೀಕರಿಗೆ ಸಮಾನವಾಗಿ ಸಿಗುವಂತಾಗಬೇಕು ಎಂಬುವುದನ್ನು ಅಂಕಿ-ಅಂಶಗಳ ಸಮೇತ ಸಾದರಪಡಿಸಿದರು.

ಮಾನವ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದ ಯಡಿಯೂರಪ್ಪ ಸರ್ಕಾರ ಯಾದಗಿರಿ ಜಿಲ್ಲೆಯೆಂದು ಘೋಷಿಸಿ ಅಪಹಾಸ್ಯಕ್ಕೀಡಾಗಿದೆ. ಉದ್ಯೋಗಕ್ಕಾಗಿ ಗುಳೆ ಹೋಗುವ ವಿಚಾರದಲ್ಲಿ ದೇಶದಲ್ಲೇ ಕುಖ್ಯಾತವಾದ ಜಿಲ್ಲೆ ಯಾದಗಿರಿ ಆದರೆ ಅಚ್ಚರಿಯೇನಲ್ಲ.

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಶಬ್ದದೊಂದಿಗೆ ಇತ್ತೀಚೆಗೆ 'ಮಾನವ ಅಭಿವೃದ್ಧಿ' ಮಾತು ಪ್ರಚಲಿತದಲ್ಲಿದೆ.


ಸತ್ಯಬೋಧ ಕಾಗಲಕರ್

ಬೀ ಕೇರ್ ಫುಲ್!

'ದುಡ್ಡಿದ್ದವನೇ ದೊಡ್ಡಪ್ಪ' ಅಂತಾರೆ, ಆದರೆ ತಾನೇ ದೊಡ್ಡಪ್ಪ ಅಂತ ಮೆರಿತಿದ್ದ ಅಮೆರಿಕವೇ ದೀಪಾವಳಿ ಹಬ್ಬಕ್ಕೆ ಮೊದಲೇ ದಿವಾಳಿ ಆಗುತ್ತಿದೆ. ತಾನು ದಿವಾಳಿ ಆಗುವುದರ ಜತೆಗೆ ಜಗತ್ತನ್ನೆಲ್ಲಾ ದಿವಾಳಿ ಎಬ್ಬಿಸುತ್ತಿದೆ. ಇಷ್ಟಾದರೂ, 'ರೋಮ್ ಹತ್ತಿ ಉರಿಯುವಾಗ ನೀರೋ ಪಿಟೀಲು ಬಾರಿಸುತ್ತಿದ್ದನಂತೆ' ಎಂಬಂತೆ, ನಮ್ಮ ಅ(ನ)ರ್ಥ ಮಂತ್ರಿ ಚಿದಂಬರಜೀ 'ಏನೂ ಭಯ ಪಡಬೇಡಿ' ಅಂತ ಅಭಯ ನೀಡುತ್ತಿದ್ದಾರೆ. ಇನ್ನು ಭಯಪಡುವುದೇನಿದೆ? ಏನೇನು ಅನಾಹುತಗಳಾಗಬಹುದೋ ಎಂದು ಭಯಪಡುತ್ತಿದ್ದೆವಲ್ಲ, ಅವೆಲ್ಲ ಆಗುತ್ತಿವೆ. 'ಇರುಳು ಕಂಡ ಭಾವಿಯಲ್ಲಿ ಹಗಲಲ್ಲೇ ಬಿದ್ದಾಗಿದೆ'. 'ನೀರಿಗೆ ಬಿದ್ದಮೇಲೆ ಮಳೆಯೇನು ಚಳಿಯೇನು?' 'ಈಸಬೇಕು ಇದ್ದು ಜಯಿಸಬೇಕು' ಅಲ್ಲವೇ?

❖ ❖ ❖

ಬುದ್ಧಿಜೀವಿಗಳನ್ನು ಫಿನಿಷ್ ಮಾಡಬೇಕು ಎಂದು ಉನ್ನತ ಶಿಕ್ಷಣ ಸಚಿವರು ಅಪ್ಪಣೆ ಕೊಡಿಸಿದ್ದಾರಂತೆ. ರಾಮ ರಾಮ, ಎಂಥಾ ಉನ್ನತ ಶಿಕ್ಷಣವನ್ನು ಪಡೆದಿದ್ದಾರೆ ನಮ್ಮ ಸಚಿವರು. ಇಂಥ ಉನ್ನತ ಶಿಕ್ಷಣವನ್ನು ಪಡೆದಿರುವ ತಾವುಗಳು ಬುದ್ಧಿಯಿಲ್ಲದ ಜೀವಿಗಳು ಎಂದು ಯಾಕೆ ಅಂದುಕೊಳ್ಳುತ್ತೀರಿ ಗೌಡರೇ? ಬುದ್ಧಿ ಇರುವ ಜೀವಿಗಳೆಲ್ಲ ಬುದ್ಧಿ ಜೀವಿಗಳೇ ಅಲ್ಲವೇ? (ನಿಮ್ಮಗಳ ಪ್ರಳಯಾಂತಕ ಬುದ್ಧಿಯ ಮುಂದೆ ನೀವು ಹೇಳುವ ಬುದ್ಧಿಜೀವಿಗಳ ಬುದ್ಧಿ ಏನೂ ಅಲ್ಲ ಬಿಡಿ) ಬುದ್ಧಿಜೀವಿಗಳನ್ನೆಲ್ಲ ಫಿನಿಷ್ ಮಾಡುವುದಾದರೆ ನಿಮ್ಮಗತಿ? ಇನ್ನು ನಿಮ್ಮಿಂದ ಉಳಿಯಬೇಕಾದವರು 'ಇವರು ಬುದ್ಧಿ ಇಲ್ಲದ ಜೀವಿ' ಎಂದು ತಮ್ಮಿಂದ ಪಡೆದ ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾ ಹಿಟ್ಲರ್ ಗೌಡರೇ?



❖ ❖ ❖

'ನಂಬಿಸಿ ಕೊರಳು ಕುಯ್ದರು', ಎಂದು ಶಿವಮೊಗ್ಗದ ಬಿ.ಹೆಚ್. ರಸ್ತೆ ವ್ಯಾಪಾರಿಗಳು ದು:ಖಿಸಿದ್ದಾರೆ. 'ಕುರಿಗಳು ಸಾರ್ ಕುರಿಗಳು', ನಂಬುವುದಿಲ್ಲವೇ ಕುರಿಗಳು ಕಾಯುವವನನ್ನು? ನಂಬದೇ ಓಡಿದರೆ ಕೊರಳು ಕುಯ್ಯುವುದಾರೂ ಹೇಗೆ? ಕುರಿಗಳ ಬಲಿ ಹಬ್ಬದ ದಿನವೇ ಅಲ್ಲವೇ? ಅಂತೆಯೇ ಆಯುಧ ಪೂಜೆ, ವಿಜಯದಶಮಿ ಹಬ್ಬಗಳ ದಿನ ಸರ್ಕಾರ ಹಾಗೂ ಜಿಲ್ಲಾಡಳಿತಗಳ ಭೀಕರ ಧಾಳಿಗೆ ಶಿವಮೊಗ್ಗ ನಗರದ ಬಿ.ಹೆಚ್. ರಸ್ತೆಯ ಕಟ್ಟಡಗಳು ಧ್ವಂಸ! ವಿಜಯೋತ್ಸವ?!. ಹಿಂದೂ (?) ಸರ್ಕಾರದಲ್ಲಿ ಹಿಂದೂ ಹಬ್ಬದ ದಿನವೇ ದೇವಸ್ಥಾನದ ಸಮೇತ ಎಲ್ಲವನ್ನೂ ಕೆಡವುವ ದುರಂತದ ಸಂಭ್ರಮ! ಇದೇ ಕೆಲಸವನ್ನು ಬೇರೆ ಯಾರಾದರೂ ಮಾಡಿದಿದ್ದರೆ, ಇಷ್ಟೊತ್ತಿಗೆ ರಾಜ್ಯದಾದ್ಯಂತ ಆಕಾಶ ಭೂಮಿ ಒಂದಾಗುವಂತೆ ನೆಗೆದಾಡುತ್ತಿದ್ದರೇನೋ ಸ್ವಯಂ ಘೋಷಿತ ಹಿಂದೂ ರಕ್ಷಕರು?

❖ ❖ ❖

ಅತ್ತ ಬಾಬಾಬುಡನ್ ಗಿರಿಯಲ್ಲಿ ಭಜರಂಗದಳ, ಶ್ರೀ ರಾಮಸೇನೆಯವರು , ಜೆಡಿಎಸ್, ಕಾಂಗ್ರೇಸ್ ಸರ್ಕಾರಗಳೇ ವಾಸಿ, ಈ ಹಿಂದೂ(?) ಸರ್ಕಾರ ನಮಗೆ ಪಾದುಕೆ ದರ್ಶನಕ್ಕೆ ಅವಕಾಶ ಕೊಡಲಿಲ್ಲ. ನಮ್ಮ ನಾಯಕರನ್ನು ಒಳಗೆ ಹಾಕಿದ್ದಾರೆ. ಅಂತ ಅವಲತ್ತು ಕೊಂಡಿದ್ದಾರೆ . ಹೇಳಿ ಕೇಳಿ ನಿಮ್ಮ ಹೆಸರೇ ಭಜರಂಗದಳ, ಶ್ರೀರಾಮ ಸೇನೆ. ಅರ್ಥಾತ್ ಕಪಿ ಸೈನ್ಯ. ಯುದ್ಧಕಾಲದಲ್ಲಿ ಮಾತ್ರ ಕಣ್ರೀ ರಾಮ ಕಪಿಸೈನ್ಯದ ಸಹಾಯ ಪಡೆಯುವುದು. ಯುದ್ಧ ಮಾಡಿದ ವೀರರು ಅಂತ ಅರಮನೆ ಒಳಗೆ ಕಪಿಗಳನ್ನು ಬಿಟ್ಕೋತಾರೇನ್ರೀ? ಅವರ ಆಜ್ಞೆಯಂತೆ ಧ್ವಂಸ ಮಾಡುವುದಷ್ಟೇ ನಿಮ್ಮ ಕೆಲಸ. ಹೀಗೆಲ್ಲ ರಾಮ ರಾಜ್ಯವನ್ನು ನೀವು ಪ್ರಶ್ನೆ ಮಾಡಬಾರದು. ಪ್ರಶ್ನೆ ಮಾಡುವವರೆಲ್ಲ ಬುದ್ಧಿಜೀವಿಗಳು ಎನ್ನಿಸಿಕೊಳ್ಳುತ್ತಾರೆ . ಗೊತ್ತಲ್ಲ, ರಾಮ (ಚಂದ್ರೇ ಗೌಡರ) ರಾಜ್ಯದಲ್ಲಿ ಬುದ್ಧಿಜೀವಿಗಳು ಫಿನಿಷ್! ಬೀ ಕೇರ್ ಫುಲ್!

❖ ❖ ❖

ವಿರೋಧ ಪಕ್ಷದವರನ್ನು ಕಾಡು ಪ್ರಾಣಿಗಳು ಎಂದು ಕರೆದದಕ್ಕೋ ಏನೋ ಸನ್ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ನಡೆದ ವನ್ಯಜೀವಿಗಳ ಸಪ್ತಾಹದ ಸಮಾರೋಪ ಸಮಾರಂಭಕ್ಕೆ ಹೋಗಲೇ ಇಲ್ಲ. ವನ್ಯ ಜೀವಿಗಳನ್ನು ನೋಡಿದರೆ ವಿರೋಧ ಪಕ್ಷದವರನ್ನು ನೋಡಿದ ಹಾಗೆ ಆಗುತ್ತದೆ ಎಂದೋ ಏನೋ?

❖ ❖ ❖

ಕಾರು ತರಲಾರದವರು ಹುಬ್ಬಳ್ಳಿಗೆ ರೈಲು ತರಲು ಹೊರಟಿದ್ದಾರೆ. ಮೋಡ ಬಂದಾಗ ವಿದ್ಯುತ್ ಕೊರತೆ ಇಲ್ಲ ಅನ್ನೋದು, ಬಿಸಿಲು ಬಂದಾಕ್ಷಣ ಅನಿರ್ದಿಷ್ಟ ವಿದ್ಯುತ್ ಕಡಿತ. ಅನ್ನೋರು ಈಗ ಕೈಗಾರಿಕೆಗಳಿಗೆ ವಾರದಲ್ಲಿ ಒಂದು ದಿನ ವಿದ್ಯುತ್ ಕಡಿತ ಅನ್ನೋ ಹೊಸ ರಾಗ ಹಾಡುತ್ತಿದ್ದಾರೆ . ಇಂಥ ಪರಿಸ್ಥಿತಿಯಲ್ಲಿ ಕಾರು ರೈಲು ತರೋದು ಬೇಡ, ಇರೋದು ಉಳಿಸಿಕೊಳ್ರೀ ಸಾಕು!

❖ ❖ ❖

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಹೇಂದ್ರ ದರ್ಬಾರು

ಐಶಾರಾಮಿ ಹೋಟೇಲಿನಿಂಗ ಜೈಲಿಗೆ

ಮಾಂಸದೂಟ, ಗಾಂಜಾ, ಲಿಕ್ಕರ್, ಸಿಗರೇಟು ಸಪ್ಲಾಯ್

ಎರಡೆರಡು ಮೊಬೈಲ್ ಬಳಕೆ

ಮಂಗಳೂರು : ಮಂಗಳೂರು ಸಬ್ ಜೈಲಿನಲ್ಲಿರುವ ಬಜರಂಗದಳದ ರಾಜ್ಯ ಸಂಚಾಲಕ ಮಹೇಂದ್ರಕುಮಾರ್ ಎಲ್ಲಾ ರೀತಿಯ ಐಶಾರಾಮಿ ವೈಭೋಗಗಳನ್ನು ಅನುಭವಿಸುತ್ತಿದ್ದಾನೆ. ಜೈಲನ್ನೇ ಬಜರಂಗದಳದ ಕಚೇರಿಯನ್ನಾಗಿ ಪರಿವರ್ತಿಸಿರುವ ಈತ ಯಾವ ರಾಜಕಾರಣಿಯೂ ಕಚೇರಿಯಲ್ಲಿದ್ದುಕೊಂಡು ನೀಡಲಾಗದಷ್ಟು ಪತ್ರಿಕಾ ಹೇಳಿಕೆಗಳನ್ನು ನೀಡಿ ಪ್ರಚಾರದ ತೀಟೆ ತೀರಿಸಿಕೊಳ್ಳುತ್ತಿದ್ದಾನೆ.

ಕ್ರೈಸ್ತ ಪ್ರಾರ್ಥನಾ ಮಂದಿರಗಳಿಗೆ ದಾಳಿ ನಡೆಸಿ ಅದನ್ನು ಬಹಿರಂಗವಾಗಿ ಸಮರ್ಥಿಸಿಕೊಂಡು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಅರಾಜಕತೆಯನ್ನು ಪ್ರದರ್ಶಿಸಿದ್ದ ಮಹೇಂದ್ರಕುಮಾರನನ್ನು ಕೇಂದ್ರ ಸರಕಾರದ ಒತ್ತಡದ ಮೇರೆಗೆ ಬಂಧಿಸಲಾಗಿತ್ತು. ಬಂಧನ ಒಂದು ರಾಜಕೀಯ ಪ್ರಹಸನವೆಂಬಂತೆ ಕಂಡುಬಂದಿದ್ದು ಮಹೇಂದ್ರ ಕುಮಾರ ಜೈಲನ್ನೇ ಐಶಾರಾಮಿ ಹೊಟೇಲಾಗಿ ಪರಿವರ್ತಿಸಿದ್ದಾನೆ.

ಜೈಲಿನೊಳಗಿಂದಲೇ ಪತ್ರಿಕಾ ಹೇಳಿಕೆ ನೀಡುತ್ತಿರುವ ಮಹೇಂದ್ರಕುಮಾರ ಜೈಲಿನಲ್ಲಿಯೇ ಬಜರಂಗದಳದ ಕಚೇರಿಯನ್ನು ತೆರೆದಿದ್ದಾನೆಯೇ ಎಂಬ ಅನುಮಾನ ಮೂಡುವಂತಿದೆ. ಯಾವಾಗ ಬೇಕಾದರೂ ಪತ್ರಿಕಾ ಸಂವಾದ ನಡೆಸುವ ಈತ ಜೈಲಿನಲ್ಲಿ ಎರಡೆರಡು ಮೊಬೈಲ್‌ಗಳ ಬಳಕೆ ಮಾಡುತ್ತಿದ್ದಾನೆ. ನಿನ್ನೆ ಜೈಲಿನೊಳಗಿಂದಲೇ ಸಹಿ ಮಾಡಿದ ಟೈಪ್ ಸೆಟ್ ಮಾಡಿದ ಹೇಳಿಕೆಯಲ್ಲಿ ತನ್ನ ಮೊಬೈಲ್ ನಂಬರ್ ಕೂಡಾ ನಮೂದಿಸಿದ್ದಾನೆ.

ಜೈಲಿನಲ್ಲಿ ಇನ್ನಿತರ ಕೈದಿಗಳಿಂದ ತನ್ನ ಆರೈಕೆಯನ್ನು ಮಾಡಿಸಿಕೊಳ್ಳುತ್ತಿರುವ ಮಹೇಂದ್ರಕುಮಾರ ಜೈಲಿನಲ್ಲಿರುವ ಬಜರಂಗಿ ಗೂಂಡಾ ಪಡೆಯನ್ನೇ ಹೊಂದಿದ್ದಾನೆ. ಧರ್ಮ ಯಾವುದಾದರೂ ಸರಿ, ಖೈದಿಗಳು ಮಹೇಂದ್ರನ ಬಟ್ಟೆಯನ್ನು ದಿನಕ್ಕೊಬ್ಬರು ಒಗೆಯಬೇಕು. ಹಾಗೇನಾದರೂ ಯಾರಾದರೂ ಅದನ್ನು ವಿರೋಧಿಸಿದರೆ ಆತನಿಗೆ ಗೂಸಾ ಬೀಳುತ್ತದೆ. ಕೆಲವು ದಿನಗಳ ಹಿಂದೆ ಉಳ್ಳಾಲದ ಜಲಾಲುದ್ದೀನ್ ಎಂಬಾತ ಮಹೇಂದ್ರಕುಮಾರನ ವೈಯಕ್ತಿಕ ಕೆಲಸಗಳನ್ನು ನಿರ್ವಹಿಸಲು ಒಪ್ಪದೇ ಇದ್ದಾಗ ಪೆಟ್ಟು ತಿಂದು ಆಸ್ಪತ್ರೆ ಸೇರಿದ್ದ.

ಮಂಗಳೂರು ಸಬ್ ಜೈಲಿನಲ್ಲಿರುವ ಬಜರಂಗಿ ಕೈದಿಗಳಿಗೆ ಈಗ ಶುಕ್ರದೆಸೆ. ಇದೀಗ ಜೈಲಿನೊಳಗೆ ನಿರಾತಂಕವಾಗಿ ಗಾಂಜಾ ಮತ್ತು ಲಿಕ್ಕರ್ ಸರಬರಾಜಾಗುತ್ತಿದೆ. ಮಹೇಂದ್ರನ



ಅಭಿಮಾನಿಗಳಿಂದ ದಿನಾ ಮಾಂಸದೂಟ ಜೈಲಿಗೆ ಬರುತ್ತದೆ. ಸಿಗರೇಟು ಮತ್ತಿತರ ವಸ್ತುಗಳು ಪೊಲೀಸರಿಂದ ಯಾವುದೇ ತಪಾಸಣೆಗೊಳಗಾಗದೇ ಜೈಲಿನೊಳಗೆ ಹೋಗುತ್ತಿದೆ.

ಇಂತಹ ಐಶಾರಾಮಿ ಜೈಲಿ ಗಾಗಿಯೇ ಇಲ್ಲಿ ಜಾಮೀನು ದೊರೆ ತರೂ, ಬೇರೆ ಠಾಣೆ ಗಳಿಂದ ಬಾಡಿ ವಾರಂಟ್ ಇರುವುದ ರಿಂದ ಮಂಗಳೂರು ಜೈಲಿನಿಂದ ಮಹೇಂದ್ರ ಕದಲುತ್ತಿಲ್ಲ.

ಸುದ್ದಿಬಿಂಬ

ಚಿಕ್ಕಮಗಳೂರು ಜೈಲಿಗೆ ವರ್ಗಾವಣೆ ಗೊಂಡರೆ ಅಲ್ಲಿರುವ ಸ್ಥಳೀಯ ಪೊಲೀಸರು ತನ್ನ ಹಣೆಬರಹವನ್ನು ಚೆನ್ನಾಗಿ ಬಲ್ಲವರಾದ್ದರಿಂದ ಇಷ್ಟು ಚೆನ್ನಾಗಿ ನೋಡಿಕೊಳ್ಳಲಿಕ್ಕಿಲ್ಲ ಮತ್ತು ಶಾಸಕ ಜೀವರಾಜ್ ಕೂಡಾ ಸಾಧ್ಯವಾದಷ್ಟು ಅಧಿಕಾರ ಬಳಸಿ ತನ್ನನ್ನು ಬೆಂಡೆತ್ತಬಹುದು ಎಂಬ ಭಯದಿಂದ ಮಂಗಳೂರು ಸಬ್ ಜೈಲಿನಿಂದ ಹೊರಹೋಗಲು ಈತನಿಗೆ ಮನಸ್ಸಾಗುತ್ತಿಲ್ಲ ಎನ್ನಲಾಗಿದೆ.

ಪ್ರಕಟವಾಗದ್ದು

ಇದು 03.10.2008 ರ 'ಕರಾವಳಿ ಅಲೆ' ಪತ್ರಿಕೆಯಲ್ಲಿ ಕಂಡು ಬಂದ ಸುದ್ದಿ. ಈ ಸುದ್ದಿ ಓದಿದ ಮೇಲೆ ಹೆಚ್ಚಿನ ವಿವರಣೆಯೇನು ಓದುಗರಿಗೆ ಅಗತ್ಯವಿಲ್ಲ. ಆದರೆ ಇಲ್ಲಿ ಪ್ರಕಟವಾಗದ ಮತ್ತೊಂದು ಮಾಹಿತಿಇದೆ. ಅದೇನೆಂದರೆ ಈ ಭಜರಂಗದಳದ ಈ ವೀರ ಚರ್ಚುಗಳ ಮೇಲೆ ನಾವೇ ದಾಳಿ ನಡೆಸಿದ್ದು ಅಂತ ಹೇಳಿದ್ದಕ್ಕೂ, ಚರ್ಚುಗಳ ಮೇಲೆ ದಾಳಿ ನಡೆಸಿದವರನ್ನು ಬಂಧಿಸಿ ಬಜರಂಗದಳವನ್ನು ನಿಷೇಧಿಸಿ ಅಂತ ಒತ್ತಡ ಹೆಚ್ಚಿದ್ದಕ್ಕೂ, ಕೇಂದ್ರ ಸರ್ಕಾರವು ಭಜರಂಗದಳವನ್ನು ನಿಷೇಧಿಸಲು ಚಿಂತಿಸುತ್ತಿದೆ. ಸಾಕ್ಷ್ಯಾಧಾರ ಸಂಗ್ರಹಿಸುತ್ತಿದೆ ಎಂಬ ವರದಿಗಳು ಬರುವುದಕ್ಕೂ ಒಂದೇ ಆಯ್ತು. ಕ್ರಮ ವಹಿಸಲೇ ಬೇಕಾಗಿ ಬಂದ ಸರ್ಕಾರ ಮಹೇಶ್ ಬಂಧನಕ್ಕೇನೋ ಕ್ರಮ ವಹಿಸಿತು. ಆದರೆ ಈ ನಡುವೆ ಮತ್ತೊಂದು ತಂತ್ರವೂ ನಡೆಯಿತು. ಚರ್ಚ್‌ಗಳ ಮೇಲೆ ದಾಳಿ ಮಾಡಿದ್ದು ನಾವೇ ಎಂದು ನಾವು ಹೇಳಿಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿದೆ ಅಂತ ಮಹೇಂದ್ರ ಸರ್ಕಾರಕ್ಕೆ ಒಂದು ಫ್ಯಾಕ್ಸ್ ಕಳಿಸಿದ್ದಾರೆ. ಅದು ಮಹೇಂದ್ರ ಕಳಿಸಿದ್ದೋ ಅಥವಾ ಮಹೇಂದ್ರ, ಭಜರಂಗದಳದ ರಕ್ಷಣೆಗೆ ನಿಂತಿರುವ ಸರ್ಕಾರ ತರಿಸಿಕೊಂಡದ್ದೋ ನಿಮ್ಮ ಊಹೆಗೆ ಬಿಟ್ಟಿದ್ದು.

ಭೂ ಒತ್ತುವರಿ ತೆರವು ಕಾರ್ಯಾಚರಣೆ ಸದ್ದಿಲ್ಲದೆ ಸ್ಥಗಿತ

ಇದು 'ಪ್ರಜಾವಾಣಿ' ಯಲ್ಲಿ ಕಂಡ ಸುದ್ದಿ

ರಾಜ್ಯದ ಗಮನವನ್ನೇ ಸೆಳೆದಿದ್ದ ಉದ್ಯಾನ ನಗರಿ ವ್ಯಾಪ್ತಿಯ ಸರ್ಕಾರಿ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆ ಸದ್ದಿಲ್ಲದೇ ಸ್ಥಗಿತಗೊಂಡಿದೆ. ಈ ಉದ್ದೇಶಕ್ಕಾಗಿಯೇ ಪ್ರಕಟಿಸಲಾದ ಸರ್ಕಾರಿ ಜಮೀನುಗಳ ನಿಗಮ ಕಾರ್ಯಾರಂಭ ಮಾಡುವ ಮುನ್ನವೇ, ಒತ್ತುವರಿ ತೆರವು ಜಾರಿದಳ ದುರ್ಬಲಗೊಂಡಿರುವುದು ಅಚ್ಚರಿಗೆ ಕಾರಣವಾಗಿದೆ.

ನಗರದಲ್ಲಿ ಸುಮಾರು 40,000 ಎಕರೆಗೂ ಹೆಚ್ಚು ಸರ್ಕಾರಿ ಭೂಮಿ ಭೂಗಳ್ಳರ ವಶವಾಗಿದೆ ಎಂಬ ಅಂಶವನ್ನು ಹಿಂದಿನ ಸರ್ಕಾರ ನೇಮಿಸಿದ್ದ ಜಂಟಿ ಸದನ ಸಮಿತಿ ಪತ್ತೆ ಹಚ್ಚಿತ್ತು. ಭೂ ಕಬಳಿಕೆಯಲ್ಲಿ ಭಾಗಿಯಾದ ಆರೋಪಿಗಳ ಪಟ್ಟಿಯನ್ನು ವಿಧಾನಸಭೆಯ ಅಧ್ಯಕ್ಷರಿಗೆ ಸಲ್ಲಿಸಿದ್ದ ಸಮಿತಿಯ ಅಧ್ಯಕ್ಷರಾಗಿದ್ದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ಒತ್ತುವರಿ ತೆರವಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದ್ದರು.

ಬೆಂಗಳೂರು ನಗರ ಜಿಲ್ಲಾಡಳಿತದ ವ್ಯಾಪ್ತಿಯಲ್ಲಿ 'ಒತ್ತುವರಿ ತೆರವು ವಿಶೇಷ ಜಾರಿದಳ'ವನ್ನು ಸ್ಥಾಪಿಸಿದ್ದ ಸರ್ಕಾರ, ಭೂಮಿಯ ಸರ್ವೆ ಕಾರ್ಯ, ತನಿಖೆ, ಒತ್ತುವರಿ ತೆರವು ಮತ್ತಿತರ ಜವಾಬ್ದಾರಿಯನ್ನು ವಹಿಸಿತ್ತು. ಆರಂಭದಲ್ಲಿ ಜಂಟಿ ಸದನ ಸಮಿತಿಯ ಸೂಚನೆ ಮೇರೆಗೆ ಕ್ಷಿಪ್ರ ಗತಿಯಲ್ಲಿ ಕಾರ್ಯಾಚರಣೆ ನಡೆಸಿದ್ದ ಜಾರಿದಳ, 9,000 ಎಕರೆಗೂ ಹೆಚ್ಚು ಭೂಮಿಯನ್ನು ಒತ್ತುವರಿದಾರರಿಂದ ವಶಕ್ಕೆ ಪಡೆದಿತ್ತು.

ಆದರೆ ಜೆಡಿ(ಎಸ್) ಬಿಜೆಪಿ ಸಮ್ಮಿಶ್ರ ಸರ್ಕಾರ ಪತನಗೊಳ್ಳುತ್ತಿದ್ದಂತೆ ಒತ್ತುವರಿ ತೆರವು ಕಾರ್ಯಾಚರಣೆ ನಿಧಾನಗತಿಯತ್ತ ಮುಖ ಮಾಡಿತ್ತು. ನಂತರದ ದಿನಗಳಲ್ಲಿ ಅಲ್ಪ ಪ್ರಮಾಣದ ಭೂಮಿಯನ್ನಷ್ಟೇ ಅತಿಕ್ರಮಣದಾರರಿಂದ ವಶಕ್ಕೆ ಪಡೆಯಲಾಗಿದೆ.

ಬಿಜೆಪಿ ಸರ್ಕಾರ ತನ್ನ ಮೊದಲ ಬಜೆಟ್‌ನಲ್ಲೇ, ಸರ್ಕಾರಿ ಭೂಮಿ ಒತ್ತುವರಿ ತೆರವು ಮತ್ತು ಮಾರಾಟಕ್ಕಾಗಿ ಪ್ರತ್ಯೇಕ ನಿಗಮ ಸ್ಥಾಪನೆಯ ಘೋಷಣೆ ಹೊರಡಿಸಿತ್ತು. ಅದರ ರೂಪುರೇಷೆಗಳ ತಯಾರಿಯಲ್ಲೇ ಕಾಲ ದೂಡುತ್ತಿರುವ ಸರ್ಕಾರ, ಈಗ ಜಾರಿದಳದ ಮುಖ್ಯಸ್ಥರನ್ನೇ (ವಿಶೇಷ ಜಿಲ್ಲಾಧಿಕಾರಿ) ವರ್ಗಾವಣೆ ಮಾಡಿದೆ. ಈ ಹುದ್ದೆಗೆ ಯಾರನ್ನೂ ನೇಮಿಸದೇ ಇರುವುದರಿಂದ ಒತ್ತುವರಿ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿದೆ.

ಪುಟ 3 ರಿಂದ

ಈ ವಾರ.....

ನಡೆಸಿದ ಮಸಲತ್ತುಗಳನ್ನು ನ್ಯಾಯಾಲಯ ಗುರುತಿಸಿದೆ. ಸದ್ಯಕ್ಕೆ ಸರ್ಕಾರ ತನ್ನ ವಾದ ಮಂಡಿಸಲು ಆದೇಶಿಸಿದೆ. ಈಗಲಾದರೂ ಯಡಿಯೂರಪ್ಪನವರ ಗ್ಯಾಂಗ್ ಎಚ್ಚೆತ್ತುಕೊಂಡು ದುಷ್ಟ ಕಾರಸ್ತಾನ ನಿಲ್ಲಿಸುವರೇ? ಅಂತೂ ನ್ಯಾಯಾಲಯದ ಆದೇಶ ಆಶಾದಾಯಕ.

ದಲಿತರ ಮೇಲೆ ಬಿಜೆಪಿ ಸಮರ

ಕಳೆದ ಸೆಪ್ಟೆಂಬರ್ 28 ರಂದು ಕೋಲಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂಬ ಕಾರಣ ಹೇಳಿ ಇಬ್ಬರು ಸರ್ಕಾರಿ ಶಿಕ್ಷಕರನ್ನು ಜಿಲ್ಲಾಧಿಕಾರಿ ಸಸ್ಪೆಂಡ್ ಮಾಡಿದ್ದಾರೆ. ಇವರು ದಲಿತರು, ದಲಿತ ಕ್ರಿಶ್ಚಿಯನ್ನರು ಮಾಡಿದ ಅಪರಾಧವೆಂದರೆ ಕೋಲಾರದ ಚರ್ಚ್ ಮೇಲಿನ ಧಾಳಿ ಖಂಡಿಸಿ ವಿವಿಧ ಪ್ರಗತಿಪರ ಸಂಘಟನೆಗಳು, ಪಕ್ಷಗಳಿಂದ ನಡೆದ ಪ್ರತಿಭಟನಾ ರ್‍ಯಾಲಿಯಲ್ಲಿ ಅವರು ಭಾಗವಹಿಸಿದ್ದರು ಎಂಬುದು. ಈ ರ್‍ಯಾಲಿಯಲ್ಲಿ ನಾನೂ ಬಾಗವಹಿಸಿದ್ದೆ. ಅಲ್ಲಿನ ಪ್ರತಿಭಟನೆ ಶಾಂತಿಯುತವಾಗಿ, ತಾತ್ವಿಕ ಆಕ್ರೋಶ, ಅಳಲು ವ್ಯಕ್ತಪಡಿಸಿದ ರ್‍ಯಾಲಿಯಾಗಿತ್ತಷ್ಟೆ.

ಈಗ ಜಿಲ್ಲಾಧಿಕಾರಿ ಶ್ರೀನಿವಾಸ್ ಅವರು ಕಾನೂನು ಗಾಳಿಗೆ ತೂರಿದ್ದಾರೆ ಎಂದು ನೀಡುತ್ತಿರುವ ವಿವರಣೆ ಬಾಲಿಷ: ತನ್ನ ಧಾರ್ಮಿಕ ಸ್ವಾತಂತ್ರ್ಯ ಆಯ್ಕೆಯ ಮೇಲೆ ದಾಳಿ ನಡೆದಾಗ, ಮೂಲಭೂತ ಹಕ್ಕಿನ ಮೇಲಿನ ದಾಳಿಯಾಗಿರುವಾಗ ಪ್ರತಿಭಟಿಸುವುದು ಅವರ ಮೂಲಭೂತ ಈ ಹಕ್ಕನ್ನು ನಿರ್ಭಂಧಿಸಲು ಸಾಧ್ಯವಿಲ್ಲ. ಇಲ್ಲಿ ಪ್ರಸ್ತಾಪಿಸಬೇಕಾದ ವಿಷಯವೆಂದರೆ ಇದೇ ಜಿಲ್ಲಾಧಿಕಾರಿ ಶ್ರೀನಿವಾಸ್ ಹಾಗೂ ಎಸ್.ಪಿ.ವಿಪುಲ್‌ಕುಮಾರ್‌ರವರು ರ್‍ಯಾಲಿ ನಡೆಸದಂತೆ ತಡೆಯಲು ಸರ್ವಯತ್ನ ಮಾಡಿದ್ದು ಇದಕ್ಕೆ ಕವಡೆ ಕಿಮ್ಮತ್ತು ಸಿಗದೇ ರ್‍ಯಾಲಿ ಯಶಸ್ವಿಯಾದದ್ದು ಕಣ್ಣುರಿ ತಂದಿದೆ. ಇಂತಹ ದಮನಕಾರಿ ವರ್ತನೆಗಳನ್ನು ಬದಲಾಯಿಸಿ ಕೊಳ್ಳಬೇಕು. ಇದಕ್ಕೆ ಹೋರಾಟಗಾರರು ಸೊಪ್ಪು ಹಾಕುವುದಿಲ್ಲ ಎಂಬುದನ್ನು ಅವರು ಅರಿಯಬೇಕು.

ಮುಖ್ಯವಾಗಿ ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಕೋಮುಗಲಭೆಗಳಲ್ಲಿ ಧಾಳಿಗಳಲ್ಲಿ ದಲಿತರನ್ನೇ ಗುರಿಯಾಗಿಸಿಕೊಂಡಿರುವುದು, ಅವರನ್ನು ಬಳಸುತ್ತಿರುವುದು ಎದ್ದುಕಾಣುವ ಅಂಶವಾಗಿದೆ. ಕೋಲಾರದಲ್ಲಿಯೂ ಅಮಾನತ್ತಿಗೊಳಗಾಗಿರುವ ಶಿಕ್ಷಕ ಬಂಗವಾದಿ ನಾರಾಯಣಪ್ಪ ದಲಿತರ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದವರು. ಈಗಲೂ ಬಿಜೆಪಿ ದಲಿತರ ವಿರುದ್ಧದ ತನ್ನ ಮನೋಭಾವವನ್ನೂ ಧಾಳಿ ನಡೆಸುವ ಮೂಲಕ ತೋರಿಸಿದೆ.

ಕೋಲಾರದಲ್ಲಿ ಸಾರ್ವತ್ರಿಕ ಮುಷ್ಕರದ ಸಂದರ್ಭದಲ್ಲಿಯೂ, ಟೊಮಾಟೋ ಬೆಳೆಗಾರರ ಹೋರಾಟದಲ್ಲಿಯೂ ಈಗಿನ ರ್‍ಯಾಲಿಯನ್ನು ಬಗ್ಗುಬಡಿಯಲು ಎಲ್ಲಾ ಪ್ರಕರಣಗಳಲ್ಲಿ ಮುತುವರ್ಜಿ ವಹಿಸುತ್ತಿರುವುದು ಮುಜರಾಯಿ, ವಸತಿ ಸಚಿವ ಕೃಷ್ಣಯ್ಯಶೆಟ್ಟಿಯೇ ಅಂದರೆ ರಾಜಕೀಯವಾಗಿಯೇ ಈ ಧಾಳಿಗಳನ್ನು ಆಡಳಿತ ಯಂತ್ರದ ಮೂಲಕ ನಡೆಸಲಾಗುತ್ತಿದೆ. ಇದನ್ನು ಸಂಘಟನಾತ್ಮಕವಾಗಿ ಅಷ್ಟೇ ಮುಖ್ಯವಾಗಿ ರಾಜಕೀಯವಾಗಿಯೂ ಎದುರಿಸಬೇಕಿದೆ. •

ಯಡವನಹಳ್ಳಿ ಚರ್ಚ್‌ಗೆ ಬೆಂಕಿ: ವಿದ್ಯುತ್ ಅಪಘಾತ ಅಲ್ಲ. ಕೋಮುವಾದಿ ದುಷ್ಕರ್ಮಿಗಳ ಕೈವಾಡ.

ಕಳೆದ ಭಾನುವಾರ ರಾತ್ರಿ ಆನೇಕಲ್ ತಾಲೂಕಿನ ಯಡವನಹಳ್ಳಿ ಸಂತ ಅಂತೋಣಿ ಚರ್ಚ್‌ನ ಮೇಲೆ ನಡೆದಿರುವ ದಾಳಿಯ ಹಿನ್ನೆಲೆಯಲ್ಲಿ ದಿನಾಂಕ 15.10.2008ರಂದು ಸಿಪಿಐ(ಎಂ)ನ ನಿಯೋಗ ಚರ್ಚ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ನಿಯೋಗದಲ್ಲಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಪ್ರಕಾಶ್.ಕೆ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ಮತ್ತು ಉಮೇಶ್.ಕೆ.ಎನ್, ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷರಾದ ಶಿವರಾಮರೆಡ್ಡಿ, ಆನೇಕಲ್ ತಾಲ್ಲೂಕು ಸಿಪಿಐ(ಎಂ) ಕಾರ್ಯದರ್ಶಿ ಮಹದೇಶ್, ಸಿಪಿಐ(ಎಂ) ತಾಲ್ಲೂಕು ಮುಖಂಡರಾದ ಮಂಜುನಾಥ್, ಬಜ್ಜಪ್ಪ, ಮತ್ತು ಸ್ಥಳೀಯರಾದ ಮುನಿಯಪ್ಪ, ಆರೋಗ್ಯಸ್ವಾಮಿ, ರವಿ, ಮುಂತಾದವರು ಇದ್ದರು.

ನಿಯೋಗವು ದಾಳಿಗೊಳಗಾದ ಚರ್ಚ್‌ನ್ನು ಪರಿಶೀಲಿಸಿತಲ್ಲದೆ ಯಡವನಹಳ್ಳಿ ಗ್ರಾಮಸ್ಥರ ಜೊತೆ ಚರ್ಚೆಗಳನ್ನು ನಡೆಸಿತು. ಹಾಗೆಯೇ ಡಿವೈಎಸ್‌ಪಿ ಶಂಕರಪ್ಪ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಪುರುಷೋತ್ತಮ್‌ರವರೊಂದಿಗೂ ಘಟನೆಯ ಕುರಿತು ಚರ್ಚಿಸಿತು.

ನಿಯೋಗ ಗಮನಿಸಿದ ಅಂಶಗಳು ಹೀಗಿವೆ :-

1. ಚರ್ಚ್‌ನ ಮೇಲೆ ದುಷ್ಕರ್ಮಿಗಳು ಉದ್ದೇಶಪೂರ್ವಕವಾಗಿ ಹಾಗೂ ಯೋಜಿತವಾಗಿ ದಾಳಿ ಮಾಡಿದ್ದಾರೆ ಹಾಗೂ ಬೆಂಕಿಯನ್ನಿಟ್ಟಿದ್ದಾರೆ ಎಂಬುದು ಒಟ್ಟಾರೆ ಗಮನಿಸಬಹುದು.
2. ವಿದ್ಯುತ್ ಷಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದು ಸುಳ್ಳು.
3. ವಿದ್ಯುತ್ ಷಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರಬಹುದಾದ ಯಾವ ಲಕ್ಷಣಗಳೂ ಅಲ್ಲಿಲ್ಲ. ಏಕೆಂದರೆ ಫ್ಯಾನ್, ಲೈಟ್, ಪ್ಲಗ್ ಪಾಯಿಂಟ್‌ಗಳಿಗೆ ವಿದ್ಯುತ್ ಸರಬರಾಜು ಇದೆ.
4. ಯಡವನಹಳ್ಳಿ ಗ್ರಾಮದಲ್ಲಿ ಪ್ರಸ್ತುತ ಚರ್ಚ್ 1955 ರಿಂದ ಅಸ್ತಿತ್ವದಲ್ಲಿದೆ. ಮತ್ತು 2005 ರಲ್ಲಿ ನವೀಕರಿಸಲಾಗಿದೆ. ಇಷ್ಟು ವರ್ಷಗಳ ಅವಧಿಯಲ್ಲಿ ಎಂದೂ ಇಂತಹ ಕೃತ್ಯ ಅಲ್ಲಿ ನಡೆದಿಲ್ಲ. ಜನರ ನಡುವೆ ಸಾಮರಸ್ಯವಿದೆ.

<u>ವಿದ್ಯುತ್ ಅಪಘಾತದಿಂದ ಚರ್ಚ್‌ಗೆ ಬೆಂಕಿ ಹೊತ್ತಿಕೊಂಡಿದೆ ಎಂಬ ಕತೆಯನ್ನು ಹುಟ್ಟು ಹಾಕಲಾಗಿದೆ. ಆದರೆ ವಾಸ್ತವವನ್ನು ಪರಿಶೀಲಿಸಿದರೆ ತೆರೆದುಕೊಳ್ಳುವ ಕತೆಯೇ ಬೇರೆ ಇದೆ. ಇದು ಹೊತ್ತಿಕೊಂಡ ಬೆಂಕಿಯಲ್ಲ. ಹಚ್ಚಲಾದ ಬೆಂಕಿ</u>

5. ಈಗಿನ ಘಟನೆಯು ಜನರ ನಡುವಿನ ಸಾಮರಸ್ಯವನ್ನು ಹಾಳುಗೆಡುವ ಉದ್ದೇಶದ್ದಾಗಿದೆ.
6. ಚರ್ಚ್‌ನ ವಾದ್ಯಗಳಾದ ಪಿಯಾನೋ, ಬ್ಯಾಂಗೋ, ಪವಿತ್ರ ಪ್ರಸಾದ, ಗರ್ಭಪೀಠಗಳ ಮೇಲೆ ಪ್ರಾರ್ಥನಾ ಗೀತೆಗಳ 'ಚೇತನ' ಎಂಬ ಪುಸ್ತಕಗಳನ್ನು ಇಟ್ಟು ಸುಟ್ಟಿರುವುದು ಎದ್ದು ಕಾಣುತ್ತದೆ. ಗರ್ಭಗುಡಿಯ ಹಿಂಬದಿಯಲ್ಲಿರುವ ಉಗ್ರಾಣದಲ್ಲಿರುವ ಎಲ್ಲ ವಸ್ತುಗಳೂ ಸುಟ್ಟು ಹೋಗಿವೆ. ಗೋಡೆಗಳೆಲ್ಲಾ ಕರಕಲಾಗಿವೆ.
7. ಇಷ್ಟೆಲ್ಲಾ ಆದರೂ ವಿದ್ಯುತ್ ವ್ಯವಸ್ಥೆಗೆ ಯಾವುದೇ ತೊಂದರೆಯಾಗಿಲ್ಲ ಮತ್ತು ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಷಾರ್ಟ್ ಸರ್ಕ್ಯೂಟ್ ಆಗಿದ್ದರೆ ಮತ್ತು ಆ ಪ್ರಮಾಣದ ಬೆಂಕಿಯ ನಂತರವೂ ವೈರಿಂಗ್ ಸಂಪೂರ್ಣವಾಗಿ ಹಾಳಾಗಬೇಕಿತ್ತು. ಆದರೆ ಆ ರೀತಿ ಏನೂ ಆಗಿಲ್ಲ. ಬೆಂಕಿಯನ್ನು ಉದ್ದೇಶಪೂರ್ವಕವಾಗಿ ಇಟ್ಟಿರುವುದು ಸ್ಪಷ್ಟವಾಗುತ್ತದೆ.
8. ರಾತ್ರಿ ಪಾಳಿಯಲ್ಲಿ 2 ಪೊಲೀಸರ ಕಾವಲನ್ನು ಹಾಕಲಾಗಿತ್ತು. ಒಬ್ಬರು ಮುಖ್ಯ ಪೇದೆ ಮತ್ತೊಬ್ಬರು ಪೇದೆ. ಇವರಿಗೆ ಚರ್ಚ್‌ನ ಬೀಗ ತೆಗೆದು ಒಳಗಿನ ಆಲಯದಲ್ಲಿ ಮಲಗಲು ಅವಕಾಶ ನೀಡಲಾಗಿತ್ತು. ಹಾಗಿರುವಾಗ ಹೊರಗಿನಿಂದ ದುಷ್ಕರ್ಮಿಗಳು ಬಂದು ಬೆಂಕಿ ಇಟ್ಟಿರುವುದರಿಂದ, ಆ ಸಮಯದಲ್ಲಿ ಪೊಲೀಸರು ಎಲ್ಲಿದ್ದರು? ಮತ್ತು ಏನು ಮಾಡುತ್ತಿದ್ದರು? ಎಂಬ ಅನುಮಾನ ಬರುತ್ತದೆ. ಕಾವಲಿದ್ದ ಪೊಲೀಸರು ಚರ್ಚ್‌ನ ಒಳಗೇ ಇದ್ದರು ಎಂದಾದರೆ ಇವರ ಗಮನಕ್ಕೆ ಬರದೆ ಬೆಂಕಿಯನ್ನು ದುಷ್ಕರ್ಮಿಗಳು ಹೇಗೆ ಇಟ್ಟರು? ಅಥವಾ ಹೊರಗೆ ಹೋಗಿದ್ದರೆ ಚರ್ಚ್‌ನ ಬಾಗಿಲಿಗೆ ಬೀಗ ಹಾಕದೆ ಯಾಕೆ ಹೋದರು? ಇವರು ಹೊರಗೆ ಹೋದಾಗ ಬೆಂಕಿ ಹಚ್ಚಲಾಗಿದ್ದರೆ ದುಷ್ಕರ್ಮಿಗಳಿಗೆ ಇವರು ಹೊರಗೆ ಹೋಗಿರುವ ವಿಚಾರ ಹೇಗೆ ತಿಳಿದಿತ್ತು? ಅಥವಾ ಪೊಲೀಸರನ್ನು ದುಷ್ಕರ್ಮಿಗಳು ದಾರಿತಪ್ಪಿಸಿದರೇ? ಪೋಲೀಸರದ್ದು ಏನಾದರೂ ಪಾತ್ರವಿದೆಯೇ ಎಂಬ ವಿಚಾರಗಳು ಸರಿಯಾಗಿ ತನಿಖೆಯಾಗಬೇಕಿದೆ.



9. ಬೆಂಕಿ ಹಚ್ಚಿರುವ ಸಾಧ್ಯತೆಗಳು ಇಷ್ಟು ಸ್ಪಷ್ಟವಾಗಿರುವಾಗ ವಿದ್ಯುತ್ ಷಾರ್ಟ್ ಸರ್ಕ್ಯೂಟ್ ವಾದ ಮುಂದುವರಿದಿರುವುದು, ತನಿಖೆಯಲ್ಲಿ ಬಿಜೆಪಿ ಸರ್ಕಾರ ಹಸ್ತಕ್ಷೇಪ ಮಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇಡೀ ಪ್ರಕರಣವನ್ನು ದಾರಿತಪ್ಪಿಸುವ ಹುನ್ನಾರವನ್ನು ಸರ್ಕಾರ ಮಾಡುತ್ತಿದೆ.
10. ಕೆಲ ದಿನಗಳ ಹಿಂದೆ ಮರಿಯಣ್ಣನಪಾಳ್ಯ ಹಾಗೂ ರಾಜರಾಜೇಶ್ವರಿನಗರದಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಬೆಂಗಳೂರು ಪೊಲೀಸ್ ಕಮೀಷನರ್ ಅವರು ನೀಡಿದ ಹೇಳಿಕೆಗಳು ಸಹ ಬಿಜೆಪಿ ಸರ್ಕಾರದ ಕೋಮುವಾದಿ ದಾಳಿಗಳನ್ನು ರಕ್ಷಿಸುವ ರೀತಿಯಲ್ಲೇ ಇದ್ದದ್ದನ್ನು ಗಮನಿಸಬಹುದು. ಈಗಲೂ ಇದೇ ರೀತಿಯಿದೆ.
11. ಇದರಿಂದ ತನಿಖೆಯ ದಿಕ್ಕು ಮತ್ತು ತೀವ್ರತೆ ಕಳೆದುಹೋಗುವ ಸಾಧ್ಯತೆಯಿದೆ.
12. ಕರ್ನಾಟಕವನ್ನು ಕೋಮುಗ್ರಸ್ತಗೊಳಿಸುವ ಮತ್ತು ಅಶಾಂತಿಯನ್ನು ಸೃಷ್ಟಿಸುವ ಸಂಘಪರಿವಾರದ ಅಜೆಂಡಾದ ಭಾಗವಾಗಿ ನಡೆಯುತ್ತಿರುವ ಇಂತಹ ದಾಳಿಗಳನ್ನು ಖಂಡನೀಯ. ಅಲ್ಪಸಂಖ್ಯಾತರಲ್ಲಿ ಅಭದ್ರತೆಯನ್ನು ಮತ್ತು ಭೀತಿಯನ್ನು ಮೂಡಿಸುವ ಇಂತಹ ದಾಳಿಗಳ ಹಿಂದಿರುವ ದುಷ್ಟಶಕ್ತಿಗಳನ್ನು ಹಿಡಿದು ತೀವ್ರವಾಗಿ ಶಿಕ್ಷಿಸಬೇಕಾಗಿದೆ. ಶಾಂತಿ ಮತ್ತು ಸಾಮರಸ್ಯಪ್ರಿಯ ಜನತೆ ಕೋಮುವಾದಿ ಭಯೋತ್ಪಾದಕರ ಕೃತ್ಯಗಳನ್ನು ಸೋಲಿಸಲು ಮುಂದಾಗಬೇಕು.

ನಿಯೋಗದಲ್ಲಿ

ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಪ್ರಕಾಶ್.ಕೆ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ಮತ್ತು ಉಮೇಶ್.ಕೆ.ಎನ್, ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷರಾದ ಶಿವರಾಮರೆಡ್ಡಿ, ಆನೇಕಲ್ ತಾಲ್ಲೂಕು ಸಿಪಿಐ(ಎಂ) ಕಾರ್ಯದರ್ಶಿ ಮಹದೇಶ್, ಸಿಪಿಐ(ಎಂ) ತಾಲ್ಲೂಕು ಮುಖಂಡರಾದ ಮಂಜುನಾಥ್, ಬಜ್ಜಪ್ಪ, ಮತ್ತು ಸ್ಥಳೀಯರಾದ ಮುನಿಯಪ್ಪ, ಆರೋಗ್ಯಸ್ವಾಮಿ, ರವಿ, ಮುಂತಾದವರು ಇದ್ದರು.

ಮಂಗಳೂರಿನಲ್ಲಿ ದಲಿತ ಚೈತನ್ಯ ಶಿಬಿರ

ಮಂಗಳೂರಿನಲ್ಲಿ ಈಗಾಗಲೇ ನಿರ್ದಿಷ್ಟ ಕಾರ್ಯಕ್ರಮದೊಂದಿಗೆ ದಲಿತ ಸಮುದಾಯದ ಮಧ್ಯೆ ಚಟುವಟಿಕೆಗಳನ್ನು ನಡೆಸುತ್ತಿರುವ ಸಿಪಿಐ(ಎಂ) ಮಂಗಳೂರು ನಗರಸಮಿತಿಯು ರೂಪಿಸಿದ ಶೇ. 18 ಸಮಗ್ರ ಅನುಷ್ಠಾನ ಸಮಿತಿಯು ಅಕ್ಟೋಬರ್ 5 ರಂದು ಆಯ್ದ ದಲಿತ ಕಾರ್ಯಕರ್ತರಿಗಾಗಿ ಒಂದು ದಿನದ ದಲಿತ ಚೈತನ್ಯ ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿತ್ತು.

ಶಿಬಿರದ ಉದ್ಘಾಟನೆಯನ್ನು ಸಿಪಿಐ(ಎಂ) ನಗರ ಸಮಿತಿಯ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್‌ರವರು ನೆರವೇರಿಸುತ್ತಾ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದಲಿತರ ಹಕ್ಕುಗಳ ರಕ್ಷಣೆಗಾಗಿ ಮತ್ತು ನಾಗರಿಕ ಸೌಲಭ್ಯಗಳನ್ನು ದೊರಕಿಸಿಕೊಡಲು ಪಕ್ಷ ಹೋರಾಟ ರೂಪಿಸಲಿದೆ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಕೊಂಚಾಡಿಯವರು ದಲಿತರ ಸಮುದಾಯವನ್ನು ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಹೊಸ ಆಯಾಮ ನೀಡಲು ಹಾಗೂ ಚೈತನ್ಯ ತುಂಬಿ ಕಾರ್ಯೋನ್ಮುಖರಾಗಲು ಈ ಶಿಬಿರವನ್ನು ಆಯೋಜಿಸಿರುವ ಬಗ್ಗೆ ತಿಳಿಸಿದರು. ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಮಿತಿಯ ಸಂಚಾಲಕರಾದ ವಾಸುದೇವ ಜೆ.ಪಿ. ವಹಿಸಿದ್ದು ಲಿಂಗಪ್ಪ ಸಂತೂರು ಸ್ವಾಗತಿಸಿದರೆ ದುಗ್ಗಪ್ಪ ಸುಂಕದಕಟ್ಟೆ ಇವರು ವಂದಿಸಿದರು.

ಅನಂತರ ನಡೆದ ಪ್ರಥಮ ಉಪನ್ಯಾಸವನ್ನು 'ಭಾರತದ ದಲಿತ ಚಳವಳಿ ಇತಿಹಾಸ ಮತ್ತು ಎಡಪಂಥೀಯರ ಹೋರಾಟಗಳು' ಎಂಬ ವಿಷಯದ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರು ನೀಡಿದರು. 'ಮಂಗಳೂರು ಮಹಾನಗರ ಪಾಲಿಕೆಯಲ್ಲಿ ದಲಿತರಿಗಿರುವ ಯೋಜನೆಗಳು ಮತ್ತು ಅದನ್ನು ಪಡೆಯುವ ಕ್ರಮ, ನಿಯಮಗಳು' ಎಂಬ ವಿಷಯದಲ್ಲಿ ಕೃಷ್ಣಪ್ಪ ಕೊಂಚಾಡಿಯವರು ಉಪನ್ಯಾಸ ನೀಡಿದರು.

ಶಿಬಿರದ ಸಮಾರೋಪ ಭಾಷಣವನ್ನು ಸಿಐಟಿಯು ಮುಖಂಡ ಕೆ.ಮಹಾಂತೇಶ ನೆರವೇರಿಸಿದರು. ವಿವಿಧ ತರಗತಿಗಳಿಗೆ ಪ್ರಾಂಶುಪಾಲರಾಗಿ ತಿಮ್ಮಪ್ಪ ಕಾವೂರು, ರಮೇಶ್ ಆರ್ಯಪಾಡಿ ಮತ್ತುಸಂಜೀವ ಬಳ್ಕೂರ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ದಲಿತರ ಮನೆ, ನಿವೇಶನ, ಹಕ್ಕುಪತ್ರ ಹಾಗೂ ಇನ್ನಿತರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟವನ್ನು ರೂಪಿಸಲು ನಿರ್ಧರಿಸಲಾಯಿತು. ಶಿಬಿರದಲ್ಲಿ ಆಯ್ದ 54 ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು.

ಅಕ್ಟೋಬರ್ 13ರಂದು ರಾಷ್ಟ್ರೀಯ ಸಮಗ್ರತಾ ಮಂಡಳಿ ಕೇವಲ ಮುಗಿಯದ ಭಾಷಣಗಳ ಒಂದು ವೇದಿಕೆಯಾಗಿಯೇ ಉಳಿಯಿತು. ಟೊಳ್ಳು ಮಾತುಗಳಿಂದ ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳುವ ಮತ್ತು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಬಲಪಡಿಸುವ ವಿಷಯದಲ್ಲಿ ಯಾವುದೇ ಪರಿಹಾರ ಸಾಧ್ಯವೇ?

ಮಾತುಗಳ ಸರಮಾಲೆ, ಕ್ರಿಯೆ ಮಾತ್ರ ಸೊನ್ನೆ

ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಅಕ್ಟೋಬರ್ 13ರಂದು ನಡೆಯಿತು. ಆದರೆ ಭಯೋತ್ಪಾದನೆಯನ್ನು ತಡೆಯುವ ಪ್ರಯತ್ನಗಳನ್ನು ಬಲಪಡಿಸುವುದರೊಂದಿಗೆ, ದೇಶದ ವಿವಿಧ ಭಾಗಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಕ್ರೈಸ್ತರ ಮೇಲೆ ಇನ್ನೂ ನಡೆಯುತ್ತಿರುವ ಅಮಾನುಷ ಕೋಮುವಾದಿ ಹಿಂಸಾಚಾರವನ್ನು ನಿಲ್ಲಿಸಲು ನಿರ್ದಿಷ್ಟ ಕ್ರಮಗಳನ್ನು ನಿರ್ಧರಿಸಲಾಗುವುದು ಎಂಬ ನಿರೀಕ್ಷೆ ಮಾತ್ರ ಈಡೇರಲಿಲ್ಲ. ಅದರ ಬದಲು ಕೇವಲ ಭಾಷಣಗಳ ಸರಮಾಲೆ, ಹಳಸಲು ಆಡಂಬರದ ಮಾತುಗಳು, ಕ್ರಿಯೆ ಮಾತ್ರ ಸೊನ್ನೆ.

ದೇಶದ ಸುವಾರಾಗಿ ಎಲ್ಲಾ



ಆಗ್ರಾದಲ್ಲಿ ಭಜರಂಗದಳದ ಶಸ್ತ್ರ ಪ್ರದರ್ಶನ-ಏನು ಕ್ರಮ ಈ ಕಾನೂನು ಭಂಜಕರ ಮೇಲೆ

ಮುಖ್ಯಮಂತ್ರಿಗಳು, ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರು, ಕೇಂದ್ರ ಸಂಪುಟದ ಬಹಳಷ್ಟು ಸದಸ್ಯರು, ಮಾಧ್ಯಮಗಳ ಪ್ರತಿಷ್ಠಿತರು ಮತ್ತು ಪ್ರತಿಷ್ಠಿತ ನಾಗರಿಕರ ಸಮ್ಮುಖ ಮಾತನಾಡುತ್ತ ಪ್ರಧಾನ ಮಂತ್ರಿಗಳು "ಬುದ್ಧಿಶೂನ್ಯ ಉಗ್ರಗಾಮಿತ್ವವನ್ನು ಅಗತ್ಯ ಬಲದಿಂದ" ಎದುರಿಸಬೇಕಾಗಿದೆ ಎಂದರು, ಇದರಲ್ಲಿ ವಿಚಾರ ಮತ್ತು ನ್ಯಾಯದಿಂದ ವರ್ತಿಸಬೇಕು ಎಂದು ಸೇರಿಸಿದರು. ಆದರೆ ಯಾವುದೇ ಕಾರ್ಯಾಚರಣೆಯ ಮೂರ್ತ ಕಾರ್ಯಕ್ರಮವಿಲ್ಲದೆ ಅದು ಕೇವಲ ಉನ್ನತ ಆಶಯವಾಗುಳಿಯಿತು. ಈ ಆಶಯಗಳನ್ನೇ ನಂತರ ಹಲವರು ಪುನರುಚ್ಚರಿಸಿದರು. ಆದ್ದರಿಂದ ಕೊನೆಗೆ ಯಾವ ಕ್ರಿಯೆಯೂ ಇಲ್ಲದ ಒಂದು ಘೋಷಣೆಯಷ್ಟೇ ಹೊರಬಂತು.

ಒರಿಸ್ಸಾ, ಕರ್ನಾಟಕ, ಮಧ್ಯಪ್ರದೇಶ ಮತ್ತು ದೇಶದ ಇತರೆಡೆ ಕ್ರೈಸ್ತ ಅಲ್ಪಸಂಖ್ಯಾತರ ಮೇಲಿನ ಧಾಳಿಗಳ ಸರಣಿಗಳಲ್ಲಿ ಭಜರಂಗ ದಳದ ಪಾತ್ರ ಸ್ವಯಂವೇದ್ಯ. ಸ್ವತಃ ಭಜರಂಗ ದಳ ಕೂಡಾ ಅದನ್ನು ನಿರಾಕರಿಸುತ್ತಿಲ್ಲ, ಬದಲಿಗೆ ಅವರ ಕೆಲವು ಹೇಳಿಕೆಗಳು ತಮ್ಮ ಕೃತ್ಯಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿವೆ. ಆದ್ದರಿಂದ ಸಹಜವಾಗಿಯೇ ಸಭೆಯಲ್ಲಿ ಮಾತನಾಡಿದ 40 ಭಾಷಣಕಾರರಲ್ಲಿ ಹಲವರು ಭಜರಂಗ ದಳದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕೋಮುವಾದಿ ಭಾವೋದ್ರೇಕಗಳನ್ನು ಬಡಿದೆಬ್ಬಿಸುವ ಎಲ್ಲಾ ಉಗ್ರಗಾಮಿ ಸಂಘಟನೆಗಳನ್ನು, ಅವು ಯಾವುದೇ ಧಾರ್ಮಿಕ ಪಂಥಕ್ಕೇ ಸೇರಿರಲಿ, ಸಮಾನವಾಗಿ ಪರಿಗಣಿಸಬೇಕು ಎಂಬ ಸ್ಪಷ್ಟ ಕರೆಯೂ ಬಂತು.

ರಾಗ ಬದಲಿಸಿದ ಬಿಜೆಪಿ ಮುಖಂಡರು

ಸ್ವಾಭಾವಿಕವಾಗಿಯೇ ಬಿಜೆಪಿ ಅಧ್ಯಕ್ಷರು ಮತ್ತು ಆ ಪಕ್ಷದ ವಿವಿಧ ಮುಖ್ಯಮಂತ್ರಿಗಳು ಭಜರಂಗ ದಳದ ಚಟುವಟಿಕೆಗಳನ್ನು ಸಮರ್ಥಿಸಿಕೊಳ್ಳಲಾರದೆ ಚರ್ಚೆಗಳನ್ನು ಕೇಸರಿ ಸಂಘಟನೆಗಳಿಂದ ಭಯೋತ್ಪಾದನೆಯನ್ನು ತಡೆಹಿಡಿಯುವತ್ತ ತಿರುಗಿಸಲು ಪ್ರಯತ್ನ ಮಾಡಿದರು. ಸಭೆಯಲ್ಲಿ ಭಾಗವಹಿಸಿದ ಹೆಚ್ಚಿನವರು ಕೋಮುವಾದಿ ಮತ್ತು ಭಯೋತ್ಪಾದಕ ಹಿಂಸಾಚಾರ ಎರಡರ ವಿರುದ್ಧವೂ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುವಲ್ಲಿ ಇದುವರೆಗೂ ಕೇಂದ್ರ ಸರಕಾರ ವಿಫಲಗೊಂಡಿದೆ, ಇನ್ನಾದರೂ ಅಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸುವುದನ್ನು ಕಂಡ ಬಿಜೆಪಿ ಮಂದಿ ರಾಗ ಬದಲಿಸಿದರು. ಬಿಜೆಪಿಯ ಅಧ್ಯಕ್ಷರು ಭಜರಂಗ ದಳ ಮತ್ತು ಇತರ ಕೇಸರಿ ಪಡೆಗಳ ಭಯೋತ್ಪಾದಕ ಮಾದರಿಯ ಚಟುವಟಿಕೆಗಳನ್ನು ರಾಷ್ಟ್ರ-ವಿರೋಧಿ ಎಂದೆನ್ನಲು ಸಾಧ್ಯವಿಲ್ಲ, ಏಕೆಂದರೆ ಈ ಸಂಘಟನೆಗಳು ರಾಷ್ಟ್ರೀಯವಾದಿಗಳು ಎಂದು ಬಿಂಬಿಸುವ ಯತ್ನಕ್ಕಿಳಿದರು.

ಇದಕ್ಕೆ ಹಿಂದಿನ ದಿನ ಸಿಮಿ ಮತ್ತು ಭಜರಂಗ ದಳ ಒಂದೇ ನಾಣ್ಯದ ಎರಡು ಮುಖಗಳು ಅಲ್ಲ ಎನ್ನುತ್ತಾ ಭಜರಂಗ ದಳದ ಮೇಲೆ ನಿಷೇಧ ಸಾಧ್ಯವಿಲ್ಲ ಎಂದ ರಾಷ್ಟ್ರೀಯ ಭದ್ರತಾ ಸಲಹೆಗಾರರ ಟಿಪ್ಪಣಿ ಅವರ ನೆರವಿಗೆ ಬಂತು. ಯುಪಿಎ ಸರಕಾರ ಈ ನಿಲುವನ್ನು ತಿರಸ್ಕರಿಸಬೇಕು ಎಂಬ ಬಲವಾದ ಬೇಡಿಕೆಗಳು ಬಂದವು. ಆದರೆ ಕೇಂದ್ರ ಗೃಹ ಮಂತ್ರಿಗಳು ಚರ್ಚೆಯನ್ನು ಸಮಾರೋಪಗೊಳಿಸುತ್ತಾ ಒಂದು ವಿವಾದ ರಹಿತ(ಆದ್ದರಿಂದ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ) ನಿರ್ಣಯವನ್ನು ತಯಾರಿಸಿದರು. ಅದರಲ್ಲಿ ಅವರು ಭಜರಂಗ ದಳ ಮತ್ತು ಅದರ ಕಿಚ್ಚು ಹಚ್ಚುವ ಚಳುವಳಿಗಳ ಪ್ರಸ್ತಾಪ ಮಾಡಲು ನಿರಾಕರಿಸಿದರು.

ರೈಲ್ವೇ ಮಂತ್ರಿಗಳಿಂದ ಮಾತ್ರ ಭರವಸೆ

ಅದೇ ದಿನ ಭಜರಂಗ ದಳದ ಬೆಳ್ಳಿ ಹಬ್ಬ ಎಂಬುದೊಂದು ಅಣಕವೆಂದೇ ಹೇಳಬೇಕು(ಅದು ಆರಂಭವಾದದ್ದು ಅಕ್ಟೋಬರ್ 13, 1983ರಲ್ಲಿ). ಈ ಸಂದರ್ಭದ ಒಂದು ಸಭೆಯಲ್ಲಿ ವಿಶ್ವ ಹಿಂದು ಪರಿಷತ್ ಮುಖಂಡ ತೊಗಾಡಿಯಾ "ನಾವು ಕೇವಲ ಹಿಂದುಗಳ ಜಾಗೃತಿಗೆ ಸೀಮಿತವಾಗಿರುತ್ತೇವೆ, ಆದರೂ ನೀವು ನಮ್ಮನ್ನು ನಿಷೇಧಿಸಿದರೆ, ನಮ್ಮ ಲಂಗೋಟಿಗೆ ಕೈ ಹಾಕಿದರೆ ನಿಮ್ಮಜ್ಜಿ ನೆನಪಾಗುವ ಹಾಗೆ ಮಾಡುತ್ತೇವೆ" ಎಂದು ಹೇಳಿರುವುದಾಗಿ ವರದಿಯಾಗಿದೆ. ಆ ಸಭೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಹೇಗೆ ವರ್ತಿಸಬೇಕು ಎಂಬಿತ್ಯಾದಿಗಳನ್ನು ವಿಧಿಸುವ ಹಾಡುಗಳನ್ನು ಹಾಡಲಾಯಿತಂತೆ. "ಬಾಬರನೊಟ್ಟಿಗೆ ನೀವು ಸಂಬಂಧ ಇಟ್ಟುಕೊಳ್ಳಬಹುದು, ಆದರೆ ಭಾರತದಲ್ಲಿ ಇರಬೇಕೆಂದಿದ್ದರೆ ರಾಮನಿಗೆ ತಲೆಬಾಗಬೇಕು", "ಆಜಂಗಡ ಮಿನಿ ಪಾಕಿಸ್ತಾನವಾಗಿದೆ", "ಇಬ್ಬರು ಕ್ರೈಸ್ತರು ಸತ್ತರೆ ಯುಪಿಎ ನಮ್ಮನ್ನು ಕೋಮುವಾದಿ ಎನ್ನುತ್ತದೆ" ಎಂಬಿತ್ಯಾದಿ ಮಾತುಗಳು ಅಲ್ಲಿ ಕೇಳ ಬಂದವು. ಇವೆಲ್ಲಾ ಕೋಮು ಭಾವೋದ್ರೇಕವನ್ನು ಉಂಟು ಮಾಡುವುದಲ್ಲದೆ ಇನ್ನೇನು? ಬಿಜೆಪಿ ಅಧ್ಯಕ್ಷರು ಭಜರಂಗ ದಳವನ್ನು ರಾಷ್ಟ್ರಿಯವಾದಿ ಎಂದು ವರ್ಣಿಸುವುದರ ಹಿಂದೆ ಇರುವ ಅರ್ಥವೆಂದರೆ ಅವರ ಮಟ್ಟಿಗೆ ಹಿಂದೂಗಳು ಮಾತ್ರವೇ ರಾಷ್ಟ್ರೀಯವಾದಿಗಳು, ಆದ್ದರಿಂದ ಇತರರು ಎಲ್ಲರೂ ರಾಷ್ಟ್ರ-ವಿರೋಧಿಗಳು. ಆರೆಸ್ಸೆಸ್ ಕಳೆದ ಎಂಟು ದಶಕಗಳಿಂದ ತನ್ನ ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ "ಹಿಂದೂ ರಾಷ್ಟ್ರ"ವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಇದನ್ನೇ ತಾನೇ ಬೋಧಿಸುತ್ತಿರುವುದು?

ರಾಷ್ಟ್ರೀಯ ಸಮಗ್ರತಾ ಮಂಡಳಿಯ ಈ ಸಭೆಯಲ್ಲಿ ಸಿಪಿಐ(ಎಂ) ಮತ್ತು ಇತರರು ಭಜರಂಗ ದಳದ ವಿರುದ್ಧ ಕಾನೂನುಬಾಹಿರ ಚಟುಚಟಿಕೆಗಳ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂಬ ಅಂಶವನ್ನು ಎತ್ತಿದರು. ಕೇಂದ್ರ ಸರಕಾರ ಮಾತ್ರವೇ ಕ್ರಮ ಕೈಗೊಳ್ಳಲು ಸಾಧ್ಯ, ಇಲ್ಲಿ ವ್ಯಾಪಕವಾಗಿ ವ್ಯಕ್ತಗೊಂಡ ಭಾವನೆಯನ್ನು ಗೌರವಿಸಲಾಗುವುದು ಎಂದು ರೈಲ್ವೇ ಮಂತ್ರಿಗಳೇನೋ ಭರವಸೆ ನೀಡಿದರು. ಆದರೆ ಯುಪಿಎ ಸರಕಾರ ನಿಜವಾಗಿಯೂ ಕೋಮುವಾದೀ ಶಕ್ತಿಗಳ ವಿರುದ್ಧ ಹೋರಾಡುವ ತನ್ನ ಘೋಷಿತ ಗುರಿಗೆ ಬದ್ಧವಾಗಿರುತ್ತದೆಯೇ ಎಂದು ಕಾದು ನೋಡಬೇಕಷ್ಟೇ. ಅದರ ಇದುವರೆಗಿನ ದಾಖಲೆ ನೋಡಿದರೆ ಅಂತಹ ವಿಶ್ವಾಸವೇನೂ ಮೂಡುವುದಿಲ್ಲ.

ದೃಢ ಕಾರ್ಯಾಚರಣೆ ಎಂದು?

ಸರಕಾರ ಭಯೋತ್ಪಾದನೆಯನ್ನು ನಿಲ್ಲಿಸಲು ಯಾವುದೇ ಹೊಸ ಕರಾಳ ಕಾನೂನಿನ ಅಗತ್ಯವಿಲ್ಲ, ಈಗಿರುವ ಕಾನೂನುಗಳೇ ಸಾಕು ಎಂದು ಸ್ಪಷ್ಟೀಕರಣ ಕೊಟ್ಟಿತು. ಇದು ಸ್ವಾಗತಾರ್ಹ. ಅದೇ ರೀತಿ ಭಯೋತ್ಪಾದನೆಯನ್ನು ತಡೆಯುವ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಮುಸಲ್ಮಾನರ ಮೇಲೆ ಗುರಿಯಿಡುವುದು, ಅವರಿಗೆ ಕಿರುಕುಳ ಕೊಡುವುದು ಭಯೋತ್ಪಾದಕತೆಯನ್ನು ತಡೆಯದೆ ತದ್ವಿರುದ್ಧ ಪರಿಣಾಮ ಬೀರಬಹುದು ಎಂಬ ಎಚ್ಚರಿಕೆಯೂ ಸಿಪಿಐ(ಎಂ) ಮತ್ತು ಇತರ ಹಲವರಿಂದ ಬಂತು. ಆದರೆ ಒರಿಸ್ಸಾದಲ್ಲಿ ವಾರಗಟ್ಟಲೆ ನಡೆದ ಕ್ರೈಸ್ತರ ಮೇಲಿನ ದಾಳಿಗಳನ್ನು ತಡೆಯಲು ಮಧ್ಯಪ್ರವೇಶಿಸುವಲ್ಲಿ ಸರಕಾರ ಏಕೆ ವಿಫಲವಾಯಿತು, ಆಂತರಿಕ ಗಲಭೆಗಳಿಂದ ರಾಜ್ಯವನ್ನು ರಕ್ಷಿಸಲು ಕೇಂದ್ರ ಸರಕಾರಕ್ಕೆ ಅವಕಾಶ ಕೊಡುವ ಸಂವಿಧಾನದ 355ನೆ ಕಲಮನ್ನು ಬಳಸಲಾಯಿತೇ ಎಂಬುದನ್ನು ತಿಳಿಸಲು ನಿರಾಕರಿಸಿತು.

ಹೀಗೆ ಯುಪಿಎ ಸರಕಾರ ಭಜರಂಗ ದಳ ಮುಂತಾದವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಂಡು ಕೋಮು ಧ್ರುವೀಕರಣ ತೀವ್ರಗೊಳ್ಳುತ್ತಿರುವುದನ್ನು ತಡೆಯುವ ಪ್ರಶ್ನೆಯ ಮೇಲಾಗಲೀ, ಕ್ರೈಸ್ತ ಅಲ್ಪಸಂಖ್ಯಾತರ ಬದುಕಿನ ಹಕ್ಕುಗಳ ರಕ್ಷಣೆಗೆ ಮಧ್ಯಪ್ರವೇಶಿಸುವ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲವಾಗಿರುವ ಪ್ರಶ್ನೆಯ ಮೇಲಾಗಲೀ ಯಾವುದೇ ಭರವಸೆ ನೀಡಲಿಲ್ಲ. ರಾಷ್ಟ್ರೀಯ ಸಮಗ್ರತಾ ಮಂಡಳಿ ಕೇವಲ ಮುಗಿಯದ ಭಾಷಣಗಳ ಒಂದು ವೇದಿಕೆಯಾಗಿಯೇ ಉಳಿಯಿತು. ಕೇವಲ ಟೊಳ್ಳು ಮಾತುಗಳಿಂದ ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳುವ ಮತ್ತು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಬಲಪಡಿಸುವ ವಿಷಯದಲ್ಲಿ ಯಾವುದೇ ಪರಿಹಾರ ಸಿಗುವುದಿಲ್ಲ. ಈಗಲಾದರೂ ಯುಪಿಎ ಸರಕಾರ ದೃಢ ಕಾರ್ಯಾಚರಣೆ ನಡೆಸುತ್ತದೆಯೇ, ರೈಲ್ವೇ ಮಂತ್ರಿಗಳ ಭರವಸೆ ಈಡೇರುತ್ತದೆಯೆ ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳೆಲ್ಲರ ಮುಂದಿರುವ ಪ್ರಶ್ನೆ.

ಭಾರತ ಅಮೇರಿಕಾಗಳ ನೌಕಾಪಡೆ ಜಂಟಿ ಕವಾಯತನ್ನು ಭಾರತದ ಪಶ್ಚಿಮ ಕರಾವಳಿಯಲ್ಲಿ ಯೋಜಿಸಲಾಗಿದೆ. ಅಣ್ವಸ್ತ್ರ ಸಹಿತವಾದ ಅಮೇರಿಕಾದ ಜಲಾಂತರ್ಗಾಮಿಗಳು ಭಾರತದ ಕರಾವಳಿಯಲ್ಲಿ ಬಂದು ಯುದ್ಧದ ಆಟವನ್ನು ಆಡಲು ಯೋಜಿಸಿವೆ. ಯುದ್ಧ ದಾಹಿ ಅಮೇರಿಕಾದೊಂದಗಿನ ಈ ಅಪಾಯಕಾರಿ ಆಟವನ್ನು ತಡೆಗಟ್ಟಬೇಕಿದೆ.

ಮಲಬಾರ್ : ನೌಕಾ ಕವಾಯತು ಭಾರತಕ್ಕೆ ಆಪತ್ತು

ಆರ್.ರಾಮಕೃಷ್ಣ

2007 ರಲ್ಲಿ ಭಾರತದ ಕರಾವಳಿಗೆ ನಿಮಿಟ್ಜ್ ಎಂಬ ಒಂದು ಅಮೇರಿಕಾದ ಹಡಗು ಭೇಟಿ ನೀಡುವುದಿತ್ತು. ಅದೇನು ಸಾಧಾರಣವಾದ ಹಡಗಲ್ಲ. ಅದೊಂದು ಕುಖ್ಯಾತ ಹಡಗು. ಕೇವಲ ತಮಗಿಷ್ಟವಿಲ್ಲದ ರಾಜಕೀಯ ವ್ಯವಸ್ಥೆಯೊಂದನ್ನು ಆಯ್ಕೆ ಮಾಡಿಕೊಂಡಿದಕ್ಕಾಗಿ ಅಮೇರಿಕಾ ಎಂಬ ಸ್ವಯಂ ಘೋಷಿತ ದೊಡ್ಡಣ್ಣ ವಿಯೆಟ್ನಾಂ ದೇಶವನ್ನು, ಜನರನ್ನು ಶಿಕ್ಷಿಸಲು ತೀರ್ಮಾನಿಸಿತ್ತು.

ಆಕ್ರಮಣ, ಮಟ್ಟ ವಿಯೆಟ್ನಾಂ ದೇಶದ ಮೇಲೆ ಜಗತ್ತಿನ ಅತಿ ಭೀಕರ ಬಾಂಬು, ಶಸ್ತ್ರಾಸ್ತ್ರಗಳ ಸುರಿಮಳೆ. ಯುದ್ಧ ವಿಮಾನಗಳಿಂದ ಭೀಕರ ರಾಸಾಯನಿಕ ಬಾಂಬುಗಳ ಸುರಿಮಳೆ. ಲಕ್ಷಾಂತರ ವಿಯೆಟ್ನಾಂ ಜನರ ಮಾರಣ ಹೋಮ. ಇಂತಹ ಜಗತ್ತಿನ ಹೀನ ಆಕ್ರಮಣಗಳಲ್ಲಿ ಒಂದಾದ ವಿಯೆಟ್ನಾಂ ಯುದ್ಧದಲ್ಲಿ ಶಸ್ತ್ರಾಸ್ತ್ರಗಳನ್ನು ಯುದ್ಧ ವಿಮಾನಗಳನ್ನು ಹೊತ್ತೊಯ್ಯಲು ಹಾಗೂ ಸೇನಾ ನೆಲೆಯಾಗಿ ಬಳಕೆಯಾದದ್ದು ಈ ನಿಮಿಟ್ಜ್ ಎಂಬ ಹಡಗು. ಅಷ್ಟು ಮಾತ್ರವಲ್ಲ ಲಕ್ಷಾಂತರ ಅಮಾಯಕ ಇರಾಕಿ ಜನರನ್ನು ಕೊಂದ ಇರಾಕಿನ ಮೇಲಿನ ಅಮೇರಿಕದ ದುರಾಕ್ರಮಣಕ್ಕೆ ಬಳಕೆಯಾದ ಹಡಗು ಇದು. ಅದು ತನ್ನ ಒಡಲಲ್ಲಿ ಅಣ್ವಸ್ತ್ರವನ್ನು ಕೂಡ ಹೊತ್ತುಕೊಂಡಿರುವ ಹಡಗು.

ಇಂತಹ ಹಡಗು ಭಾರತದ ಕಡಲಂಚಿಗೆ ಬಂದು ಲಂಗರು ಹಾಕಿ ನಿಲ್ಲುವಾಗ ಒಂದು ಪ್ರಶ್ನೆ ಎದುರಾಯಿತು. ಈ ನಿಮಿಟ್ಜ್ ಹಡಗಿನಲ್ಲಿ ಅಣ್ವಸ್ತ್ರ ಇದೆಯೇ ಅಂತ. ಅದಕ್ಕೆ ಅಮೇರಿಕಾ ರಕ್ಷಣಾ ಇಲಾಖೆಯ ಅಧಿಕಾರಿಗಳು ಕೊಟ್ಟ ಉತ್ತರ ಬಹಳ ವಿಶೇಷವಾಗಿತ್ತು.

"ನಿಮಿಟ್ಜ್ ಹಡಗಿನಲ್ಲಿ ಅಣ್ವಸ್ತ್ರ ಇರಬಹುದು. ಅಥವಾ ಇಲ್ಲದೆಯೂ ಇರಬಹುದು. ಆ ಬಗ್ಗೆ ಏನನ್ನು ಹೇಳಲು ಆಗುವುದಿಲ್ಲ."

ಅಬ್ಬಬ್ಬ ಏನು ಉತ್ತರ. ಏನು ದುರಹಂಕಾರ. ಸ್ವಾಭಿಮಾನ, ಆತ್ಮಗೌರವವಿರುವ ಯಾವುದಾದರೂ ಒಂದು ಸಾರ್ವಭೌಮ ದೇಶ ಇಂತಹ ದುರಹಂಕಾರದ ಉತ್ತರವನ್ನು ಸಹಿಸಿಕೊಂಡು ಹೋಗಬಹುದೇ? ಹಡಗು ಲಂಗರು ಹಾಕಲು ಅವಕಾಶ ಕೊಡಬಹುದೇ? ಭಾರತ ಎರಡನ್ನೂ ಮಾಡಿತು. ಅಂದರೆ ಅಮೇರಿಕದ ಅಧಿಕಾರಿಗಳ ಉತ್ತರವನ್ನೂ ಪ್ರತಿಭಟಿಸಲಿಲ್ಲ. ಹಡಗು ಭಾರತದ ಕಡಲ ತಡಿಗೆ ಬರುವುದನ್ನು ತಡೆಯಲಿಲ್ಲ.

ಒಂದು ಕಾಲದ ಅಲಿಪ್ತ ಚಳುವಳಿಯ ಜಗತ್ತಿನ ನಾಯಕ ಸ್ಥಾನದಲ್ಲಿದ್ದ ಭಾರತದ ಸ್ಥಿತಿ ಮತ್ತು ನೀತಿಗಳು ಈಗ ಇಲ್ಲಿಗೆ ಬಂದು ತಲುಪಿದೆ.

ಈಗ ಇಂಥದ್ದನ್ನೆಲ್ಲಾ ಭಾರತದ ಜನತೆ ಮತ್ತೆ ನೆನಪು ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಇದೇ ಅಕ್ಟೋಬರ್ 24 ರಂದು ಭಾರತದ ಪಶ್ಚಿಮ ಕರಾವಳಿಯಲ್ಲಿ ಅಂದರೆ ಕೇರಳ, ಕರ್ನಾಟಕ, ಗೋವಾ, ಮಹಾರಾಷ್ಟ್ರಗಳ ಕರಾವಳಿ ತೀರದಲ್ಲಿ ಅಮೇರಿಕಾ ಮತ್ತು ಭಾರತಗಳ ನೌಕಾದಳಗಳ ಜಂಟಿ ಕವಾಯಿತು. ಅಂದರೆ ಜಂಟಿ ಸಮರಾಭ್ಯಾಸ ನಡೆಯಲಿದೆ. ಯುಎಸ್ಎಸ್ ರೋನಾಲ್ಡ್ ರೇಗನ್ ಎಂಬ ಅಮೇರಿಕಾದ ಹಡಗು, ಅಣ್ವಸ್ತ್ರಗಳನ್ನು ಹೊತ್ತ ಜಲಾಂತರ್ಗಾಮಿ (ಸಬ್‌ಮೇರಿನ್) ಗಳು, ಭಾರತದ ರಾಣಾ, ತಲವಾರ್, ಗೋದಾವರಿ, ಬ್ರಹ್ಮಪುತ್ರ, ಬೆಟ್ವಾ, ಹಡಗುಗಳು, ಆದಿತ್ಯ, ಶಿಶುಮರ್ ಮುಂತಾದ ಜಲಾಂತರ್ಗಾಮಿಗಳು ಭಾರತದ ದೇಶಿ ನಿರ್ಮಿತ ಕ್ಷಿಪಣಿ ನಾಶಕ ಇತ್ಯಾದಿಗಳು ಈ ನೌಕಾ ಕವಾಯತಿನಲ್ಲಿ ಪಾಲ್ಗೊಳ್ಳುತ್ತಿವೆ. ಮಲಬಾರ್‌ನಲ್ಲಿ ಇಂತಹ ಕವಾಯತು 5ನೇಯದು. ಈ ಹಿಂದೆ 1992, 95, 96, 2002 ರಲ್ಲಿ ಜಂಟಿ ಕವಾಯತುಗಳು ನಡೆದಿವೆ. ಭಾರತ ಅಮೇರಿಕಾದೊಂದಿಗೆ ಮಾಡಿಕೊಂಡಿರುವ ರಕ್ಷಣಾ ಚೌಕಟ್ಟು ಒಪ್ಪಂದದ ಭಾಗವಾಗಿ ಈ ಜಂಟಿ ಕವಾಯತ್ ನಡೆಯುತ್ತಿದೆ.


ಯಾಕೆ ಈ ಜಂಟಿ ಕವಾಯತು.

ಈ ಪ್ರಶ್ನೆ ಬಹಳ ಚಿಕ್ಕದು ಮತ್ತು ಸರಳವಾದದ್ದು. ಆದರೆ ಈ ಪ್ರಶ್ನೆಗೆ ಉತ್ತರ ಅಷ್ಟು ಸರಳವಾದದದ್ದಲ್ಲ. ಈಗಂತೂ ಅಮೇರಿಕ-ಭಾರತಗಳ ನಡುವೆ ಅಣು ಒಪ್ಪಂದಕ್ಕೆ ಜನರು ಎಷ್ಟೆಲ್ಲಾ ವಿರೋಧ ತೋರಿದರೂ ಅಂಕಿತ ಬಿದ್ದಿದೆ. ಅಣು ಒಪ್ಪಂದ ಎನ್ನುವುದು ಕೇವಲ ಅಣು ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ್ದು ಅಂತ ಈಗಲೂ ಯಾರಾದರೂ ಹೇಳಿದರೆ ಅಥವಾ ಹಾಗಂತ ನಂಬಿಕೊಂಡಿದ್ದರೆ ಅವರಂತಹ ಮುಗ್ಧರ ಬಗೆಗೆ ನಾವು ಕನಿಕರಪಡಬಹುದಷ್ಟೆ. ಅದು ಅಣು ವಿದ್ಯುತ್ ಒಪ್ಪಂದವನ್ನು ಮೀರಿದ್ದು. ದೇಶದ ಕೃಷಿ, ಕೈಗಾರಿಕೆ, ಶಿಕ್ಷಣ, ರಕ್ಷಣೆ ಹೀಗೆ ಹತ್ತು ಹಲವು ಕ್ಷೇತ್ರವನ್ನು ಆವರಿಸಿಕೊಳ್ಳುವ ಷರತ್ತು ಅಣು ಒಪ್ಪಂದದ ಭಾಗವಾಗಿವೆ. ಇದರಲ್ಲಿ ಅಮೇರಿಕದ ದೂರಗಾಮಿಯಾದ ಉದ್ದೇಶವಿದೆ. ಯೋಜಿತ ಕಾರ್ಯತಂತ್ರವಿದೆ. ವ್ಯೂಹಾತ್ಮಕ (ಸಾಮರಿಕ ಅಂದರೆ ಸಮರ ಸಂಬಂಧಿತವಾದ) ಪ್ರಶ್ನೆಗಳಿವೆ.

ಅಮೇರಿಕದ ಕಾರ್ಯತಂತ್ರವೇನು?

ಇಡೀ ಜಗತ್ತಿನ ಮೇಲೆ ತನ್ನ ಅಧಿಪತ್ಯವನ್ನು ಸಾಧಿಸಬೇಕೆಂಬ ಹುಂಬ ಉದ್ದೇಶ ಅಮೇರಿಕದ್ದು. ತಾನೇ ಜಗತ್ತಿನ ಏಕೈಕ ಸೂಪರ್ ಪವರ್ ಆಗಿ ಮೆರೆಯಬೇಕೆಂಬುದು ಅದರ ಸತತವಾದ ತಹತಹ ಮತ್ತು ಜಗತ್ತಿನ ಎಲ್ಲವನ್ನು ತನ್ನ ಹಿತಾಸಕ್ತಿಗಳಿಗೆ ತಕ್ಕಂತೆ ತಿರುಚಬೇಕೆಂಬುದೇ ಅದರ ಸತತ ಯೋಚನೆ. ಇದನ್ನು ಸಾಧಿಸಬೇಕಾದರೆ ಜಗತ್ತಿನ ಒಂದೊಂದು ಭಾಗದಲ್ಲಿ ಒಂದೊಂದು ತಂತ್ರ. ಒಂದೊಂದು ಭಾಗದಲ್ಲಿ ಒಂದೊಂದು ಬಗೆಯ ಮಿಲಿಟರಿ ಮೈತ್ರಿ ಅಗತ್ಯವಾಗಿದೆ.

ಬದಲಾದ ಮತ್ತು ಬದಲಾಗುತ್ತಿರುವ ಜಗತ್ತಿನ ಪರಿಸ್ಥಿತಿಯಲ್ಲಿ ಅಮೇರಿಕಕ್ಕೆ ದಕ್ಷಿಣ ಏಷ್ಯಾದಲ್ಲಿ ಒಬ್ಬ ಮಿಲಿಟರಿ ಮಿತ್ರ ಬೇಕಾಗಿದ್ದಾನೆ. ಆ ಪಾತ್ರಕ್ಕೆ ಈ ಭಾರತ ಸೂಕ್ತ ಅಂತ ಅಮೇರಿಕಕ್ಕೆ ಅನಿಸುತ್ತಿರುವುದರಿಂದ ಮೆಲ್ಲಗೆ ಅಮೇರಿಕ ಭಾರತ ಹೆಗಲ ಮೇಲೆ ಕೈ ಹಾಕುತ್ತಿದೆ. ಅಮೇರಿಕದ ಇಂತಹ ಕಾರ್ಯತಂತ್ರದ ಭಾಗವಾಗಿ ನಡೆಯುತ್ತಿರುವುದೇ ಭಾರತ ಮತ್ತು ಅಮೇರಿಕಗಳ ಜಂಟಿ ಸಮರಾಭ್ಯಾಸ.



ಏನು ಹೇಳುವರು?

ಈ ಜಂಟಿ ಸಮರಾಭ್ಯಾಸದ ಉದ್ದೇಶವೇನು ಅಂತ ನಾವು ಅಮೇರಿಕ ಅಥವಾ ಭಾರತ ಸರ್ಕಾರವನ್ನು ಕೇಳಿದರೆ ಉತ್ತರ ಸಿದ್ಧವಾಗಿರುತ್ತದೆ. ಜಗತ್ತಿನ ಎರಡು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳ ನಡುವೆ ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದು. ರಕ್ಷಣಾ ವಿಷಯದಲ್ಲಿ ಪರಸ್ಪರ ಅನುಭವಗಳನ್ನು ಹಂಚಿಕೊಳ್ಳುವುದು ಮತ್ತು ಭಾರತಕ್ಕೆ ರಕ್ಷಣಾತ್ಮಕ ವಿಷಯಗಳಲ್ಲಿ ತರಬೇತಿ ನೀಡುವುದು.

ಹೀಗೆ ಉದ್ದೇಶಗಳ ದೊಡ್ಡ ಪಟ್ಟಿ ದೊರೆಯಬಹುದು. ಆದರೆ ಅಮೇರಿಕಾದ ಚರಿತ್ರೆ ಇತಿಹಾಸಗಳನ್ನು ಬಲ್ಲವರ್ಯಾರು ಅದನ್ನು ನಂಬಲಾರರು ಎಂಬುದಂತೂ ಸತ್ಯ.

ಚಿಲಿ ದೇಶದಲ್ಲಿ 1972ರಲ್ಲಿ ಚುನಾವಣೆಗಳ ಮೂಲಕ ಜನಮತ ಪಡೆದು ಅಧಿಕಾರಕ್ಕೆ ಬಂದ ಸಮಾಜವಾದಿ ಅಲಂಡೆಯನ್ನು ಕುತಂತ್ರಗಾರಿಕೆಯ ಮೂಲಕ ಕೊಂದು ಹಾಕಿದ ಅಮೇರಿಕಾ ತಾನೊಂದು ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೇಳಿಕೊಳ್ಳುವುದೇ ಒಂದು ಬಗೆಯ ತಮಾಷೆಯ ವಿಷಯ.

ಬದಲಾದ ಅಮೇರಿಕಾ ತಂತ್ರ

ಎರಡನೇ ಮಹಾಯುದ್ಧ ಮುಗಿಯುವ ಹೊತ್ತಿಗೆ ಜಗತ್ತಿನಲ್ಲಿ ಎರಡು ಸೂಪರ್‌ಪವರ್ ರಾಷ್ಟ್ರಗಳು ಉದಯಿಸಿದವು. ಒಂದು ಹಿರೋಷಿಮಾ ನಾಗಸಾಕಿಗಳ ನಗರಗಳ ಮೇಲೆ ಅನಗತ್ಯವಾಗಿ ಅಣು ಬಾಂಬ್ ಹಾಕಿ ಲಕ್ಷಾಂತರ ನಾಗರೀಕರನ್ನು ಕೊಂದ ಅಮೇರಿಕಾ. ಮತ್ತೊಂದು ಇಡೀ ಜಗತ್ತನ್ನೇ ಗೆಲ್ಲುವ ಹುಚ್ಚು ಹಂಬಲದಲ್ಲಿ ಜಗತ್ತಿನ ಸರ್ವನಾಶಕ್ಕೆ ಹೊರಟಿದ್ದ ಹಿಟ್ಲರ್ ನೇತೃತ್ವದ ನಾಜಿ ಪಡೆಯನ್ನು ತನ್ನ ಎರಡು ಕೋಟಿ ಪ್ರಜೆಗಳ ಬಲಿದಾನದ ಮೂಲಕ ಮಟ್ಟ ಹಾಕಿ ಜಗತ್ತನ್ನು ಕಾಪಾಡಿದ ಸೋವಿಯತ್ ಒಕ್ಕೂಟ.

50,60, 70 ದಶಕಗಳಲ್ಲಿ ಕಮ್ಯೂನಿಸ್ಟ್ 'ಗುಮ್ಮ' ನಿಂದ ಪ್ರಜಾಪ್ರಭುತ್ವ ರಾಷ್ಟ್ರವನ್ನು ರಕ್ಷಿಸುವ ಹೆಸರಿನಲ್ಲಿ ಜಗತ್ತಿನೆಲ್ಲೆಡೆ ಅಮೇರಿಕಾ ತನ್ನ ಸೈನ್ಯದೊಂದಿಗೆ ಮಧ್ಯಪ್ರವೇಶ ಮಾಡಲಾರಂಭಿಸಿತು. ಅದಕ್ಕೆ ಪ್ರತಿರೋಧ ರಷ್ಯಾದ ಕಡೆಯಿಂದ ಬಂತು. ಸೋವಿಯತ್ ರಷ್ಯಾ ಮತ್ತು ಸಮಾಜವಾದಿ ಬಣಗಳ ವಿರುದ್ಧ ಇಂಗ್ಲೆಂಡ್ ಸೇರಿದಂತೆ ಪಶ್ಚಿಮ ಯುರೋಪಿನ ದೇಶಗಳನ್ನು ಕೂಡಿಕೊಂಡು ಅಮೇರಿಕ ನ್ಯಾಟೋ ಎಂಬ ಕೂಟ ರಚಿಸಿಕೊಂಡಿತು.

ಈ ಎಲ್ಲಾ ಕಾಲಾವಧಿಯಲ್ಲಿ ಸೋವಿಯತ್ ಒಕ್ಕೂಟದ ವಿರುದ್ಧ ಅತ್ಯಂತ ನೆಚ್ಚಿನ ಬಂಟನಾಗಿದ್ದದ್ದು ನಮ್ಮ ನೆರೆಯ ಪಾಕಿಸ್ತಾನ. ಪಾಕಿಸ್ತಾನಕ್ಕೂ ಅಮೇರಿಕಕ್ಕೂ ಗಳಸ್ಯ ಕಂಠಸ್ಯ. ಅದು ಬಹುದಿನಗಳ ಬಾಂಧವ್ಯ. 90 ರ ದಶಕದ ಆರಂಭದಲ್ಲೇ ಸಮಾಜವಾದಿ ಸೋವಿಯತ್ ಒಕ್ಕೂಟ ಕುಸಿಯಿತು ಮತ್ತು ಸೋವಿಯತ್ ಬೆಂಬಲದ ಅಫಘಾನಿಸ್ತಾನದ ನೇತೃತ್ವದ ಆಡಳಿತವೂ ಕುರಿತು ತಾಲಿಬಾನರು ಮೇಲುಗೈ ಸಾಧಿಸಿದರು.

ಜಗತ್ತಿನ ಬಲಾಬಲದ ಪರಿಸ್ಥಿತಿ ಸಾಕಷ್ಟು ಬದಲಾಯಿತು. ಇತ್ತೀಚಿನ ವರ್ಷಗಳಲ್ಲಿ ಆರ್ಥಿಕವಾಗಿ ಚೇತರಿಸಿಕೊಂಡ ಬಂಡವಾಳಶಾಹಿ ರಷ್ಯಾ, ಜಗತ್ತಿನ ಅತ್ಯಂತ ವೇಗದ ಬೆಳವಣಿಗೆಯನ್ನು ಹೊಂದಿರುವ ಹಾಗೂ ಜಗತ್ತಿನ ಒಂದು ಬೃಹತ್ ಆರ್ಥಿಕ, ರಾಜಕೀಯ, ಮಿಲಿಟರಿ ಶಕ್ತಿಯಾಗಿ ಬೆಳೆಯುತ್ತಿರುವ ಚೀನಾ ದೇಶಗಳ ಮೇಲೆ ಅಮೇರಿಕಾ ಸದಾ ಕಣ್ಣಿಟ್ಟಿದೆ. ಇದರಲ್ಲಿ ಚೀನಾ ದೇಶದೊಂದಿಗೆ ಅತ್ಯಂತ ವ್ಯಾಪಕ ವಾಣಿಜ್ಯ ವ್ಯವಹಾರ ಸಂಬಂಧವಿದ್ದಾಗಲೂ ವ್ಯೂಹಾತ್ಮಕ ತಂತ್ರಗಾರಿಕೆಯ ದೃಷ್ಟಿಯಿಂದ ಚೀನಾ ಅಮೇರಿಕಕ್ಕೆ ಶತ್ರುವೇ.

ಬದಲಾದ ಈ ಜಾಗತಿಕ ಸನ್ನಿವೇಶದಲ್ಲಿ

ಅಮೇರಿಕಕ್ಕೆ ಜಾಗತಿಕ ಬಲಾಬಲಗಳ ದೃಷ್ಟಿಯಿಂದಲೂ ಮತ್ತು ನಿರ್ಧಿಷ್ಟವಾಗಿ ದಕ್ಷಿಣ ಏಷ್ಯಾದಲ್ಲಿನ ಬಲಾಬಲಗಳ ದೃಷ್ಟಿಯಿಂದಲೂ ಭಾರತದೊಂದಿಗಿನ ಮಿಲಿಟರಿ ಮೈತ್ರಿ ಅಗತ್ಯ ಅನಿಸಿದೆ. ಹಾಗೆಂದಾಕ್ಷಣ ಪಾಕಿಸ್ತಾನವನ್ನು ತನ್ನ ಪರಮಾಪ್ತ ಸ್ಥಾನದಿಂದ ಅಮೇರಿಕ ಸಂಪೂರ್ಣ ಕೈಬಿಟ್ಟಿದೆ ಎಂದೇನೂ ನಾವು ಭಾವಿಸಬೇಕಿಲ್ಲ. ಆದರೆ ರಷ್ಯಾ, ಚೀನಾದಂತಹ ಶಕ್ತಿಶಾಲಿಯಾದ ರಾಷ್ಟ್ರಗಳ ವಿರುದ್ಧದ ವ್ಯೂಹದಲ್ಲಿ ಪಾಕಿಸ್ತಾನಕ್ಕಿಂತಲೂ ಭಾರತವನ್ನು ಸೇರಿಸಿಕೊಂಡಲ್ಲಿ ಹೆಚ್ಚು ಪ್ರಯೋಜನವಾಗಬಹುದು ಎಂದು ಅಮೇರಿಕ



ಭಾವಿಸಿದೆ. ಆದರೂ ಪಾಕಿಸ್ತಾನವನ್ನು ಪೂರ್ತಿ ದೂರತಳ್ಳದೇ ಎಂಥದ್ದೋ ಒಂದು ರೀತಿಯ ಸಮತೋಲನ ಸಾಧಿಸಬೇಕೆಂದು ಪ್ರಯತ್ನಿಸುತ್ತಿದೆ.

ಅಮೇರಿಕಾದ ಒಲವು ಪಾಕಿಸ್ತಾನದ ಕಡೆಯಿಂದ ಭಾರತದ ಕಡೆಗೆ ಹರಿಯಲು ಇನ್ನೂ ಹಲವು ಕಾರಣಗಳಿವೆ. ಒಂದು ಭಾರತದ ವಿಶಾಲವಾದ ಮಾರುಕಟ್ಟೆ. 1991 ರಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟ ಕುಸಿದದ್ದು ಆಕಸ್ಮಿಕವಲ್ಲ ಭಾರತದಲ್ಲಿ ನರಸಿಂಹರಾಯರ ನೇತೃತ್ವದ ಕಾಂಗ್ರೆಸ್ ಸರಕಾರ ಜಾಗತೀಕರಣದ ದೀಕ್ಷೆಯನ್ನು ಪಡೆದುಕೊಂಡು ಆರ್ಥಿಕತೆಯನ್ನು ಉದಾರೀಕರಿಸಿದ್ದು.1992 ರಲ್ಲಿ ಅಮೇರಿಕ ಭಾರತಗಳ ಪ್ರಥಮ ಸೇನಾ ಕವಾಯತು ಆರಂಭವಾದದ್ದು ಇವೆಲ್ಲಾ ಕೇವಲ ಆಕಸ್ಮಿಕಗಳಲ್ಲ. ಇವುಗಳ ನಡುವೆ ಒಂದು ಅಂತರ್ ಸಂಬಂಧಗಳಿವೆ.

ಹೀಗೆ ಆರಂಭವಾದ ಅಮೇರಿಕ ಮತ್ತು ಭಾರತಗಳ ಜಂಟಿ ಸೇನಾ ಕವಾಯತು ಕಸರತ್ತುಗಳು ಹಲವು ಹಂತಗಳನ್ನು ದಾಟಿ ಈಗ ಮಲಬಾರ್ ಜಂಟಿ ನೌಕಾ ಕವಾಯತಿನವರೆಗೂ ಬಂದು ತಲುಪಿದೆ.

ಅಣು ಒಪ್ಪಂದ ಎಂದರೆ 123 ಒಪ್ಪಂದ ಮಾತ್ರ ಅಂತ ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ದೇಶಕ್ಕೆ ಸಾರಿ ಸಾರಿ ಹೇಳಿದ್ದರು. ಹೈಡ್ ಕಾಯ್ದೆ ಅನ್ವಯವಾಗದು ಅಂತಲೂ ಭರವಸೆ ಕೊಟ್ಟಿದ್ದರು. ಯಾವುದನ್ನು ದೇಶದ ಎಡಪಕ್ಷಗಳು ದೃಢವಾಗಿ ಹೇಳಿದವೋ ಅದು ನಿಜ ಎಂಬುದು ಅಣು ಒಪ್ಪಂದಕ್ಕೆ ಸಹಿ ಬೀಳುವಾಗ ಇಡೀ ಜಗತ್ತಿನ ಮುಂದೆ ಬಯಲಾಯ್ತು, ಅಣುಒಪ್ಪಂದಕ್ಕೆ ಹೈಡ್ ಕಾಯ್ದೆ ಕೂಡ ಅನ್ವಯವಾಗುತ್ತೆ, ಅಂತ ಸ್ವತಃ ಅಮೇರಿಕಾದ ಅಧ್ಯಕ್ಷ ಜಾರ್ಜ್ ತನ್ನ ದೇಶದ ವಿರೋಧ ಪಕ್ಷ ಮುಖಂಡರಿಗೆ ಕೊಟ್ಟ ಲಿಖಿತ ಉತ್ತರದಲ್ಲಿ ಹೇಳಿದರು. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಕಂಡೋಲಿಸಾ ರೈಸ್ ಅವರು ಭಾರತ ಮುಂದೆ ಯಾವ ರೀತಿಯ ಅಣ್ವಸ್ತ್ರ ಪರೀಕ್ಷೆ ಮಾಡುವಂತಿಲ್ಲ. ಮಾಡಿದರೆ ಪರಿಣಾಮ ಗಂಭೀರ' ಎಂದರು.

ಅಣು ಒಪ್ಪಂದಕ್ಕೆ ಇಷ್ಟು ಮಾತ್ರ ಷರತ್ತಲ್ಲ. ಇನ್ನು ಅನೇಕ ಷರತ್ತುಗಳಿವೆ. ಭಾರತ ಅಮೇರಿಕಾಗಳ ನಡುವಿನ ಅಣು ಒಪ್ಪಂದ ಮುಂದುವರೆಯಬೇಕಾದರೆ, ಅಣು ಇಂಧನ ನಿರಂತರ ಪೂರೈಕೆಯಾಗಬೇಕಾದರೆ ಭಾರತ ಮತ್ತು ಅಮೇರಿಕಗಳ ವಿದೇಶಾಂಗ ನೀತಿ ಪರಸ್ಪರ ಹೊಂದಾಣಿಕೆಯಾಗಬೇಕು ಎನ್ನುತ್ತದೆ ಹೈಡ್ ಕಾಯ್ದೆ. ಆಗಾಗ್ಗೆ ಅಮೇರಿಕ ಭಾರತಗಳ ಸೇನಾದಳ ಜಂಟಿ ಕವಾಯತುಗಳು ನಡೆಯಬೇಕೆಂಬ ಷರತ್ತೂ ಇದೆ. ಆ ಷರತ್ತಿನ ಅನುಷ್ಠಾನ ಈಗ ನಡೆಯುತ್ತಿರುವ ಜಂಟಿ ಕವಾಯತು ಎಂದರೂ ತಪ್ಪಲ್ಲ.


ಈ ಜಂಟಿ ಕವಾಯತುಗಳನ್ನು ನಡೆಸಿ ಏನು ಮಾಡಬೇಕಾಗಿದೆ ಅಂತ ಇಲ್ಲಿ ಪ್ರಶ್ನೆ ಬರುತ್ತದೆ. ಅಮೇರಿಕ ಈಗ ಭಾರತವನ್ನು ಒಬ್ಬ ಕಿರಿಯ ಮಿತ್ರ ಅಂತ ಪರಿಗಣಿಸಿದೆ. ಅಮೇರಿಕ ಮತ್ತು ಭಾರತಗಳ ವಿದೇಶಾಂಗ ನೀತಿಗಳು ಪರಸ್ಪರ ತಾಳೆ ಆಗಬೇಕು. ಅಂದರೆ ಅದರ ಅರ್ಥ ಅವು ಒಂದೇ ನಿಲುವನ್ನು ತೆಗೆದುಕೊಳ್ಳಬೇಕು ಅಂತ. ಒಂದೊಮ್ಮೆ ಮುಂದೆ ಅಮೇರಿಕಾ ಇರಾಕ್ ದೇಶದ ಮೇಲೆ ಯುದ್ಧ ಘೋಷಣೆ ಮಾಡಿತು ಎಂದರೆ ಭಾರತ ಆ ಯುದ್ಧದಲ್ಲಿ ತಾನೂ ಪಾಲ್ಗೊಳ್ಳಬೇಕು. ಅನ್ನುವುದರ ಅರ್ಥ ಅದೇ. ಅಷ್ಟು ಮಾತ್ರ ಅಮೇರಿಕಾದ ಯುದ್ಧಕೋರ ಹಡಗು, ವಿಮಾನಗಳಿಗೆ ನೆಲೆ ಒದಗಿಸಿಕೊಡುವುದು. ಇಂಧನ ತುಂಬಿಸಿಕೊಡುವುದು. ತನ್ನ ಭಾಗದಲ್ಲಿ ಓಡಾಡುವ ಅಮೇರಿಕದ ಹಡಗು ಇತ್ಯಾದಿಗಳಿಗೆ ರಕ್ಷಣೆ ಒದಗಿಸುವುದು. ಇಂತಹ ಸೇವೆಗಳನ್ನೆಲ್ಲಾ ಮಾಡಬೇಕಾಗುತ್ತದೆ.

ಅಮೇರಿಕಾ- ಭಾರತಗಳ ಸೈನ್ಯಗಳು ಸೇರಿ ಮೂರನೇ ದೇಶವೊಂದರ ಮೇಲೆ ಯುದ್ಧ ಸಾರಬೇಕಾದರೆ, ದಾಳಿ ಮಾಡಬೇಕಾದರೆ ಅವುಗಳ ನಡುವೆ ಸಾಮರಸ್ಯ ಬೇಕಲ್ಲವೇ ಅಭ್ಯಾಸ ಬೇಕಲ್ಲವೇ? ಹೊಂದಾಣಿಕೆ ಬೇಕಲ್ಲವೇ ಅದಕ್ಕಾಗೇ ಈಗ ನಡೆಯುತ್ತಿರುವುದು ಜಂಟಿ ಸಮರಾಭ್ಯಾಸ.

ಹಲವು ಮುಖಗಳು:

ಈ ವಿಷಯದ ಒಂದು ಮಗ್ಗುಲ ಮುಖ. ಇದಕ್ಕೆ ಇನ್ನೂ ಹಲವಾರು ಮುಖಗಳೂ ಇವೆ. ಜಂಟಿ ಕವಾಯತುಗಳ ಮೂಲಕ ಅಮೇರಿಕ ಭಾರತಕ್ಕೆ ರಕ್ಷಣಾ ವಿಷಯಕ್ಕೆ ಸಂಬಂಧಿಸಿದ ವಿಶೇಷ ತಂತ್ರಜ್ಞಾನವನ್ನು ನೀಡುತ್ತೇನೆ. ಅನ್ನುತ್ತದೆ.

ತನಗೆ ಹಳತಾದ ಕೆಲವು ತಂತ್ರಜ್ಞಾನವನ್ನೂ ನೀಡಬಹುದು. ಕೆಲವು ರಕ್ಷಣಾ ತಂತ್ರಗಾರಿಕೆಗಳ ಅನುಭವವನ್ನು ಹಂಚಿಕೊಳ್ಳಬಹುದು. ಅದರೊಟ್ಟಿಗೆ ಭಾರತ ಹಲವು ಅಪಾಯಗಳಿಗೂ ಸಿಲುಕಿಕೊಳ್ಳಬಹುದು. ಹೇಳಿಕೇಳಿ ಅಮೇರಿಕ ಎಂದರೆ ಯುದ್ಧ ವ್ಯಾಪಾರಿ. ಯುದ್ಧಗಳನ್ನು ಶಸ್ತ್ರಾಸ್ತ್ರಗಳನ್ನು ಮಾರುವುದು ಅದರ ಒಂದು ಬಹುದೊಡ್ಡ ದಂಧೆ. ಸೈನ್ಯಗಳು ಸೇರಿ ಜಂಟಿ ಕಾರ್ಯಾಚರಣೆ ನಡೆಸಬೇಕಾದರೆ ಯುದ್ಧಾಸ್ತ್ರಗಳು,



ಯುದ್ಧ ವಿಮಾನ, ಯುದ್ಧದ ಹಡಗುಗಳು ಅಲ್ಲದೇ ಯುದ್ಧೋಪಕರಣಗಳ ವಿಚಾರದಲ್ಲಿ ಸಹ ಸಾಮ್ಯತೆ ಇರಬೇಕು. ಅಂದರೆ ಅಮೇರಿಕಾದ ಸೈನ್ಯ ಹೊಂದಿರುವಂತಹ ಶಸ್ತ್ರಸಾಧನ, ಸಲಕರಣೆ ವಾಹನ ಇತ್ಯಾದಿಗಳನ್ನು ಭಾರತವೂ ಹೊಂದಿರಬೇಕು ಎಂದು ದುಬಾರಿಯಾದ ಶಸ್ತ್ರ, ಸಾಧನಗಳನ್ನು ಭಾರತದ ಕೊರಳಿಗೆ ನೇತುಹಾಕುವ ಯೋಜನೆಯೂ ಅಮೇರಿಕಕ್ಕೆ ಇದ್ದೇ ಇರುತ್ತದೆ ಮತ್ತು ಇದೆ. ಇದೊಂದು ಬಗೆಯ ಚಕ್ರವ್ಯೂಹದಂತೆ ಭಾರತ ಒಳಹೊಕ್ಕಿದೆ. ಹೊರಬರುವ ಕೆಲಸ ಅಷ್ಟು ಸಲೀಸಾದದ್ದಲ್ಲ.

ಅಪಾಯಗಳ ಅರಿವು

ಅಮೇರಿಕ ಮತ್ತು ಭಾರತಗಳ ನಡುವಿನ ಈ ಮಿಲಿಟರಿ ಮೈತ್ರಿಯ ಅಪಾಯಗಳ ಸ್ಪಷ್ಟ ಅರಿವು ಹೊಂದಿದ್ದು ಅದನ್ನು ಆರಂಭದಿಂದಲೂ ಖಚಿತವಾಗಿ ವಿರೋಧಿಸುತ್ತಾ ಬಂದದ್ದು ದೇಶದ ಎಡಪಕ್ಷಗಳು ಮಾತ್ರ. 1992 ರಲ್ಲಿ ಮೊದಲ ಅಮೇರಿಕಾ ಮತ್ತು ಭಾರತ ಜಂಟಿ ನೌಕಾಪಡೆಗಳ ಕಸರತ್ತು ನಡೆದಾಗ ವಿರೋಧ ಪಕ್ಷವಾಗಿದ್ದ ಬಿಜೆಪಿಯ ಮುಖಂಡ ಎಲ್.ಕೆ.ಅಡ್ವಾನಿ ಅದನ್ನು ಸ್ವಾಗತಿಸಿದ್ದರು. 1995ರಲ್ಲೇ ನರಸಿಂಹರಾಯರ ಕಾಲದಲ್ಲೇ ಭಾರತ ಮತ್ತು ಅಮೇರಿಕ ಮಿಲಿಟರಿ ಸಹಕಾರ ಒಪ್ಪಂದ ಏರ್ಪಟ್ಟಿತು. 1998 ರಲ್ಲಿ ಪೋಕ್ರಾನ್ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ ಅಮೇರಿಕಾ ಸಿಟ್ಟು ತೋರಿ ಹಲವು ಬಗೆಯ ದಿಗ್ಬಂಧನ ಹೇರಿದರೂ ನಂತರ ಬಿಜೆಪಿ ಸರ್ಕಾರ ಶರಣಾದ ಪರಿಗೆ ಒಂದೇ ವರ್ಷದಲ್ಲಿ ದಿಗ್ಬಂಧನ ಸಡಿಲಿಸಿ ಭಾರತದ ಮಿಲಿಟರಿ ಅಧಿಕಾರಿಗಳಿಗೆ ತರಬೇತಿ ನೀಡಲು ಅಮೇರಿಕ ಒಪ್ಪಿತು. 2000 ದಲ್ಲಿ ಬಿಜೆಪಿ ಅಧಿಕಾರಾವಧಿಯಲ್ಲಿ ಬಿಲ್ ಕ್ಲಿಂಟನ್ ಭಾರತಕ್ಕೆ ಭೇಟಿ ನೀಡಿದ ಮೇಲೆ ಭಾರತ ಅಮೇರಿಕ ಮೈತ್ರಿ ಹೊಸ ಘಟ್ಟ ತಲುಪಿತು. ಅದುವರೆಗೆ ಬರೀ ನೌಕಾಪಡೆಗಳಿಗೆ ಮೀಸಲಾಗಿದ್ದ ಜಂಟಿ ಕವಾಯತು ಅಲ್ಲಿಂದಾಚೆಗೆ ವಾಯುಸೇನೆ, ಭೂಸೇನೆಗಳಿಗೂ ಸಹ ವ್ಯಾಪಿಸಿತು. ಈಗ ಅಮೇರಿಕದೊಂದಿಗಿನ ಅಣು ಒಪ್ಪಂದವನ್ನು ವಿರೋಧಿಸುವ ನಾಟಕ ನಡೆಸುತ್ತಿರುವ ಬಿಜೆಪಿಯ ಅಂದಿನ ರಕ್ಷಣಾ ಸಚಿವ ಜಸ್ವಂತ್ ಸಿಂಗ್, ಸ್ಟ್ರೋಬ್ ತಲ್‌ಬೋಟ್‌ರವರ ನಡುವೆ 8 ರಹಸ್ಯ ಸಭೆಗಳು ನಡೆದಿವೆ ಎನ್ನುವುದನ್ನು ವಿಶೇಷವಾಗಿ ಗಮನಿಸಬೇಕಿದೆ. ಅಮೇರಿಕಾಕ್ಕೆ ಡೊಗ್ಗು ಸಲಾಮು ಹಾಕುವುದರಲ್ಲಿ ಬಿಜೆಪಿ ಕಾಂಗ್ರೆಸ್‌ಗಳ ನಡುವೆ ಪೈಪೋಟಿ ಇದೆಯೇ ಹೊರತು, ಭಿನ್ನಾಭಿಪ್ರಾಯವಿಲ್ಲ.

ಅಮೇರಿಕಾದೊಂದಿಗೆ ಇಂತಹ ವ್ಯೂಹಾತ್ಮಕ ಮೈತ್ರಿಗೆ ಮುಂದಾಗಿರುವುದರಿಂದ ಭಾರತವು ಒಂದು ಶಕ್ತಿಶಾಲಿ ರಾಷ್ಟ್ರವಾಗಿ ಬೆಳೆಯಲು ಅಗತ್ಯವಾದ ಸಹಕಾರ ನೀಡುತ್ತದೆ ಎಂದು ಹಲವರು ಹೇಳುತ್ತಾರೆ. ಅಮೇರಿಕ ಕೂಡ ಹಾಗೆ ಹೇಳಿರುವುದು ನಿಜ. ಆದರೆ ಸಾಮ್ರಾಜ್ಯಶಾಹಿ ಅಮೇರಿಕದ ಮಹಿಮೆಗಳನ್ನು ಬಲ್ಲವರು ಅದನ್ನು ನಂಬಲಾರರು. ಅಮೇರಿಕಕ್ಕೆ ಯಾರನ್ನು ಶಕ್ತಿಶಾಲಿಯನ್ನಾಗಿ ಮಾಡುವ ಉದ್ದೇಶವಿಲ್ಲ. ತಮಗೆ ಸರಿಸಮಾನವಾದ, ತನಗೆ ಸವಾಲು ಹಾಕಬಲ್ಲಂತಹ ರೀತಿಯಲ್ಲಿ ಜಗತ್ತಿನ ಯಾವುದೇ ದೇಶ, ತಲೆ ಎತ್ತಿ ನಿಲ್ಲಬಾರದು. ತಾನೇ ಜಗತ್ತಿನ ಏಕೈಕ ಸೂಪರ್ ಪವರ್ ಆಗಿದ್ದು ಜಗತ್ತನ್ನೆಲ್ಲಾ ತಾನೇ ಸೂರೆ ಮಾಡಬೇಕು ಎನ್ನುವ ಧೋರಣೆಯ ಅಮೇರಿಕ ನಿಜಕ್ಕೂ ಭಾರತಕ್ಕೆ ನೆರವು ನೀಡೀತೇ? ನೀಡಲಾರದು.

ಲಾಭ ಈಗಾಗಲೇ ಅಮೇರಿಕಾಕ್ಕೆ ದೊರಕಿದೆ


"ಮುಂಬರುವ ದಿನಗಳಲ್ಲಿ ಅಮೇರಿಕಾ ತನ್ನ ಜಾಗತಿಕ ಸ್ವರೂಪ ಚಿಂತನಾಕ್ರಮದಲ್ಲಿ ಭಾರತವನ್ನು ಹೊರತುಪಡಿಸಿ ಸ್ವಯಂ ಆಲೋಚನೆ ಮಾಡಲು ಸಾಧ್ಯವಿಲ್ಲ

ಪರಮಾಣು ಒಪ್ಪಂದದ ಲಾಭ ಅಮೇರಿಕಾ ಈಗಾಗಲೇ ದೊರಕಿದೆ. ಆಫ್ಘಾನಿಸ್ತಾನದಲ್ಲಿ ಅಮೇರಿಕಾದ ಸೇನಾ ಪಡೆ ಇರುವ ಬಗ್ಗೆ ಭಾರತವೀಗ ಮೊದಲಿನದಕ್ಕಿಂತ ಭಿನ್ನ ನಿಲುವು ತಾಳಿದ್ದು ಸಕಾರಾತ್ಮಕವಾಗಿ ನೋಡುತ್ತಿದೆ.

ಅಮೇರಿಕಾ ಅಧ್ಯಕ್ಷರು ತಮ್ಮ ನೂತನ ವಿದೇಶಾಂಗ ನೀತಿಯಲ್ಲಿ ವಿದ್ಯುತ್, ರಕ್ಷಣೆ, ವ್ಯಾಪಾರ, ಹವಾಮಾನ ವೈಪರೀತ್ಯ ಹಾಗೂ ಅಮೇರಿಕಾ ನಾಯಕತ್ವದ ಪರವಾದ ಧೋರಣೆಗಳನ್ನು ಅಳವಡಿಸಿಕೊಳ್ಳುವ ಆವಶ್ಯಕತೆಯಿದೆ ಈ ದಿಸೆಯಲ್ಲಿ ಭಾರತದ ಸಹಕಾರ ಅತ್ಯಂತ ಅವಶ್ಯ."

[illegible]
ರಿಪಬ್ಲಿಕನ್ [illegible]
ಅಕ್ಟೋಬರ್ 17, 2008





■ ಕೆ.ನೀಲಾ

ಇದೇ ನಾವು ಮಾಡಬೇಕಾದದ್ದು

ಭಾಷಣಗಳು, ಘೋಷಣೆಗಳು, ಬರಹಗಳು ಇತಿಹಾಸವನ್ನರಹುವ, ಮಾಡಬೇಕಾದದ್ದನ್ನು ಹೇಳುವ ಪಠ್ಯಗಳು. ಸಂವಾದ, ಸಂಭಾಷಣೆ, ಸಂಘಟನೆ, ಒಡನಾಟಗಳು ಹೃದಯ ಬೆಸುಗೆಯ ಸಾಧನಗಳು. ಮನಸನ್ನು ಹತ್ತಿರ ತರುವ ಸರಿ ತಪ್ಪುಗಳನ್ನು ಸಂಭಾಳಿಸಿಕೊಳ್ಳುವ ತಾಖತ್ತಿರುವುದು ಸಂಘಟನಾ ಪ್ರಕ್ರಿಯೆಗೆ

ಸೌಹಾರ್ದ ಚಿಂತನ ವೇದಿಕೆಯಿಂದ ಚರ್ಚ್‌ಗಳ ಮೇಲಿನ ಧಾಳಿ ಖಂಡಿಸಿ ರ್‍ಯಾಲಿ ಮತ್ತು ವಿಚಾರ ಸಂಕಿರಣ ನಡೆಸಿಯಾದ ಮೇಲೆ ಸಂತ ಮೇರಿ ಚರ್ಚಿನ ಫಾದರ್ ಒಬ್ಬರು ಫೋನು ಮಾಡಿ, "ಒಂದು ಹ್ಯೂಮನ್ ಕಮಿಷನ್ ಮಾಡೋಣ. ಎಲ್ಲ ಧರ್ಮಗಳೊಳಗಿನ ಧಾರ್ಮಿಕ ಮುಖಂಡರು ಮತ್ತು ಸಾಮಾಜಿಕ ಚಿಂತಕರು ಮತ್ತೆಲ್ಲರನ್ನೊಳಗೊಂಡು ಯಾವುದೇ ಧರ್ಮದ ಮೂಲಭೂತವಾದಿಗಳು ಈ ರೀತಿ ಶಾಂತಿ ಕದಡುವ ದುಷತ್ಯ ನಡೆಸಿದರೆ ಒಕ್ಕೊರಲಿನಿಂದ ಖಂಡಿಸಲು, ತಮ್ಮ ಧರ್ಮದವರಿಗೆ ತಾವೇ ತಿಳಿಹೇಳಲು ಸಾಧ್ಯವಾಗಬೇಕು....." ಎಂದರು.

'ಹೌದಲ್ಲ........ ಕೋಮುವಾದಿಗಳು ಆ್ಯಕ್ಷನ್ ಮಾಡಿದಾಗ ರಿಯಾಕ್ಷನ್ ಮಾತ್ರ ಸಾಧ್ಯವಾಗುತ್ತಿರುವುದು. ಈ ನೆಲದ ಕಾನೂನಾಗಿರುವ ಸೌಹಾರ್ದತೆ ಮತ್ತು ಪರಧರ್ಮ ಸಹಿಷ್ಣುತೆಯ ರಕ್ಷಣೆಗೆ ನಿತ್ಯ ನಿರಂತರ ಕೆಲಸ ಮಾಡುವ ಜರೂರಿ ಹಿಂದೆಂದಿಗಿಂತಲೂ ಅವಶ್ಯವಾಗಿದೆ. ಧರ್ಮವೆಂಬುದು ಅಫೀಮಾದರೆ ಜನ ಬದುಕು ಸರ್ವನಾಶದಂಚಿಗೆ ಜಾರುತ್ತದೆ. ದಿನ ಬದುಕಿನಲ್ಲಿ ಎಲ್ಲವೂ ನಾಜೂಕಿನಿಂದ ಕೂಡಿದೆ. ಏನೋ ಕಾರಣಕ್ಕೆ ಜಗಳ ಅಥವಾ ವೈಮನಸ್ಸು ಬಂದವರು ಬೇರೆ ಬೇರೆ ಕೋಮಿಗೆ ಸೇರಿದ್ದರೆ ಭಯಾನಕ ಅಪಾಯ ಕಟ್ಟಿಟ್ಟಿದ್ದು. ಚಿಕ್ಕ ಮಗಳೂರಿನ ಬಾಬಾಬುಡನ್‌ಗಿರಿಗೆ ದತ್ತಮಾಲೆ ಧರಿಸಿ ಹೊರಟ ಧರ್ಮಾಂಧರ ಗುಂಪು ಅಕ್ಷರಶ: ಭಯೋತ್ಪಾದಕರಂತೆ ವರ್ತಿಸುತ್ತಿದ್ದಾರೆ. ಸಾಮಾನ್ಯ ನೌಕರನ ಮೇಲೆ ಅಮಾನವೀಯ ಧಾಳಿ ನಡೆಸಿದ್ದಾರೆ.



ಬಾಬಾಬುಡನ್‌ಗಿರಿಯಲ್ಲಿ ಭಜರಂಗಿದಳ ಹಲ್ಲೆ

ತ್ರಿಶೂಲ ಪ್ರದರ್ಶಿಸಿ ಬೆದರಿಕೆ ಒಡ್ಡಿದ್ದಾರೆ. ಇವರು ದತ್ತನ ಭಕ್ತರೂ ಅಲ್ಲ ರಾಮನ ಭಕ್ತರೂ ಅಲ್ಲ. ಹಿಂದುತ್ವದ ಹೆಸರಿನಲ್ಲಿ ದೊಂಬಿ ಎಬ್ಬಿಸಿ ಗದ್ದುಗೆ ಭದ್ರ ಮಾಡಿಕೊಳ್ಳುವ ಅಸೀಮ ಸ್ವಾರ್ಥ ಮತ್ತು ಅಮಾನವೀಯ ಗೂಂಡಾಗಳು.

ಕೆಲವು ದಿನಗಳ ಹಿಂದೆ ರಾಯಚೂರು ಜಿಲ್ಲೆಯ ಹಟ್ಟಿಯಿಂದ ಸಂಗಾತಿಯೊಬ್ಬರು ಫೋನು ಮಾಡಿ, ಆತಂಕದ ಸುದ್ದಿಯೊಂದನ್ನು ಹೇಳಿದರು. ಒಂದು ಕೋಮಿನ ಹುಡುಗಿಗೆ ಇನ್ನೊಂದು ಕೋಮಿನ ಹುಡುಗ ಚುಡಾಯಿಸಿದ್ದಕ್ಕೆ ಹುಡುಗಿಯ ಕೋಮಿನವರು ಆ ಹುಡುಗನನ್ನು ಕರೆದು ಬಯ್ದು ಒಂದೆರಡು ಏಟು ಕೊಟ್ಟು ಬುದ್ಧಿ ಹೇಳಿದರಂತೆ. ಅಲ್ಲಿಂದ ಸುರುವಾಯ್ತು ಪರಸ್ಪರ ವೈಮನಸ್ಸು. ಎರಡೂ ಕೋಮಿನ ಕೆಲವರು ಹಲ್ಲೆ, ಹೊಡೆದಾಟ ಮತ್ತು ಚೂರಿ ಇರಿತದಂತಹ ಪ್ರಕರಣಗಳನ್ನು ಮಾಡಿದರು. ಇಷ್ಟು ಸಾಕಲ್ಲ ಕೋಮುದಂಗೆ ಹಬ್ಬಲು! ಆದರೆ ವಾತಾವರಣ ಬಿಸಿಯೇರುವ ಮುನ್ನವೇ ನಮ್ಮ ಸಂಗಾತಿಗಳು ತಕ್ಷಣ ಪೊಲೀಸ್ ಅಧಿಕಾರಿಗಳಿಗೆ ಭೇಟಿಯಾಗಿ, "ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಿ. ಕೋಮುಕದನವಾಗದಂತೆ ನೋಡಿಕೊಳ್ಳಿ. ಕೂಡಲೇ ಶಾಂತಿ ಸಭೆ ನಡೆಸಿ ಮತ್ತು ಈ ಪ್ರಕರಣವನ್ನು ಕೋಮುರಾಜಕರಣಕ್ಕೆ ಬಳಸಲು ಆಸ್ಪದ ಕೊಡಬೇಡಿ...." ಎಂದು ಆಗ್ರಹಿಸಿದರು. ಇದು ಆಯಾ ಧರ್ಮೀಯ ಸಮುದಾಯದವರೆಲ್ಲರಿಗೆ ಸಂಬಂಧಿಸಿಲ್ಲ. ಕೆಲವು ವ್ಯಕ್ತಿಗಳ ಅಪರಾಧ. ಆ ಸಮುದಾಯ ಪೂರ್ತಿ ಇದಕ್ಕೆ ಹೊಣೆಯಲ್ಲ..... ಎಂಬ ಸಂಗತಿ ಮನದಟ್ಟಾಗಿಸಬೇಕೆಂದು ಅಲ್ಲಿಯ ನಮ್ಮ ಸಂಗಾತಿಗಳು ತೀರ್ಮಾನಿಸಿದರು. ಆ ಗಲ್ಲಿಗಳಿಗೆ ಪ್ರವೇಶಿಸಿದರು. ಎರಡೂ ಸಮುದಾಯದವರೊಂದಿಗೆ ನಿರಂತರ ಸಂವಾದಕ್ಕೆ ಸಜ್ಜಾದರು. ಭಾವನಾತ್ಮಕ ನಡವಳಿಕೆಗೆ ಪ್ರಚೋದನೆ ಕೊಡಬೇಡಿ ಎಂದು ಕೋಮುಗಳ ಜನರಲ್ಲಿ ವಿನಂತಿಸಿದರು. ಮತ್ತೆ ಮತ್ತೆ ಸಭೆಗಳು ನಡೆದವು. ವೈಯಕ್ತಿಕ ನೆಲೆಯಲ್ಲಿಯೂ ಮಾತುಕತೆಗಳು ಆದವು. ಒಂದು ವೇಳೆ ಈ ಪ್ರಕರಣ ಕೋಮು ಪ್ರಶ್ನೆಯಾಗಿ ತಗೊಂಡರೆ ಎರಡೂ ಸಮುದಾಯದ ಬಡವರ, ಮಹಿಳೆ, ಮಕ್ಕಳ ಬದುಕಿಗೆ ತೊಂದರೆ ಮಾಡಿದಂತಾಗುತ್ತದೆ ಮತ್ತು ಸಂಘ ಪರಿವಾರವೇ ಇರಬಹುದು. ಜಾತಿವಾದಿ, ಕೋಮುವಾದಿ ಇತರ ಶಕ್ತಿಗಳಿರಬಹುದು. ಇದನ್ನು ತಮ್ಮ ದಾಳವಾಗಿಸಿಕೊಂಡು ಹಿಂಸಾತ್ಮಕ ಚಟುವಟಿಕೆಗೆ ಬಳಸಿಕೊಳ್ಳುವರು ಎಂಬ ಸತ್ಯವನ್ನು ಮತ್ತೆ ಮತ್ತೆ ಮನದಟ್ಟಾಗಿಸಲು ಶ್ರಮಿಸಿದರು. ಉದ್ಯೋಗ ಖಾತ್ರಿ ಕೆಲಸದಲ್ಲಿ ತೊಡಗಿದ ಜನರೂ ಆ ಎರಡೂ ಕೋಮಿನಲ್ಲಿದ್ದರು. ಅದರಲ್ಲಿಯೂ ಹೆಣ್ಣುಮಕ್ಕಳು ಜನವಾದಿಯ ಮುಖಂಡೆ ಸರಸ್ವತಿಯ ನೇತೃತ್ವದಲ್ಲಿ ಪೊಲೀಸ್ ಠಾಣೆಗೆ ಹೋಗಿ, "ತಪ್ಪಾದವುಗಿ ಶಿಕ್ಷಾ ಕುಡ್ರಿ. ಬ್ಯಾಡ್ಯಾರಂತಾರ? ನೀವು ಸುಮ್ಮ ಕುಂತ್ರ ದಂಗಾ ನಡಿತದ. ನಾವು ದುಡದುಣ್ಣವರೆಗಿ ತೊಂದ್ರಿ ಆಗ್ತದ. ಜನ್ರು ಶಾಂತಿಲಿಂದ ಇರಂಗ ನಿಮ್ಮ ಕೈಯಾನ ಕಾನೂನು ಬಳಸಬೇಕಾಗ್ತದ.." ಎಂದು ಒತ್ತಡ ಹೇರಿದರು. ಹೀಗೆ ಎರಡೂ ಕೋಮಿನವರು ಶಾಂತಿಪರ ನಿಲುವು ತಾಳಲು ಅಲ್ಲಿಯ ಸಂಗಾತಿಗಳಾದ ಶಿವಾನಂದ, ನರಸಿಂಹಪ್ಪ, ಕರಿಯಪ್ಪ, ಲಿಂಗಪ್ಪ, ಶಫಿ ಅಮಿನೊದ್ದಿನ್ ಯಂಕೋಬ, ಸರಸ್ವತಿ ಮತ್ತು ಸಂಘಟನೆಗಳ ಸಂಗಾತಿಗಳ ನಿರಂತರ ಪ್ರಯತ್ನ ಕಾರಣವಾಗಿದೆ. ಖಂಡಿತ ಇದೊಂದು ಸಾಮಾನ್ಯ ಸಂಗತಿಯಲ್ಲ. ಸಣ್ಣ ಕಾರಣಗಳು ದೊಡ್ಡ ದಂಗೆಗೆ ಬಳಸಿಕೊಳ್ಳಲು ಕೋಮುವಾದಿಗಳು ಕುತಂತ್ರ ಹೆಣೆಯುವಾಗ, ದೊಡ್ಡ ದಂಗೆಗಳ ಅಪಾಯ ತಡೆಗಟ್ಟಲು ಇಂತಹ ಪ್ರಜ್ಞಾಪೂರ್ವಕ ಪ್ರಯತ್ನಗಳು ಸೌಹಾರ್ದತೆಯನ್ನು ಸಂರಕ್ಷಿಸುತ್ತವೆ.

"ಕಾಮ್ರೇಡ್, ಆ ಗಲ್ಲಿಗಳಲ್ಲಿ ಉದ್ಯೋಗ ಖಾತ್ರಿ ಕೆಲಸಕ್ಕೆ ಅರ್ಜಿ ಹಾಕಿಸಿ ಗುಂಪುಗಳು ಮಾಡಿದ್ದಕ್ಕ, ಮತ್ತ ಅವ್ರಿಗಿ ಕೆಲಸ ಕೊಡಿಸಿದ್ದಕ್ಕ ಅವರ ನಮ್ಮ ನಡುವಿಗಿ ಸಂಬಂಧ ಏರ್ಪಟ್ಟಿತ್ತು. ಒಡನಾಟದಿಂದನೇ ಅವರೂ ನಮ್ಮ ಮಾತಿಗಿ ಮರ್ಯಾದಿ ಕೊಟ್ಟರು. ಹೊಸ ಪ್ರದೇಶದಾಗ ನಮ್ಮ ಮಾತು ಕೇಳವರು ಯಾರು? ಸಂಘ ಕಟ್ಟಿದರೇನೇ ಶಾಂತಿ ಕಾಪಾಡಿಲಕ್ಕ ಸಾಧ್ಯ.." ಎಂದು ಸರಸ್ವತಿ ತನಗರಿವಿಲ್ಲದೇನೇ ತುಂಬ ಮಹತ್ವ ಮಾತನ್ನು ಅಷ್ಟೇ ಸರಳವಾಗಿ ಹೇಳುತ್ತಿದ್ದಳು.

ಭಾಷಣಗಳು, ಘೋಷಣೆಗಳು, ಬರಹಗಳು ಇತಿಹಾಸವನ್ನರಹುವ, ಮಾಡಬೇಕಾದದ್ದನ್ನು ಹೇಳುವ ಪಠ್ಯಗಳು. ಸಂವಾದ, ಸಂಭಾಷಣೆ, ಸಂಘಟನೆ, ಒಡನಾಟಗಳು ಹೃದಯ ಬೆಸುಗೆಯ ಸಾಧನಗಳು. ಮನಸನ್ನು ಹತ್ತಿರ ತರುವ ಸರಿ ತಪ್ಪುಗಳನ್ನು ಸಂಭಾಳಿಸಿಕೊಳ್ಳುವ ತಾಖತ್ತಿರುವುದು ಸಂಘಟನಾ ಪ್ರಕ್ರಿಯೆಗೆ. ಯಾಂತ್ರಿಕವಲ್ಲದ ಮಾನವೀಯ ನಡೆಯಿಂದ ಇದೆಲ್ಲ ಸಾಧ್ಯ. ನೆಮ್ಮದಿಯ ಸಮಾಜಕ್ಕೆ ಸೃಜನಶೀಲ ನಡೆಯಿರುತ್ತದೆ. ಈ ಪ್ರಕ್ರಿಯೆಯು ನಡುವಿನಿಂದ ಅರಳುವ ಚಳುವಳಿಯು ಸಮಗ್ರ ಬದಲಾವಣೆಯತ್ತ ಹೊರಳುವ ಬೆಳಕಾಗಿರುತ್ತದೆ. ಇದನ್ನೇ ನಾವು ಮೊದಲಿಗೆ ಮಾಡಬೇಕಾದದ್ದು ಅಲ್ಲವೇ....?

ಪುಟ 13 ರಿಂದ

ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಇಂಧನ ಪೂರೈಕೆ ಬಂದ್.....

ಭಾರತವನ್ನು ಲೂಟಿ ಮಾಡಲು ಅವಕಾಶ: ಅಣು ಒಪ್ಪಂದಕ್ಕೆ ಅಂತಿಮ ಸಹಿ ಬೀಳುವ ಮೊದಲೇ ಅಣು ವ್ಯವಹಾರವನ್ನು ಕುದುರಿಸಲು ಭಾರತ ಸರ್ಕಾರ ಮುಂದಾಗಿದೆ. ಇದೇ ಸೆಪ್ಟೆಂಬರ್ 10 ರಂದು ಭಾರತ ಸರ್ಕಾರವು ಅಮೇರಿಕಾ ಸರ್ಕಾರಕ್ಕೆ ಪತ್ರ ಬರೆದಿದ್ದು, ಅಣು ಒಪ್ಪಂದದಿಂದ 10,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಬೇಕಾಗುವಷ್ಟು ಯುರೇನಿಯಂ, ತಂತ್ರಜ್ಞಾನ, ರಿಯಾಕ್ಟರ್‌ಗಳನ್ನು ಭಾರತ ಈ ಆಮದು ಮಾಡಿಕೊಳ್ಳುತ್ತದೆ ಎಂಬ ಭರವಸೆ ನೀಡಿದೆ.

ಅಮೇರಿಕಾದ ಕಂಪನಿಗಳು ಎರಡು ವಿದ್ಯುತ್ ಸ್ಥಾವರಗಳನ್ನು ಭಾರತದಲ್ಲಿ ಸ್ಥಾಪಿಸಲು ಅವಕಾಶ ನೀಡುವುದಾಗಿಯೂ ಒಪ್ಪಿಕೊಳ್ಳಲಾಗಿತ್ತು. ಇವುಗಳ ಒಟ್ಟು ಮೌಲ್ಯ 70 ಬಿಲಿಯನ್ ಡಾಲರ್, ಅಂದರೆ 3,50,000 ಕೋಟಿ ರೂ. ಈ ವ್ಯವಹಾರವನ್ನು ಇನ್ನಷ್ಟು ವೃದ್ಧಿಸುವ ಇಂಗಿತವನ್ನು ಭಾರತ ಸರ್ಕಾರ ನೀಡಿದೆ.

ಬೇಲ್ ಔಟ್ ಅಮೇರಿಕಾ?: ಇತ್ತೀಚೆಗೆ ದಿವಾಳಿ ಹೊಂದಿದ ಅಮೇರಿಕಾದ 12 ಹಣಕಾಸು ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಅಲ್ಲಿನ ಸರ್ಕಾರ 70,000 ಕೋಟಿ ಡಾಲರು(700 ಬಿಲಿಯನ್)ಗಳನ್ನು ನೀಡಿದೆ.

ಇದೀಗ 30 ವರ್ಷಗಳಿಂದ ಅಮೇರಿಕಾದಲ್ಲಿ ಸ್ಥಗಿತಗೊಂಡಿರುವ ಅಣು ವ್ಯಾಪಾರವನ್ನು ಪುನರುಜ್ಜೀವನಗೊಳಿಸಲು ಭಾರತ ಸರ್ಕಾರ ಉತ್ಸುಕವಾಗಿದೆಯೇ ಎಂಬ ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ಇದು ಅಣು ಒಪ್ಪಂದವಲ್ಲ ಬೇಲ್ ಔಟ್ ಅಮೇರಿಕಾದ (ಅಮೇರಿಕಾವನ್ನು ರಕ್ಷಿಸುವ) ಒಂದು ಪ್ರಹಸನ ಅಷ್ಟೆ.

ಭಾರತದ ಸಂಸತ್ತಿಗೆ ಅವಮಾನ: ಈಗಾಗಲೇ ಚರ್ಚಿತವಾಗಿರುವಂತೆ, ಅಮೇರಿಕಾದ ಅಧ್ಯಕ್ಷರು, ಅಷ್ಟೊಂದು ಪ್ರಭಾವಶಾಲಿಯಾದರೂ ಅಲ್ಲಿನ ಸಂಸತ್ತಿಗೆ-ಕಾಂಗ್ರೆಸ್ ಮತ್ತು ಸೆನೆಟ್ ಅಧೀನರಾಗಿದ್ದಾರೆ. ಆದ್ದರಿಂದಲೇ, ಅಣು ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಮಸೂದೆಯಲ್ಲಿ ಅಮೇರಿಕಾದ ಕಾಂಗ್ರೆಸ್ ಹಾಗೂ ಸೆನೆಟ್‌ನಲ್ಲಿ ಚರ್ಚೆಯಾಗಿ ಅಂಗೀಕಾರವಾದ ನಂತರವೇ ಸಹಿ ಹಾಕಿದ್ದರು. ಏತನ್ಮಧ್ಯೆ ಮಸೂದೆಗೆ ಹಲವಾರು ತಿದ್ದುಪಡಿಗಳನ್ನು ತರಲಾಗಿತ್ತು- ಭಾರತಕ್ಕೆ ವಿರುದ್ಧವಾದ ನಿಲುವುಗಳನ್ನು ಅಮೇರಿಕಾದಲ್ಲಿ ಬಹಿರಂಗ ಗೊಳಿಸಲಾಗಿತ್ತು.

ಆದರೆ ಭಾರತದ ಪ್ರಧಾನಿ ಇದಕ್ಕೆ ತದ್ವಿರುದ್ಧ. ಎಡಪಕ್ಷಗಳು ಬೆಂಬಲ ಹಿಂತೆಗೆದುಕೊಂಡು ವಿಶ್ವಾಸಮತ ಕೋರುವ ಸಂದರ್ಭದಲ್ಲಿ ಅಂತಿಮ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಸಂಸತ್ತಿನಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದ್ದರು.

ಆದರೆ ನಂತರ ನಡೆದದ್ದೇನು? ಆಗಸ್ಟ್ ತಿಂಗಳಲ್ಲಿ ನಡೆಯಬೇಕಾಗಿದ್ದ ಸಂಸತ್ ಅಧಿವೇಶನವನ್ನು 2 ತಿಂಗಳ ನಂತರ ನಡೆಸಲಾಗುತ್ತಿದೆ. ಒಪ್ಪಂದಕ್ಕೆ ಸಹಿ ಹಾಕಿದ ನಂತರವೇ ಅದನ್ನು ಚರ್ಚಿಸಲಾಗುತ್ತದೆ.

ಇದು ಭಾರತದ ಸಂಸತ್ತಿಗೆ ಮತ್ತು ಅದನ್ನು ಆಯ್ಕೆ ಮಾಡಿದ ಮತದಾರರಿಗೆ ಬಗೆದ ದ್ರೋಹವಲ್ಲದೇ ಮತ್ತೇನು?

- ಬಾಲಕೃಷ್ಣ ಶೆಟ್ಟಿ

ಹೋರಾಟಗಾರ ಸಂಗಾತಿ ಪರಶುರಾಮ ಮಸಾಲ್ದಿ ಸಂದರ್ಶನ

ಒಂದು ಶೋಷಣಾರಹಿತ ಸಮಾಜ ನಿರ್ಮಾಣಕ್ಕಾಗಿ ಹೋರಾಟ ಮಾಡುವ ಕಮ್ಯೂನಿಸ್ಟ್ ಚಳುವಳಿ ದೇಶದ ನೂರಾರು, ಸಾವಿರಾರು ಸುಪುತ್ರ, ಸುಪುತ್ರಿಯರನ್ನು ಆಕರ್ಷಿಸುತ್ತಾ ಬಂದಿದೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಪಕ್ಷದ ಆದರ್ಶಕ್ಕಾಗಿ ಜೀವನದುದ್ದಕ್ಕೂ ದುಡಿದು ಮಡಿಯುವ ಕಾರ್ಯಕರ್ತರೇ ಕಮ್ಯೂನಿಸ್ಟ್ ಚಳುವಳಿಯ ಆಸ್ತಿ. ಶಿರಸಿಯ ಹಿರಿಯ ಸಂಗಾತಿ ಪಿ.ಜಿ.ಮಸಾಲ್ದಿ ಅಂತಹ ಒಬ್ಬ ಕಾರ್ಯಕರ್ತರು. ಸುಮಾರು 50 ವರ್ಷಗಳ ಕಾಲ ಕಮ್ಯೂನಿಸ್ಟ್ ಚಳುವಳಿಗೆ ಸೇವೆ ಸಲ್ಲಿಸಿದ ಈಗ ತಮ್ಮ ಇಳಿ ವಯಸ್ಸಿನಲ್ಲಿ ಶಿರಸಿಯ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಸಂದರ್ಶಕರು
ಶಿವರಾಯ ದೇಸಾಯಿ


ಕಮ್ಯೂನಿಸ್ಟ್ ಪಕ್ಷ ಎಂದರೆ ಬೇರೆ ಎಲ್ಲಾ ರಾಜಕೀಯ ಪಕ್ಷಗಳ ತರಹದ ಒಂದು ಪಕ್ಷ ಅಲ್ಲ. ಕಮ್ಯೂನಿಸ್ಟ್ ಪಕ್ಷ ಅಂದರೆ ಅದೊಂದು ಚಳುವಳಿ. ಕಮ್ಯೂನಿಸ್ಟ್ ಪಕ್ಷವನ್ನು ಸೇರುವುದೆಂದರೆ ಒಂದು ಜನಾಂದೋಲನವನ್ನು ಸೇರುವುದು ಎಂದರ್ಥ. ಅದು ಶೋಷಣೆಯನ್ನು ಕೊನೆಗೊಳಿಸುವ ಗುರಿಯಿಟ್ಟುಕೊಂಡಿರುವ ಚಳುವಳಿ. ಎಲ್ಲ ರೀತಿಯ ಅಸಮಾನತೆಯನ್ನು, ತಾರತಮ್ಯವನ್ನು ನಿರ್ಮೂಲನ ಮಾಡಲು ಪಣತೊಟ್ಟ ಚಳುವಳಿ. ಶೋಷಿತರು ಶೋಷಕರ ವಿರುದ್ಧ ನಡೆಸುವ ವರ್ಗ ಹೋರಾಟದ ಮೂಲಕ ಸಮಾಜದ ಕ್ರಾಂತಿಕಾರಿ ಪುನರ್ರಚನೆಗೆ ಬದ್ಧವಾದ ಚಳುವಳಿ. ಒಂದು ಶೋಷಣಾರಹಿತ ಸಮಾಜ ನಿರ್ಮಾಣಕ್ಕಾಗಿ ಹೋರಾಟ ಮಾಡುವ ಕಮ್ಯೂನಿಸ್ಟ್ ಚಳುವಳಿ ದೇಶದ ನೂರಾರು, ಸಾವಿರಾರು ಸುಪುತ್ರ ಸುಪುತ್ರಿಯರನ್ನು ಆಕರ್ಷಿಸುತ್ತಾ ಬಂದಿದೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಪಕ್ಷದ ಆದರ್ಶಕ್ಕಾಗಿ ಜೀವನದುದ್ದಕ್ಕೂ ದುಡಿದು ಮಡಿಯುವ ಕಾರ್ಯಕರ್ತರೇ ಕಮ್ಯೂನಿಸ್ಟ್ ಚಳುವಳಿಯ ಆಸ್ತಿ. ಶಿರಸಿಯ ಹಿರಿಯ ಸಂಗಾತಿ ಪಿ.ಜಿ.ಮಸಾಲ್ದಿ ಅಂತಹ ಒಬ್ಬ ಕಾರ್ಯಕರ್ತರು. ಸುಮಾರು 50 ವರ್ಷಗಳ ಕಾಲ ಕಮ್ಯೂನಿಸ್ಟ್ ಚಳುವಳಿಗೆ ಸೇವೆ ಸಲ್ಲಿಸಿದ ಈಗ ತಮ್ಮ ಇಳಿ ವಯಸ್ಸಿನಲ್ಲಿ ಶಿರಸಿಯ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಪರಶುರಾಮ ಗಣಪತಿ ಮಸಾಲ್ದಿ ಅವರು ಬನವಾಸಿಯ ಗಣಪತಿ ಮತ್ತು ಗುತ್ತೆಮ್ಮ ರೈತ ದಂಪತಿಗಳ 8 ಜನ ಮಕ್ಕಳಲ್ಲಿ ಎರಡನೇಯವರು. 1924 ರಲ್ಲಿ ಜನಿಸಿದ್ದ ಪರಶುರಾಮ ಮಸಾಲ್ದಿ ಅವರು ಓದಿದ್ದು ಕೇವಲ ಒಂದನೇಯ ತರಗತಿವರೆಗೆ ಮಾತ್ರ. ಆದರೆ ಅಂತರಾಷ್ಟ್ರೀಯ ಮಟ್ಟದ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಹ ಅವರು ಚರ್ಚೆ ಮಾಡುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಉಳಿದುದೆಲ್ಲವನ್ನು ಅವರು ಓದಿದ್ದು 'ಕಮ್ಯೂನಿಸ್ಟ್ ಚಳುವಳಿ' ಎಂಬ ಶಾಲೆಯಲ್ಲಿ. ತಂದೆ ಗಣಪತಿ ಉಡಚಪ್ಪ ಮಸಾಲ್ದಿ ಒಬ್ಬ ಸಣ್ಣ ರೈತ, ಸುಮಾರು 4 ಎಕರೆ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದರು. ಕುಟುಂಬದ ತಾಪತ್ರಯಗಳಿಂದಾಗಿ ಅವರು ಆ ಭೂಮಿಯನ್ನು ಕಳೆದುಕೊಂಡರು. ಕೂಲಿನಾಲಿ ಮಾಡಿಕೊಂಡು ಬದುಕುವುದು ಅನಿವಾರ್ಯವಾಯಿತು. ಸುಮಾರು 30 ವರ್ಷ ಪ್ರಾಯದವರಿದ್ದಾಗ ಕಮ್ಯೂನಿಸ್ಟ್ ಚಳುವಳಿಗೆ ಆಕರ್ಷಿತರಾದ ಅವರು ಇತ್ತೀಚಿನವರೆಗೂ ಕ್ರಿಯಾಶೀಲರಾಗಿದ್ದರು.

'ಜನಶಕ್ತಿ'ಗಾಗಿ ಅವರನ್ನು ಇತ್ತೀಚೆಗೆ ಮಾತನಾಡಿಸಿದಾಗ ಸಂಗಾತಿ ಮಸಾಲ್ದಿ ಅವರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟರು.

ಪ್ರಶ್ನೆ : ಕಾಮ್ರೇಡ್ ಮಸಾಲ್ದಿಯವರೇ, ನೀವು ಕಮ್ಯೂನಿಸ್ಟ್ ಚಳುವಳಿಯ ಸಂಪರ್ಕಕ್ಕೆ ಬಂದದ್ದು ಹೇಗೆ?

ಉತ್ತರ : 1957 ರಲ್ಲಿ ಕೇರಳದಲ್ಲಿ ಮೊಟ್ಟಮೊದಲ ಬಾರಿಗೆ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಆಗ ಎಲ್ಲಾ ಕಡೆ ಕಮ್ಯೂನಿಸ್ಟ್ ವಿಚಾರಧಾರೆಯ ಕುರಿತು ಚರ್ಚೆಯಾಗುತ್ತಿತ್ತು. ಉತ್ತರಕನ್ನಡ ಜಿಲ್ಲೆಯಲ್ಲಿ ಆಗಾಗಲೇ ಕಮ್ಯೂನಿಸ್ಟ್ ಮುಂದಾಳುಗಳು ರೈತರನ್ನು ಸಂಘಟಿಸುತ್ತಿದ್ದರು. 1958 ರಲ್ಲಿ ರೈತಸಂಘದ ಒಂದು ಜಾಥಾ ಶಿರಸಿಗೆ ಬಂದಿತ್ತು. ಕೇರಳದ ಮಹಾನ್ ಹೋರಾಟಗಾರರು, ರೈತ ನಾಯಕರೂ ಆಗಿದ್ದ ಎ.ಕೆ.ಗೋಪಾಲನ್ ಅವರು ಮಾರಿಗುಡಿ ಬಳಿ ಭಾಷಣ ಮಾಡುತ್ತಿದ್ದರು. ಅವರ ಇಂಗ್ಲೀಷ್ ಭಾಷಣವನ್ನು ಶಿರಸಿಯ ಖ್ಯಾತ ನ್ಯಾಯವಾದಿಗಳೂ ಕಮ್ಯೂನಿಸ್ಟ್ ಪಕ್ಷದ ಮುಖಂಡರೂ ಆಗಿದ್ದ ಧಾರೇಶ್ವರ ವಕೀಲರು ಕನ್ನಡಕ್ಕೆ ಭಾಷಾಂತರ ಮಾಡುತ್ತಿದ್ದರು. ಭಾಷಣವನ್ನು ಕೇಳುತ್ತಾ ಇದ್ದ ನಾನು ಪ್ರಭಾವಿತನಾದೆ. ಕಾಮ್ರೇಡ್ ಧಾರೇಶ್ವರ್ ಅವರ ಪರಿಚಯವಾಯಿತು. ಇನ್ನುಳಿದ ಮುಖಂಡರಾದ ರಂಗಾತೋಮ ಮಡಗಾಂವಕರ, ಭೀಮಸಿ ಗೋಪು ನಾಯ್ಕ ಮೊದಲಾದವರ ಪರಿಚಯ ಮಾಡಿಕೊಂಡೆ. ಜಾಥಾ ಪ್ರಚಾರ ಮಾಡುತ್ತಾ ಹಳ್ಳಿ ಹಳ್ಳಿಗೆ ಹೋಯಿತು. ನಾನು ಸಹ ಜಾಥಾದೊಂದಿಗೆ ಕೆಲವು ಹಳ್ಳಿಗಳಿಗೆ ಹೋಗಿದ್ದೆ. ಹೀಗೆ ಮೊದಲು ರೈತಸಂಘದ ಸಂಪರ್ಕವಾಯಿತು. ಆನಂತರ 1962 ರಲ್ಲಿ ನಾನು ಕಮ್ಯೂನಿಸ್ಟ್ ಪಕ್ಷದ ಸದಸ್ಯನಾದೆ.



ಪ್ರಶ್ನೆ : ನೀವು ಭಾಗವಹಿಸಿದ ಮೊದಲ ಚಳುವಳಿ ಯಾವುದು?

ಉತ್ತರ : ನಾನು ಭಾಗವಹಿಸಿದ ಮೊದಲ ಚಳುವಳಿ ಎಂದ ಕೂಡಲೇ ನನಗೆ ನೆನಪಾಗುವುದು ತುಂಬಾ ಮುಖ್ಯವಾದ ಒಂದು ಚಳುವಳಿ. ಶಿರಸಿಯ ಜನತೆ ಉರುವಲು ಕಟ್ಟಿಗೆಗಾಗಿ ಅರಣ್ಯವನ್ನೇ ಅವಲಂಬಿಸಿದ್ದರು. ಕಾಡಿಗೆ ಹೋಗಿ ಒಂದು ಚಕ್ಕಡಿ ತುಂಬ ಕಟ್ಟಿಗೆಯನ್ನು ತರಲು ಅರಣ್ಯ ಇಲಾಖೆಗೆ ನಾಲ್ಕು ಆಣೆ ಹಣ ಸಂದಾಯ ಮಾಡಿ ಪರ್ಮಿಟ್ ಪಡೆಯಬೇಕಾಗಿತ್ತು. 1962 ರಲ್ಲಿ ದಿಢೀರನೆ ಅರಣ್ಯ ಇಲಾಖೆಯವರು ಪರ್ಮಿಟ್ ಶುಲ್ಕವನ್ನು 4 ಆಣೆಯಿಂದ 8 ಆಣೆಗೆ ಏರಿಸಿದರು. ಅರಣ್ಯ ಇಲಾಖೆಯ ಈ ಕ್ರಮವನ್ನು ವಿರೋಧಿಸಿ ರೈತ ಸಂಘವು ಹೋರಾಟವನ್ನು ಕೈಗೆತ್ತಿಕೊಂಡಿತು. ಏರಿಸಿದ ನಾಲ್ಕಾಣೆ ದರವನ್ನು ಇಳಿಸುವುದು ಮತ್ತು ಕಾಡಿನಿಂದ ಕಟ್ಟಿಗೆ ತರಲು ಎಲ್ಲರಿಗೂ ಅವಕಾಶ ನೀಡುವುದು ಹೋರಾಟದ ಪ್ರಮುಖ ಬೇಡಿಕೆಯಾಗಿದ್ದವು. ಪರ್ಮಿಟ್ ಪಡೆಯದೇ ಕಾಡಿಗೆ ಹೋಗಿ ಕಟ್ಟಿಗೆ ತರುವುದು, ತಂದ ಕಟ್ಟಿಗೆಯನ್ನು ಮಾರುವುದು ಅಥವಾ ಹರಾಜು ಹಾಕುವುದು ಈ ರೀತಿಯಲ್ಲಿ ಚಳುವಳಿಯನ್ನು ತೀವ್ರಗೊಳಿಸಲಾದಾಗ ಅರಣ್ಯ ಇಲಾಖೆಯವರು ನಮ್ಮ ಹಕ್ಕೊತ್ತಾಯಕ್ಕೆ ಮಣಿಯಲೇಬೇಕಾಯಿತು. ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಯಿತು. ಚಳುವಳಿಗೆ ದೊರೆತ ಜಯ ನಮಗೆಲ್ಲಾ ಹೊಸ ಸ್ಫೂರ್ತಿಯನ್ನು ನೀಡಿತು.

ಪ್ರಶ್ನೆ : ನೀವು ಭಾಗವಹಿಸಿದ ಮುಖ್ಯ ಚಳುವಳಿ ಯಾವುದು?

ಉತ್ತರ : 'ನಯಾ ಪೈಸಾ ಚಳುವಳಿ' ಎಂದೇ ಪ್ರಸಿದ್ಧವಾದ ಚಳುವಳಿ. 1962ನೇ ಇಸವಿ ಶಿರಸಿಯ ಎಲ್ಲಾ ಹೊಟೆಲ್ ಮಾಲೀಕರು ಆಗಸ್ಟ್ 15 ರಿಂದ ಚಹ ದರ 7 ಪೈಸೆ ಎಂದು ಬೋರ್ಡ್ ಹಾಕಿದ್ದರು. ಆ ಪ್ರಕಾರ 6 ಪೈಸೆಗೆ ಸಿಗುತ್ತಿದ್ದ ಒಂದು ಕಪ್ ಚಹಕ್ಕೆ 7 ಪೈಸೆ ಕೊಡಬೇಕಾಗಿ ಬಂದಾಗ ಹೋಟೆಲ್ ಎದುರು ಜನ ತಕರಾರು ತೆಗೆಯುತ್ತಿದ್ದರು. ಅದೊಂದು ದಿನ ನಾವು ಮತ್ತು ಧಾರೇಶ್ವರ ವಕೀಲರು ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಒಂದು ಹೊಟೇಲ್ ಎದುರು ಸಣ್ಣ ಗಲಾಟೆ ನಡೆದಿತ್ತು. ನಾವು ಮಧ್ಯಪ್ರವೇಶ ಮಾಡಿದೆವು. ಸುಮಾರು 30 ರಿಂದ 40 ಜನ ಸೇರಿ ತಹಶೀಲ್ದಾರರಿಗೆ ಮನವಿ ಕೊಟ್ಟೆವು. ನಂತರ ನಮ್ಮ ಹೋರಾಟವನ್ನು ಆರಂಭಿಸಿದೆವು. ಪ್ರತಿಯೊಂದು ದೊಡ್ಡ ಹೊಟೇಲ್ ಮುಂದೆ ನಾವು ಐದೈದು ಜನ ಧರಣಿ ಕುಳಿತುಕೊಳ್ಳುತ್ತಿದ್ದೆವು. ಹೊಟೇಲಿಗೆ ಹೋಗುವವರಿಗೆ 'ದಯವಿಟ್ಟು ಹೋಗಬೇಡಿ' ಎಂದು ಮನವಿ ಮಾಡಿಕೊಳ್ಳುತ್ತಿದ್ದೆವು. ನಾನು 'ಭಾರತ ಭವನ' ಹೊಟೇಲಿನ ಎದುರು ನಡೆದ ಧರಣಿಯ ನೇತೃತ್ವ ವಹಿಸಿದ್ದೆ. ಹೊಟೇಲ್ ಮಾಲೀಕರು ನಮ್ಮ ಮೇಲೆ ಬಿಸಿ ನೀರನ್ನು ಉಗ್ಗಿದರು. ಇದೇ ರೀತಿ ಹೋರಾಟ 5 ದಿನಗಳವರೆಗೆ ಮುಂದುವರೆಯಿತು. ಜನರಿಂದ ಒಳ್ಳೆಯ ಬೆಂಬಲ ದೊರೆಯಿತು. ಕಡೆಗೆ ಮಾಲೀಕರು ಮೊದಲಿನಂತೆ 6 ಪೈಸೆಗೆ ಚಹಾ ಮಾರಲು ಒಪ್ಪಿಕೊಂಡರು.

ಪ್ರಶ್ನೆ : ನೀವು ಭಾಗವಹಿಸಿದ ಇತರ ಚಳುವಳಿಗಳು ಯಾವುವು?

ಉತ್ತರ : ಅಕ್ಕಿ ಚಳುವಳಿ ಇನ್ನೊಂದು ಪ್ರಮುಖ ಚಳುವಳಿ. ಒಂದು ಪೈಲಿ ಅಕ್ಕಿ ದರವನ್ನು ಕಿರಾಣಿ ಅಂಗಡಿ ಮಾಲೀಕರು ಒಂದು ರೂಪಾಯಿ ನಾಲ್ಕಾಣೆಯಿಂದ ಎರಡು ರೂಪಾಯಿಗೆ ಏರಿಸಿದ್ದರು. ಅಕ್ಕಿ ದರ ಏರಿಕೆಯನ್ನು ವಿರೋಧಿಸಿ ರೈತ ಸಂಘ ಹೋರಾಟವನ್ನು ಆರಂಭಿಸಿತು. ಮೆರವಣಿಗೆ, ರಸ್ತೆ ತಡೆ ಮಾಡಲಾಯಿತು. ಏನೂ ಪ್ರಯೋಜನವಾಗಲಿಲ್ಲ. ಆಗ ರಾಮಕೃಷ್ಣ ಹೆಗಡೆ ಕರ್ನಾಟಕ ಸರ್ಕಾರದ ಹಣಕಾಸು ಸಚಿವರಾಗಿದ್ದರು. ಅವರು ಕಾಮ್ಕೊ ಫ್ಯಾಕ್ಟರಿಯ ಉದ್ಘಾಟನೆ ಮಾಡಲು ಬಂದಾಗ ನಾವು 500 ಕ್ಕೂ ಹೆಚ್ಚು ಜನ ಸೇರಿ ನಿಲೇಕಣಿ ಹತ್ತಿರ ಕಪ್ಪು ಬಾವುಟ ಪ್ರದರ್ಶನ ಮಾಡಿದೆವು. ಅನಂತರ ಚರ್ಚೆ ಮಾಡಿ ಹೆಗಡೆಯವರು ವಾಪಸ್ ಹೋಗುವಾಗ ಇನ್ನೂ ಹೆಚ್ಚು ಜನ ಸೇರಿಸಿ ಮನವಿ ಕೊಡುವುದೆಂದು ನಿರ್ಧರಿಸಿದೆವು. ಸಾವಿರಕ್ಕೂ ಹೆಚ್ಚು ಜನ ಸೇರಿದರು. ಎಲ್ಲರೂ ಸಾಲಾಗಿ ನಿಂತುಕೊಂಡಿದ್ದೆವು. ಕಡವೆ ಶ್ರೀಪಾದ ಹೆಗಡೆ ಅವರ ಒತ್ತಾಯದ ಮೇರೆಗೆ ಗೋವಾದಿಂದ ವಿಶೇಷ ಪೊಲೀಸ್ ಪಡೆಯನ್ನು ತರಿಸಲಾಗಿತ್ತು. ಅವರು ನಮ್ಮನ್ನು ಹೊಡೆಯಲು ಮೊದಲೇ ತಯಾರಿ ಮಾಡಿಕೊಂಡಿದ್ದರು. ಅನಗತ್ಯವಾಗಿ ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಿದರು. ಅನೇಕ ಜನ ನಾವು ಲಾಠಿ ಏಟಿಗೆ ಗುರಿಯಾಗಿ ಗಾಯಗೊಂಡೆವು. ನನ್ನ ಸ್ನೇಹಿತ ಅಹಮ್ಮದ್ ಬ್ಯಾರಿ ಗಂಭೀರವಾಗಿ ಗಾಯಗೊಂಡಿದ್ದ. ನಾನೂ ಸೇರಿದಂತೆ ಒಟ್ಟು 29 ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಪಕ್ಷದ ರಾಜ್ಯ ಸಮಿತಿಯಿಂದ ಕಾಮ್ರೇಡ್ ಎಸ್.ಸೂರ್ಯನಾರಾಯಣರಾವ್ ಅವರು ಬಂದು ಪರಿಶೀಲನೆ ಮಾಡಿದರು.

ಪ್ರಶ್ನೆ : ನೀವು ಎಷ್ಟು ಬಾರಿ ಬಂಧನಕ್ಕೆ ಒಳಗಾಗಿದ್ದೀರಿ? ನಿಮ್ಮ ಜೈಲುವಾಸದ ಅನುಭವ?

ಉತ್ತರ : ನಾನು ಸುಮಾರು 7 ಸಲ ಬಂಧನಕ್ಕೆ ಒಳಗಾಗಿದ್ದೇನೆ. ಕೆಲವೊಮ್ಮೆ ಮುಂಜಾಗ್ರತಾ ಕ್ರಮ ಎಂಬ ಹೆಸರಿನಲ್ಲಿ ನಮ್ಮನ್ನು ಬಂಧಿಸಲಾಗುತ್ತಿತ್ತು. ಒಮ್ಮೆ 20 ದಿನಗಳವರೆಗೆ ನಾವು ಕಾರವಾರ ಜೈಲಿನಲ್ಲಿದ್ದೆವು. ಜೈಲಿನಲ್ಲಿ ಮಧ್ಯಾಹ್ನ ಅನ್ನದ ಊಟ ಕೊಡುತ್ತಿರಲಿಲ್ಲ. ಕೇವಲ ರಾಗಿ ಗಂಜಿ ಮಾತ್ರ ಕೊಡುತ್ತಿದ್ದರು. ಸಂಜೆಗೆ ಮಾತ್ರ ಅನ್ನದ ಊಟ ಕೊಡುತ್ತಿದ್ದರು. ಮಧ್ಯಾಹ್ನವೂ ಅನ್ನ ಕೊಡಬೇಕೆಂದು ನಾವು ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿದೆವು. ಆಗ ಅನ್ನದ ಊಟ ಪ್ರಾರಂಭವಾಯಿತು. ಈಗಲೂ ಅದು ಮುಂದುವರೆದಿದೆ.

ಪುಟ 12ಕ್ಕೆ



ಹೆಣ್ಣು ಭ್ರೂಣ ಹತ್ಯೆ

ಹೆಣ್ಣು ಭ್ರೂಣಗಳನ್ನು ಬಸಿರಲ್ಲೇ ಕೊಲ್ಲಲು ಆಧುನಿಕ ವಿಜ್ಞಾನವನ್ನು ಬಳಸುತ್ತಿರುವುದೊಂದು ದುರಂತ.

ನಾನು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಗ ಸಮುದಾಯ ಆರೋಗ್ಯದ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಿ ಕೊಡಲಾಗಿತ್ತು. ಆದರೆ ಸಮಾಜ ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ (ವರದಕ್ಷಿಣೆ ಸಾವುಗಳು, ಸ್ತ್ರೀ ಭ್ರೂಣಹತ್ಯೆ ಇತ್ಯಾದಿ) ಏನನ್ನೂ ತಿಳಿಸಿಯೇ ಇರಲಿಲ್ಲ. ಕ್ರಮೇಣ ವೈದ್ಯಕೀಯ ಪುಸ್ತಕಗಳೊಂದಿಗೆ, ಸಮಾಜದ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಾಗ ಗೊತ್ತಾದ ಅನೇಕ ವಿಷಯಗಳಲ್ಲಿ ಸ್ತ್ರೀ ಶೋಷಣೆ ಮುಖ್ಯವಾದುದು.

ಸ್ತ್ರೀ ಶೋಷಣೆಯ ಹಲವಾರು ಮುಖಗಳನ್ನು ನಾವು ನಮ್ಮ ಸಮಾಜದಲ್ಲಿ ಕಾಣಬಹುದಾಗಿದೆ. ವರದಕ್ಷಿಣೆ ಸಾವು, ಲಿಂಗ ಸಮಾನತೆ ಇಲ್ಲದಿರುವುದು ಇತ್ಯಾದಿ, ಇತ್ಯಾದಿಗಳ ವಿರುದ್ಧ ಮಹಿಳೆಯರಲ್ಲಿ ಕೆಲವರು, ಸಾಮಾಜಿಕ ಕಳಕಳಿ ಇರುವವರು ಈ ಶೋಷಣೆಯ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ.

ನಮ್ಮ ಸಮಾಜದಲ್ಲಿ ಹೆಣ್ಣು ಮಗು ಹುಟ್ಟುವುದೆಂದರೆ ಮನೆಯೊಳಗೆ ಪೀಡೆ ಬಂದಂತೆ. 'ನಮಗೆ ಗಂಡು ಮಗು ಬೇಕು' ಎನ್ನುವ ಮಾತುಗಳು ಸಾಮಾನ್ಯ. ಇದಲ್ಲದೆ ಸ್ತ್ರೀ ಶಿಶು ಹತ್ಯೆಯ ಪರಿಪಾಠ ಅನೇಕ ಶತಮಾನಗಳಿಂದಲೂ ವ್ಯಾಪಕವಾಗಿ ಬೆಳೆದು ಬಂದಿದೆ. ಹೆಣ್ಣು ಅನೇಕ ತರಹದ ಲಿಂಗ ತಾರತಮ್ಯಗಳಿಗೆ ಬಲಿಯಾಗುತ್ತಾ ಬಂದಿದ್ದಾಳೆ. ನಮ್ಮ ಸಮಾಜ ಪುರುಷ ಪ್ರಧಾನ ಸಾಮಾಜವಾದ್ದರಿಂದ ಸ್ತ್ರೀ ಶಿಶುವಿನ ನಿರ್ಲಕ್ಷ್ಯ, ಮಹಿಳೆಯ ಮೇಲೆ ದೌರ್ಜನ್ಯ, ವರದಕ್ಷಿಣೆ ಕಿರುಕುಳ ಹಾಗೂ ಸಾವು ಮುಂತಾದವುಗಳನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ಇತ್ತೀಚೆಗೆ (1960) ವಿಜ್ಞಾನದ ಆವಿಷ್ಕಾರದಿಂದ ಗರ್ಭದೊಳಗಿರುವ ಭ್ರೂಣ ಪರೀಕ್ಷೆ ಸಾಧ್ಯವಾಯಿತು. ಭ್ರೂಣಕ್ಕೆ ಉಂಟಾಗುವ ರೋಗವನ್ನು ಮೊದಲೇ ಕಂಡುಹಿಡಿದಲ್ಲಿ ಕೆಲವು ಭೀಕರ ಕಾಯಿಲೆಗಳನ್ನು ತಡೆಯಬಹುದಾಗಿದ್ದಿತು. ಭ್ರೂಣವನ್ನು ತೆಗೆಯಲು ಗರ್ಭಪಾತ ಮಾಡುವ ತಂತ್ರಜ್ಞಾನವೂ ರೂಪುಗೊಂಡಿತು. ಅದೇ ವೇಳೆಗೆ ಗರ್ಭಜಲ ತೆಗೆದು (ಅಮ್ನಿಯೋಸೆಂಟೆಸಿಸ್) ಪರೀಕ್ಷೆ ಮಾಡಿ ಭ್ರೂಣದ ಲಿಂಗ ನಿರ್ಧರಿಸುವ ತಂತ್ರಜ್ಞಾನ ಲಭ್ಯವಾಯಿತು. ತಂತ್ರಜ್ಞಾನವನ್ನು ಆಧುನಿಕ ರೋಗ ಕಂಡು ಹಿಡಿಯಲು ಉಪಯೋಗಿಸುವುದರ ಬದಲು ಗರ್ಭಪಾತ ಮಾಡಿಸಲು ಉಪಯೋಗಿಸುವುದೇ ತಂತ್ರಜ್ಞಾನ ದುರ್ಬಳಕೆ ಎನ್ನಬಹುದಾಗಿದೆ.

ಭಾರತದಲ್ಲಿ ಮೊದಲ ಬಾರಿಗೆ ಪಂಜಾಬಿನಲ್ಲಿ ಹೆಣ್ಣು ಭ್ರೂಣವಿದೆಯೇ ಎಂದು ತಿಳಿಸುವ ಪರೀಕ್ಷಾ ಕೇಂದ್ರಗಳು ಪ್ರಾರಂಭವಾದವು. ವ್ಯಾಪಕವಾದ ಜಾಹೀರಾತನ್ನೂ ಕೊಡಲಾಯಿತು. ಈ ಪರೀಕ್ಷಾ ವಿಧಾನ ಅಷ್ಟೇನೂ ಸುಲಭವಾಗಿರದಿದ್ದರೂ, ನೋವು ರಹಿತವಾಗಿಲ್ಲದಿದ್ದರೂ, ಜನರು ಹೆಣ್ಣು ಭ್ರೂಣ ಕಂಡುಹಿಡಿಯಲು ಈ ಕೇಂದ್ರಗಳಿಗೆ ಬರಲಾರಂಭಿಸಿದರು.

ವಿಜ್ಞಾನದ ಆವಿಷ್ಕಾರ ನಿಲ್ಲುವಂತಹುದಲ್ಲ. ಇದೇ ವೇಳೆಗೆ ಜಾರಿಗೆ ಬಂದ ಇನ್ನೊಂದು ಆವಿಷ್ಕಾರ 'ಅಲ್ಟ್ರಾಸೌಂಡ್'. ಶಬ್ದದ ಅಲೆಗಳನ್ನು ದೇಹದ ಒಳಗಿನ ಅಂಗಾಂಗಗಳ ಮೇಲೆ ಅಪ್ಪಳಿಸುವಂತೆ ಮಾಡಿ ದೇಹದ ಅಂಗಾಂಗಗಳ ರೋಗ ಕಂಡು ಹಿಡಿಯಲು ಅಲ್ಟ್ರಾಸೌಂಡ್‌ನಿಂದ ಸಾಧ್ಯವಾಯಿತು. ಶಬ್ದದ ಅಲೆಗಳನ್ನು ಭ್ರೂಣದ ಮೇಲೆ ಅಪ್ಪಳಿಸುವಂತೆ ಮಾಡಿದಾಗ ಭ್ರೂಣದ ಲಿಂಗವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ಆವಿಷ್ಕಾರ ಅಮ್ನಿಯೋಸೆಂಟೆಸ್ಸಿಸ್ ವಿಧಾನಕ್ಕಿಂತ ಹೆಚ್ಚು ಸುಲಭ, ಅಪಾಯರಹಿತ, ಶೀಘ್ರ, ನೋವು ರಹಿತ ವಿಧಾನವಾಗಿದ್ದುದರಿಂದ, ಮೊದಲಿಗಿಂತಲೂ ಹೆಚ್ಚು ಜನರು ಲಿಂಗ ನಿರ್ಧಾರ ಆಧಾರಿತ ಗರ್ಭಪಾತವನ್ನು ಮಾಡಿಸಲು ಮುಂದಾದರು. ಇದನ್ನೂ ವೈದ್ಯಕೀಯ ವಿಜ್ಞಾನದ ದುರ್ಬಳಕೆಯೆಂದೇ ಹೇಳಬಹುದು.

ವಿಜ್ಞಾನದ ಮುನ್ನಡತೆಯಂತೆಯೇ ತಂತ್ರಜ್ಞಾನ ಮುನ್ನಡೆಯಿಂದ 1990 ರ ಸುಮಾರಿಗೆ ಮಹಿಳೆ ಭ್ರೂಣ ಪರೀಕ್ಷೆ ಮಾಡಿಸಿಕೊಳ್ಳಲು ಮೊಬೈಲ್ ಅಲ್ಟ್ರಾಸೌಂಡ್ ಉಪಕರಣ ಲಭ್ಯವಾಯಿತು. ಮಹಿಳೆಗೆ ದೂರದ ಪಟ್ಟಣಕ್ಕೆ ಹೋಗುವ ಅವಶ್ಯಕತೆ ಇಲ್ಲವಾಯಿತು. ಸಣ್ಣ ಅಲ್ಟ್ರಾಸೌಂಡ್ ಉಪಕರಣಗಳನ್ನು ವೈದ್ಯರು ತಮ್ಮ ಕಾರುಗಳಲ್ಲೇ ಇಟ್ಟುಕೊಂಡು ಬೇರೆ ಬೇರೆ ಊರುಗಳಿಗೆ ಹೋಗಿ ಭ್ರೂಣ ಪರೀಕ್ಷೆ ಮಾಡಿ, ಹೆಚ್ಚು ಹೆಚ್ಚು ಭ್ರೂಣಹತ್ಯೆಗೆ ಕಾರಣವಾದರು.

ಈಗ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಈ ಪರೀಕ್ಷಾ ಸೌಲಭ್ಯಗಳು ಲಭ್ಯವಿದೆ ಹಾಗೂ ಈ ಪರೀಕ್ಷಾ ವಿಧಾನದ ಸಹಾಯದಿಂದ ಹೆಣ್ಣು ಭ್ರೂಣಹತ್ಯೆ ನಿರಂತರವಾಗಿ ಸಾಗಿದೆ.

ಇದರಿಂದೇನು ಅಪಾಯ

ನಿಸರ್ಗ ಜೀವರಾಶಿಗಳ ಸಮತೋಲನವನ್ನು ಕಾಪಾಡುತ್ತಾ ಬಂದಿದೆ. ಅದರಿಂದಾಗಿಯೇ ಇಂದು ಹೆಣ್ಣು ಗಂಡುಗಳ ಸಂಖ್ಯೆ ಸುಮಾರು ಒಂದೇ ಆಗಿದೆ. ಆದರೆ ಹೆಣ್ಣು ಗರ್ಭಪಾತದಿಂದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ನಮ್ಮ ದೇಶದಲ್ಲಿ 1901 ಜನಗಣತಿಯಲ್ಲಿ ಸುಮಾರು 1000 ಗಂಡಸರಿಗೆ 961 ಹೆಣ್ಣು ಮಕ್ಕಳಿದ್ದರು. ಆದರೆ 2001 ರ ಸುಮಾರಿಗೆ 1000 ಗಂಡಸರಿಗೆ 933 ಹೆಣ್ಣು ಮಕ್ಕಳಿದ್ದಾರೆಂದು ಅಧ್ಯಯನಗಳಿಂದ ತಿಳಿದುಬಂದಿದೆ. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಹೆಣ್ಣುಗಳ ಸಂಖ್ಯೆ ಇನ್ನೂ ಕಡಿಮೆಯಾಗಿದ್ದು ಕಂಡುಬಂದಿದೆ. ಇದಕ್ಕೆ ಕಾರಣ ಕೇವಲ ಭ್ರೂಣಹತ್ಯೆ ಒಂದೇ ಆಗಿರದಿದ್ದರೂ, ಭ್ರೂಣಹತ್ಯೆ ಪ್ರಮುಖ ಪಾತ್ರ ವಹಿಸುತ್ತದೆಯೆಂದು ಹೇಳಬಹುದಾಗಿದೆ. ಈ ನೈಸರ್ಗಿಕ ಅಸಮತೋಲನೆಯಿಂದ ಅನೇಕ ಸಾಮಾಜಿಕ ಸಮಸ್ಯೆಗಳಾಗುವ ಸಾಧ್ಯತೆ ಇದೆ. ಹೆಣ್ಣು ಶಿಶುವೆಂದು ತಪ್ಪಾಗಿ ತೀರ್ಮಾನಿಸಿ ಅನೇಕ ಬಾರಿ ಗಂಡು ಶಿಶುಗಳ ಗರ್ಭಪಾತವಾಗಿರುವುದೂ ಕಂಡುಬಂದಿದೆ.

ವೈದ್ಯರೇಕೆ ಈ ವಿಧಾನವನ್ನು ಮುಂದುವರೆಸುತ್ತಿದ್ದಾರೆ ?

ವೈದ್ಯಕೀಯ ತಂತ್ರಜ್ಞಾನದ ದುರ್ಬಳಕೆ ಲಾಭ ತಂದುಕೊಡುತ್ತಿದೆ ! ಪ್ರತಿದಿನವೂ ಲಾಭ ತಂದುಕೊಡುವ ವ್ಯಾಪಾರ ಇದಾಗಿರುವುದರಿಂದ ಇದನ್ನು ವೈದ್ಯರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಅನೇಕ ಅಸಮರ್ಪಕ ಕಾರಣಗಳನ್ನು ನೀಡಲು ಮುಂದಾಗಿದ್ದಾರೆ. ಉದಾ: ಜನಸಂಖ್ಯಾ ನಿಯಂತ್ರಣ, ಅಸಹಾಯಕ ಮಹಿಳೆಗೆ ಸಹಾಯ, ಸಾಮಾಜಿಕ ಒತ್ತಡ, ಗಂಡ ಹೆಂಡಿರ ತೀರ್ಮಾನವನ್ನು ನಾವು ಬದಲಿಸಲು ಸಾಧ್ಯವಿಲ್ಲ ಇತ್ಯಾದಿ.

ಉತ್ತಮ ಶಿಕ್ಷಣ ಪಡೆದ, ಸರಕಾರದ ಮಾನ್ಯತೆ ಪಡೆದ, ತಜ್ಞ ಸ್ತ್ರೀ ವೈದ್ಯರು ಸ್ತ್ರೀಭ್ರೂಣ ಹತ್ಯೆ ಮಾಡಲು ಮುಂದಾಗಿದ್ದಾರೆ. ವೈದ್ಯಕೀಯ ವೃತ್ತಿ ವ್ಯಾಪರೀಕರಣಗೊಂಡಿದೆ. ಈ ಬೆಳವಣಿಗೆ ಕೆಲವರಿಗೆ ಚಿಂತೆ ಉಂಟುಮಾಡಿದ್ದರಿಂದ ಅದನ್ನು ಹತೋಟಿಯಲ್ಲಿ ತರುವ ಪ್ರಯತ್ನ ಜಾರಿಗೆ ಬಂತು. ಇದರಿಂದಾಗಿ ಸರ್ಕಾರ ವೈದ್ಯಕೀಯ ಗರ್ಭಪಾತ ಕಾನೂನನ್ನು 1971 ರಲ್ಲಿ ಅನುಷ್ಠಾನಕ್ಕೆ ತಂದಿತು. ಆದರೂ ಹೆಣ್ಣು ಗರ್ಭಪಾತಗಳು ನಿರಂತರವಾಗಿ ಸಾಗಿದುದರಿಂದ ಹೆಣ್ಣು ಗರ್ಭಪಾತವನ್ನು ನಿಷೇಧಿಸಿ ಕಾನೂನನ್ನು ತರಲಾಯಿತು (1994). ಆದರೂ ಹೆಣ್ಣು ಗರ್ಭಪಾತ ನಿಲ್ಲಿಸಿಲ್ಲ! 2001 ರಲ್ಲಿ ಅಲ್ಟ್ರಾಸೌಂಡ್ ಯಂತ್ರಗಳ ನೋಂದಣಿ ಮಾಡಿಸಲು ಕರೆ ನೀಡಲಾಯಿತು. ರಾಜ್ಯ ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಮಿತಿಗಳ ರಚನೆಯಾಗಿ ಸರ್ಕಾರಕ್ಕೆ ಕ್ರಿಯಾ ವರದಿ ಸಲ್ಲಿಸಲು ಒತ್ತಾಯಿಸಲಾಯಿತು.

ಸರ್ವೋಚ್ಚ ನ್ಯಾಯಾಲಯ, ಇತ್ತೀಚೆಗೆ ಎಚ್ಚೆತ್ತುಕೊಂಡು ವೈದ್ಯಕೀಯ ಕೌನ್ಸಿಲ್ ಈ ವೈದ್ಯರುಗಳ ಮೇಲೆ ಛೀಮಾರಿ ಹಾಕಿವೆ. ಜನಸಾಮಾನ್ಯರು ಜನಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಕೆಲವರೇ ಈ ವಿಷಯಗಳನ್ನು ಬದಲಿಸಲಾಗದು ಆದರೆ ಇವುಗಳನ್ನು ಬದಲಿಸುವ ಅಗತ್ಯತೆ ಇದೆ. ಹೆಣ್ಣು ಭ್ರೂಣ ಹತ್ಯೆ ಮುಂದುವರೆಸಿಕೊಂಡು ಹೋಗುತ್ತಿರುವ ವೈದ್ಯರಿಗೆ ಜನರೇ ಎಚ್ಚರಿಕೆ ಕೊಡಲು ಸಾಧ್ಯವೇ ?

ಪುಟ 14 ರಿಂದ

ಹೋರಾಟಗಾರ ಸಂಗಾತಿ ಪರಶುರಾಮ ಮಸಾಲ್ದಿ ಸಂದರ್ಶನ

ಪ್ರಶ್ನೆ : ನೀವು ಕಮ್ಯೂನಿಸ್ಟ್ ಪಕ್ಷದ ಯಾವ ಮುಖಂಡರೊಂದಿಗೆ ಕೂಡಿ ಕೆಲಸ ಮಾಡಿದ್ದೀರಿ?

ಉತ್ತರ : ಕಾಮ್ರೇಡ್ ಎನ್.ಎಲ್. ಉಪಾಧ್ಯಾಯರು, ಕಾಮ್ರೇಡ್ ಭೀಮಸಿ ಭೋವಿ, ಕಾಮ್ರೇಡ್ ಎಂ.ಎಚ್.ಕೃಷ್ಣಪ್ಪ, ಕಾಮ್ರೇಡ್ ಎಂ.ಕೆ.ಭಟ್, ಕಾಮ್ರೇಡ್ ಪಿ.ರಾಮಚಂದ್ರರಾವ್, ಕಾಮ್ರೇಡ್ ಎಂ.ಎಸ್.ಧಾರೇಶ್ವರ್ ಮತ್ತು ಈಗ ಸಧ್ಯ ದಾಂಡೇಲಿಯಲ್ಲಿರುವ ಕಾಮ್ರೇಡ್ ಮಂಜುನಾಥ ಫುಲ್ಕರ್ ಮೊದಲಾದ ಮುಖಂಡರ ಒಡನಾಟ ಮತ್ತು ಮಾರ್ಗದರ್ಶನದಲ್ಲಿ ನಾನು ಕೆಲಸ ಮಾಡಿದ್ದೇನೆ.

ಪ್ರಶ್ನೆ : ನೀವು ಕಮ್ಯೂನಿಸ್ಟ್ ಪಕ್ಷದಲ್ಲಿ ಯಾವ ಯಾವ ಜವಾಬ್ದಾರಿಗಳನ್ನು ನಿರ್ವಹಿಸಿದ್ದೀರಿ?

ಉತ್ತರ : ನಾನು ಪಕ್ಷದ ಶಿರಸಿ ಶಾಖೆಯ ಕಾರ್ಯದರ್ಶಿಯಾಗಿ 20 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. 1964ರಲ್ಲಿ ಸಿಪಿಐ ದಿಂದ ಬೇರ್ಪಟ್ಟು ಸಿಪಿಐ(ಎಂ) ಸ್ಥಾಪನೆಯಾದಾಗ ನಾನು ಸಿಪಿಐ(ಎಂ) ಸೇರಿದೆ. ರಾಜ್ಯಸಮಿತಿಯ ಅನೇಕ ಮುಖಂಡರು ಜೈಲಿನಲ್ಲಿದ್ದ ಆ ಸಮಯದಲ್ಲಿ ನಾನು ಕೆಲ ಕಾಲ ರಾಜ್ಯ ಸಮಿತಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಸಿಪಿಐ(ಎಂ) ಉತ್ತರಕನ್ನಡ ಜಿಲ್ಲಾ ಸಮಿತಿಯ ಸದಸ್ಯನಾಗಿ 2004ರವರೆಗೂ ಕಾರ್ಯ ನಿರ್ವಹಿಸಿದ್ದೇನೆ.

ರೈತ ಸಂಘದ ಅಧ್ಯಕ್ಷನಾಗಿ, ಶಿರಸಿ ಪೌರ ಕಾರ್ಮಿಕರ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. ಎರಡು ಬಾರಿ ಪಕ್ಷದ ಅಭ್ಯರ್ಥಿಯಾಗಿ ನಗರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ.

ಈಗ ನನಗೆ ಪಕ್ಷದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಆಗುತ್ತಿಲ್ಲ. ನನಗೆ 4 ಜನ ಮಕ್ಕಳಿದ್ದಾರೆ. 3 ಜನ ಹೆಣ್ಣು ಮಕ್ಕಳು ಪದವಿ ಮುಗಿಸಿದ್ದಾರೆ. ಒಬ್ಬನೇ ಮಗ ಸೈಕಲ್ ಅಂಗಡಿ ನಡೆಸುತ್ತಾನೆ. ಜನಶಕ್ತಿ ಪತ್ರಿಕೆಯನ್ನು ಓದುತ್ತೇನೆ. ಮೊದಲು ಐಕ್ಯರಂಗ ಬರುತ್ತಿತ್ತು. ಜನಶಕ್ತಿ ಹೊಸ ವಿನ್ಯಾಸದೊಂದಿಗೆ ಬರುತ್ತಿರುವುದು ನೋಡಿ ಸಂತೋಷವಾಗುತ್ತಿದೆ.

ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಇಂಧನ ಪೂರೈಕೆ ಬಂದ್

ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಇಂಧನ ಪೂರೈಕೆ ಬಂದ್.....

ಇದು ಕಮ್ಯೂನಿಸ್ಟ್‌ರು ಹೇಳಿದ ಮಾತಲ್ಲ. ಭಾರತದೊಂದಿಗೆ ಅಣು ಒಪ್ಪಂದಕ್ಕೆ ಅಂತಿಮ ಸಹಿ ಹಾಕುವ ಕೆಲವೇ ದಿನಗಳ ಮೊದಲು ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಶ್‌ರವರು ಬಲಗೈ ಎಂದೇ ಖ್ಯಾತರಾಗಿರುವ ಕಾರ್ಯದರ್ಶಿ ಕಂಡೋಲಿಸಾ ರೈಸ್ ಹೇಳಿದ ಮಾತು. 123 ಒಪ್ಪಂದಕ್ಕೆ ಅಮೇರಿಕಾದ ಸೆನೆಟ್‌ನ ಒಪ್ಪಿಗೆ ಪಡೆಯುವ ಮೊದಲು ಅಲ್ಲಿನ ಸದಸ್ಯರು ಎತ್ತಿದ ಸಂಶಯಗಳಿಗೆ ಆಕೆ ಮೇಲಿನಂತೆ ಉತ್ತರಿಸಿದಳು.

ನಿಜ, ಅಣ್ವಸ್ತ್ರ ಪರೀಕ್ಷೆ ನಡೆಸುವುದು ಭಾರತದ ಉದ್ದೇಶವಲ್ಲ. 1974ರಲ್ಲಿ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ (ಪೋಖ್ರಾನ್1) ಅಥವಾ 1998ರಲ್ಲಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರ ಪೋಖ್ರಾನ್ 2 ಪರೀಕ್ಷೆ ನಡೆಸಿದಾಗ ಎಡಪಕ್ಷಗಳು ಇದನ್ನು ವಿರೋಧಿಸಿದ್ದವು. ಭಾರತದ ವಿದೇಶಾಂಗ ನೀತಿಗೆ ಹಾಗೂ ವಿದೇಶಿ ವ್ಯವಹಾರಗಳಿಗೆ ಕುಂದುಂಟಾಗುತ್ತದೆ ಎಂಬ ಕಾರಣಕ್ಕಾಗಿ. ಅದರ ನಂತರ ನಡೆದಿದ್ದು ಎಲ್ಲರಿಗೂ ತಿಳಿದಿದ್ದೆ. 1974 ರಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದುದರ ಫಲವಾಗಿ ಮಹಾರಾಷ್ಟ್ರದ ಟ್ರಾಂಬೆಯಲ್ಲಿರುವ ಅಣು ವಿದ್ಯುತ್ ಸ್ಥಾವರಕ್ಕೆ ಯುರೇನಿಯಂ ಪೂರೈಕೆಯನ್ನು ಅಮೇರಿಕಾ ನಿಲ್ಲಿಸಿತ್ತು.

ಹಾಗೆಯೇ 1998ರಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದ ನಂತರ ಅಮೇರಿಕಾ ಮಾತ್ರವಲ್ಲದೇ ಅದರ ಹಲವಾರು ಮಿತ್ರ ದೇಶಗಳು ಅಣು ವಿದ್ಯುತ್ ಉತ್ಪಾದನೆಗೆ ಬೇಕಾದ ಯುರೇನಿಯಂ ಹಾಗೂ ರಿಯಾಕ್ಟರ್ ಮತ್ತಿತರ ಸಲಕರಣೆಗಳ ಪೂರೈಕೆಯನ್ನು ತಡೆಹಿಡಿದಿದ್ದವು. ಈ ಎಲ್ಲಾ ಸಂದರ್ಭಗಳಲ್ಲಿ ಭಾರತದ ನೆರವಿಗೆ ಬಂದಿದ್ದು ಅಂದಿನ ಯುಎಸ್‌ಎಸ್‌ಆರ್ ಮತ್ತು ಇಂದಿನ ರಶ್ಯಾ ದೇಶ.

ಆದರೆ ಅಣ್ವಸ್ತ್ರ ಪರೀಕ್ಷೆ ನಡೆಸುವುದು ಅಥವಾ ಬಿಡುವುದು ಭಾರತ ದೇಶದ ಸಾರ್ವಭೌಮ ಹಕ್ಕು, ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಇಂಧನ ಪೂರೈಕೆ ನಿಲ್ಲಿಸುತ್ತೇವೆ ಎಂಬ ಅಮೇರಿಕಾದ ನಿಲುವು ಭಾರತದ ಸಾರ್ವಭೌಮ ಹಕ್ಕಿಗೆ ಬಂದೊದಗಿದ ಧಕ್ಕೆ. ಇದು ಭಾರತವನ್ನು ಅಮೇರಿಕಾದ ಅಡಿಯಾಳಾಗಿಸುವ ತಂತ್ರಕ್ಕೆ ಬಲಿ ಬಿದ್ದಂತಾಗುತ್ತದೆ.

ಹೈಡ್ ಕಾಯ್ದೆಗೆ ಬಂಧಿತ: 123 ಒಪ್ಪಂದ ಎಂದೇ ಕರೆಯಲಾಗುವ ಅಣು ಒಪ್ಪಂದವು ಅಮೇರಿಕಾದಲ್ಲಿ ಜಾರಿಯಾಗಿರುವ ಹೈಡ್ ಕಾಯಿದೆಗೆ ಒಳಪಡುತ್ತದೆ ಎಂಬ ಅಂಶವನ್ನು ಇತ್ತೀಚೆಗೆ ಪಾಸು ಮಾಡಿದ ಮಸೂದೆಯಲ್ಲಿ ಒಂದಲ್ಲ, ಎರಡು ಬಾರಿ ಎಚ್ಚರಿಸಲಾಗಿದೆ ಎಂದು ಅಣು ವಿಜ್ಞಾನಿ ಹಾಗೂ ಅಣು ಇಂಧನ ಆಯೋಗದ (Atomic Energy Commission) ಮಾಜಿ ಅಧ್ಯಕ್ಷರಾದ ಪಿ.ಕೆ.ಅಯ್ಯಂಗಾರ್ ಹೇಳುತ್ತಾರೆ. ಅವರು 30.09.2008ರಂದು ಬರೆದ ಲೇಖನದಲ್ಲಿ ಅಮೇರಿಕಾದ ಮಸೂದೆಯ ವಿಭಾಗ 101 ಮತ್ತು 102 ರಲ್ಲಿ ಎರಡು ಬಾರಿ ಈ ಅಂಶವನ್ನು ಹೇಳಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಹೈಡ್ ಕಾಯಿದೆಯ ಪ್ರಕಾರ ಭಾರತವು ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಅಣು ಒಪ್ಪಂದವು ರದ್ದಾಗುತ್ತದೆ.

ಬೇರೆ ರಾಷ್ಟ್ರಗಳಿಂದ ಇಂಧನ ಪೂರೈಕೆ ಸಾಧ್ಯವೇ? ಒಂದು ವೇಳೆ ಅಮೇರಿಕಾ ಅಣು ಇಂಧನ ಪೂರೈಕೆ ನಿಲ್ಲಿಸಿದರೆ, ಅಣು ಶಕ್ತಿ ವಿತರಣಾ ಗುಂಪಿನ (ಎನ್‌ಎಸ್‌ಜಿ) ಇತರ ದೇಶಗಳು ಇಂಧನ ಮತ್ತು ಇತರೆ ಉಪಕರಣಗಳನ್ನು ನೀಡುತ್ತವೆ ಎಂಬುದು ಮನಮೋಹನ್ ಸಿಂಗ್ ಮತ್ತು ಬಳಗದವರ ಅಂಬೋಣ. ಅಣು ಒಪ್ಪಂದದ ಪ್ರಕಾರ ಇದು ಸರಿ. ಒಪ್ಪಂದದ ಆರ್ಟಿಕಲ್ 5 (ಬಿ 4) ರ ಪ್ರಕಾರ ಇಂಧನ ಪೂರೈಕೆಯಲ್ಲಿ ಅಡಚಣೆ ಉಂಟಾದಲ್ಲಿ ಅಮೇರಿಕಾವು ಇತರೆ ದೇಶಗಳಿಂದ ಇಂಧನ ಪಡೆಯುವಲ್ಲಿ ಸಹಕರಿಸುವುದು ಎಂದಿದೆ. ಆದರೆ ವಾಸ್ತವ ಚಿತ್ರಣ ಏನು ಹೇಳುತ್ತದೆ?

ಉತ್ತರ ಕೊರಿಯಾದೊಂದಿಗೆ ತಾನು ಮಾಡಿಕೊಂಡಿದ್ದ ಒಪ್ಪಂದವನ್ನೇ ಅಮೇರಿಕಾ ಉಲ್ಲಂಘಿಸಿತ್ತು. ಮಾತ್ರವಲ್ಲ ಅಣು ಇಂಧನದ ಕೊರತೆಯನ್ನು ನೀಗಿಸಲು ಉತ್ತರ ಕೊರಿಯಾ ತಾನೇ ಉತ್ಪಾದನೆ ಮಾಡಲು ಹೊರಟಾಗ ಅದರ ಮೇಲೆ ನಿರ್ಬಂಧ ಹೇರಿತ್ತು. ಕಪ್ಪು ಪಟ್ಟಿಯಲ್ಲಿ ಹಾಕಿತ್ತು. ನಂತರ ಚೀನಾ ಮತ್ತಿತರ ರಾಷ್ಟ್ರಗಳ ಮಧ್ಯ ಪ್ರವೇಶದ ಬಳಿಕವಷ್ಟೇ ಪರಿಸ್ಥಿತಿ ತಿಳಿಯಾಗಿದೆ.

ಇಂಧನ ಪುನರ್ ಬಳಕೆಯ ತಂತ್ರಜ್ಞಾನಕ್ಕೆ ಕುತ್ತು: ಅಣು ಇಂಧನವು ಪುನರ್ ಬಳಕೆ ಮಾಡಬಹುದಾದ ಇಂಧನ. ಯುರೇನಿಯಂ, ಪ್ಲುಟೇನಿಯಂ ಅಥವಾ ಥೋರಿಯಂ ಇವು ಅಣು ಇಂಧನದ ವಿವಿಧ ರೂಪಗಳು. ಇವುಗಳೆಲ್ಲವನ್ನು ಒಂದೊಂದಾಗಿ ವಿವರಿಸುವುದು ಈ ಲೇಖನದ ಉದ್ದೇಶವಲ್ಲ. ಯುರೇನಿಯಂ ರೂಪದಲ್ಲಿರುವ ಇಂಧನವನ್ನು ರಿಯಾಕ್ಟರ್ ಎಂದು ಕರೆಯಲ್ಪಟ್ಟಿರುವ ಉಪಕರಣದ ಮೂಲಕ ವಿದ್ಯುತ್ ಉತ್ಪಾದನೆಗೆ ಬಳಸುತ್ತಾರೆ. ಒಮ್ಮೆ ಬಳಕೆಯಾದ ಯುರೇನಿಯಂನ್ನು ಫಾಸ್ಟ್ ಬ್ರೀಡರ್ ರಿಯಾಕ್ಟರ್ ಮೂಲಕ ಉಪಯೋಗಿಸಿದಾಗ ವಿದ್ಯುತ್ ಉತ್ಪಾದನೆ ಆಗುವುದು ಮಾತ್ರವಲ್ಲದೆ, ಇನ್ನೊಮ್ಮೆ ಇಂಧನವಾಗಿ ಉಪಯೋಗಿಸಬಹುದಾದ ಪ್ಲಾಟೋನಿಯಂ ದೊರೆಯುತ್ತದೆ. ಆದರೆ ಹಾಗೆ ಮಾಡಲು ಅದಕ್ಕೆ ಸೂಕ್ತ ತಂತ್ರ ಜ್ಞಾನ ಬೇಕು. ಆ ತಂತ್ರಜ್ಞಾನವನ್ನು ಒದಗಿಸಲು ಅಮೇರಿಕಾ ಒಪ್ಪುತ್ತಿಲ್ಲ. ಅಮೇರಿಕಾ ಸರ್ಕಾರವು ಅಂಗೀಕರಿಸಿದ ಮಸೂದೆಯಲ್ಲಿ ಈ ಅಂಶವೂ ಕೂಡಾ ಸ್ಪಷ್ಟವಾಗಿದೆ. ಆ ಮಸೂದೆಯ ವಿಭಾಗ 204 (ಪುಟ.14, 11 ರಿಂದ 19 ನೇ ಸಾಲಿನವರೆಗೆ)ರ ಪ್ರಕಾರ ಅಮೇರಿಕಾದ ಅಧ್ಯಕ್ಷರು 'ಒಮ್ಮೆ ಬಳಸಿದ ಇಂಧನವನ್ನು ಪುನಃ ಬಳಸುವ ಮತ್ತು ಯುರೇನಿಯಂನ್ನು ಶ್ರೀಮಂತಗೊಳಿಸುವ (Enrichment) ತಂತ್ರಜ್ಞಾನವು ಇತರೆ ಎನ್‌ಎಸ್‌ಜಿ ದೇಶಗಳಿಂದ ದೊರೆಯದಂತೆ ಮಾಡಲು ಅಮೇರಿಕಾ ಕೆಲಸ ಮಾಡುವುದೆಂದು' ಸರ್ಟಿಫಿಕೇಟ್ ನೀಡಬೇಕಾಗಿದೆ. ಇಷ್ಟು ಮಾತ್ರವೇ ಅಲ್ಲದೆ, ವಿಭಾಗ 201ರ ಪ್ರಕಾರ (ಪುಟ 13, 1ರಿಂದ 4ನೇ ಸಾಲಿನವರೆಗೆ) ಭವಿಷ್ಯದಲ್ಲಿ ಇಂಧನ ಪುನರ್ ಬಳಕೆಯ ಕುರಿತಾಗಿ ಯಾವುದೇ ಪ್ರಸ್ತಾವನೆ ಬಂದರೂ ಅಮೇರಿಕಾದ ಕಾಂಗ್ರೆಸ್ ಒಪ್ಪಬೇಕು. ಅಂತಹ ಪ್ರಸ್ತಾವನೆಯನ್ನು ತಿರಸ್ಕರಿಸುವ ಹಕ್ಕನ್ನು ಅಮೇರಿಕಾದ ಕಾಂಗ್ರೆಸ್ ಉಳಿಸಿಕೊಂಡಿದೆ. ಇದರಿಂದಾಗಿ ತಮಿಳುನಾಡಿನಲ್ಲಿರುವ ಕೂಡಂಕುಲಂ ಅಣು ವಿದ್ಯುತ್ ಸ್ಥಾವರಕ್ಕೆ ರಷ್ಯಾ ನೀಡುತ್ತಿರುವ ಇಂಧನಕ್ಕೂ ಕುತ್ತು ಬರಬಹುದು. ಅಂದರೆ ಭಾರತವು ಸಂಪೂರ್ಣವಾಗಿ ಅಮೇರಿಕಾದ ಮೇಲೆ ಅವಲಂಬಿತವಾಗಿರಬೇಕು. ಇತರೆ ದೇಶಗಳ ಜೊತೆ ಒಪ್ಪಂದ ಮಾಡಿಕೊಂಡರೂ ಅಮೇರಿಕಾ ಹೇಳಿದಂತೆ ಕೇಳಬೇಕು ಎಂಬುದು ಅಮೇರಿಕಾದಲ್ಲಿ ಕಾಂಗ್ರೆಸ್‌ನಲ್ಲಿ ಮತ್ತು ಸೆನೆಟ್ ಅಂಗೀಕರಿಸಿದ ಮಸೂದೆಯ ತಿರುಳು.

ರಷ್ಯಾದೊಂದಿಗೆ ಈಗಾಗಲೇ ಜಾರಿಯಲ್ಲಿರುವ ಅಣು ಒಪ್ಪಂದದ ಪ್ರಕಾರ ಕೂಡಂಕುಲಂ ರಿಯಾಕ್ಟರ್‌ನಲ್ಲಿ ಬಳಸಿದ ಇಂಧನವನ್ನು ಭಾರತದಲ್ಲೇ ಪುನಃ ಬಳಸಲು ಅವಕಾಶವಿದೆ. ಅಂತರರಾಷ್ಟ್ರೀಯ ಅಣು ಶಕ್ತಿ ಒಕ್ಕೂಟ(ಐಎಇಎ) ದ ಸುರಕ್ಷತಾ ನಿಬಂಧನೆಗಳಿಗೆ ಒಳಪಟ್ಟಿರಬೇಕು ಅಷ್ಟೆ. ಇಂತಹ ಒಪ್ಪಂದವನ್ನು ಭಾರತ ಒಪ್ಪಿಕೊಂಡಿರುವಾಗ ಬುಶ್ ನಿಜವಾಗಿಯೂ ಭಾರತದ ಸ್ನೇಹಿತ ಆಗಿದ್ದರೆ ಇನ್ನೂ ಒಳ್ಳೆಯ ಒಪ್ಪಂದಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು. ಬದಲಾಗಿ ಇಂಧನ ಪುನರ್ ಬಳಕೆಯ ತಂತ್ರಜ್ಞಾನವನ್ನೇ ನೀಡದಿರುವುದು ಏತಕ್ಕೆ? ಎಂದು ಪಿ.ಕೆ. ಅಯ್ಯಂಗಾರ್ ಪ್ರಶ್ನಿಸುತ್ತಾರೆ.

ಪುಟ 10 ಕ್ಕೆ



ಇಂತಹ ಕರಾಳ ಚರಿತ್ರೆಉಳ್ಳ ಅಮೇರಿಕಾ ಭಾರತಕ್ಕೆ ಸಹಾಯ ಮಾಡುತ್ತದೆ ಎಂದರೆ ನಂಬಲು ಸಾಧ್ಯವೇ? ಮಾತ್ರವಲ್ಲ ಅಮೇರಿಕಾದಲ್ಲಿ ಇತ್ತೀಚೆಗೆ ಅಂಗೀಕಾರ ಮಾಡಿದ ಮಸೂದೆಯ ವಿಭಾಗ 102 (ಪುಟ5, 4 ರಿಂದ 12 ರವರೆಗಿನ ಸಾಲುಗಳು) ರಲ್ಲಿ ಇಂಧನ ಪೂರೈಕೆಯಲ್ಲಿ ಅಡಚಣೆ ಉಂಟಾದರೆ ಇತರೆ ದೇಶಗಳಿಂದ ಅದರ ಪೂರೈಕೆಗೆ ಸಹಾಯ ಮಾಡುತ್ತದೆ ಎಂಬ ಅಂಶ ಅದರಲ್ಲಿ ಇಲ್ಲ. ಬದಲಾಗಿ, 'ಇತರೆ ದೇಶಗಳಿಂದ ಉಪಕರಣಗಳು, ಕಚ್ಚಾವಸ್ತುಗಳು ಅಥವಾ ತಂತ್ರಜ್ಞಾನವು ಭಾರತಕ್ಕೆ ದೊರಕದಂತೆ ಅಮೇರಿಕಾ ಪ್ರಯತ್ನಿಸುವುದಾಗಿ ಹೇಳಿದೆ. ಇದನ್ನು ಅಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷರಾದ ಪಿ.ಕೆ.ಅಯ್ಯಂಗಾರ್ ತನ್ನ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಅಡ್ವಾಣಿಯವರು ಬೇಡಿಕೊಂಡಿದ್ದು ಏನು?

ಅಕ್ಟೋಬರ್ 5 ರ ಹಿಂದೂ ಪತ್ರಿಕೆಯಲ್ಲಿ 8ನೇ ಪುಟದಲ್ಲಿ ಎರಡು ಭಾವಚಿತ್ರಗಳಿದ್ದವು. ಅಮೇರಿಕಾ ಕಾರ್ಯದರ್ಶಿ ಕಾಂಡೂಲಿಸಾ ರೈಸ್ ಭೇಟಿಯ ಹಿನ್ನೆಲೆಯಲ್ಲಿ ಭಾರತ ಅಮೇರಿಕಾ ಅಣು ಒಪ್ಪಂದವನ್ನು ವಿರೋಧಿಸುವ ಎಡಪಕ್ಷಗಳ ಪ್ರತಿಭಟನೆಯ ಭಾವಚಿತ್ರ ಒಂದೆಡೆಯಾದರೆ, ಕಂಡೋಲಿಸಾರವರ ಕೈಕುಲುಕುವ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಯವರದ್ದು ಇನ್ನೊಂದೆಡೆ. ಆ ಚಿತ್ರದ ಕೆಳಗಡೆ ಸುದ್ದಿಯೂ ಇತ್ತು. ಅಷ್ಟೊಂದು ದೂರದಿಂದ ಭಾರತಕ್ಕೆ ಬಂದಿದ್ದ ಅಮೇರಿಕಾದ ಕಾರ್ಯದರ್ಶಿಯವರಿಂದ ಅಡ್ವಾನಿಯವರು ಬೇಡಿಕೊಂಡಿದ್ದು ಏನು ಗೊತ್ತೇ? ಗುಜರಾತ್ ಮುಖ್ಯಮಂತ್ರಿ ಮೋದಿಯವರಿಗೆ ಅಮೇರಿಕಾಕ್ಕೆ ಹೋಗಲು ವೀಸಾ ಕೊಡಿ ಎಂದು. ಅಪ್ಪಟ ದೇಶ ಪ್ರೇಮಿಗಳೆಂದು ತಮಗೆ ತಾವೇ ಕರೆಸಿಕೊಳ್ಳುವ ಬಿಜೆಪಿ ಮುಖಂಡರ ಅಮೇರಿಕಾ ಪ್ರೇಮ ಎಷ್ಟು ಗಾಢವಾಗಿದೆ ನೋಡಿ!

ಲೋಕಸಭೆಯಲ್ಲಿ ಯುಪಿಎ ಸರ್ಕಾರದ ವಿರುದ್ಧ ಮತಹಾಕಿದ ಬಿಜೆಪಿ ಮುಖಂಡರು ಕಾಂಡೋಲಿಸಾ ರೈಸ್ ಭಾರತಕ್ಕೆ ಬಂದಾಗ ನಾಚಿ ನೀರಾದರು. ಭಾರತ ಅಮೇರಿಕಾ ನಡುವೆ ಅಣು ಒಪ್ಪಂದವೊಂದು ಆಗುತ್ತಿದೆ ಎಂಬುದನ್ನೇ ಮರೆತರು!

‘ಮಾಧ್ಯಮಗಳು ಪರಿಹಾರದ ಭಾಗವಾಗಬೇಕು, ಸಮಸ್ಯೆಯ ಭಾಗವಾಗಬಾರದು’

ಸೆಪ್ಟೆಂಬರ್ 19 ರಂದು ದಿಲ್ಲಿಯ ಜಾಮಿಯಾನಗರದಲ್ಲಿ ಪೋಲೀಸರು ನಡೆಸಿದ ‘ಮುಖಾಮುಖಿ’ (ಎನ್ಕೌಂಟರ್) ಯನ್ನು ಮಾಧ್ಯಮಗಳು ವರದಿ ಮಾಡಿದ ರೀತಿಯ ಅಧ್ಯಯನ ಮಾಡುತ್ತಿರುವ ದಿಲ್ಲಿ ಪತ್ರಕರ್ತರ ಸಂಘ(ಡಿಯುಜೆ)ದ ನಡವಳಿ ನೀತಿ ಸಮಿತಿಯ ಮಧ್ಯಂತರ ವರದಿ ಪ್ರಕಟವಾಗಿದೆ. ಈ ಸಂದರ್ಭದಲ್ಲಿ ಡಿಯುಜೆ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಈ ಘಟನೆಯಿಂದ ಮಾಧ್ಯಮಗಳ ವಿಶ್ವಸನೀಯತೆ ಹಿಂದೆಂದೂ ಕಾಣದ ಕೀಳುಮಟ್ಟಕ್ಕೆ ಇಳಿದಿದೆ, ಮತ್ತೆ ಆ ವಿಶ್ವಸನೀಯತೆಯನ್ನು ಗಳಿಸುವುದು ಹೇಗೆ ಎಂಬುದೇ ಅವುಗಳ ಮುಂದಿರುವ ಸವಾಲು ಎಂಬ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ದಿಲ್ಲಿ ಸ್ಫೋಟಗಳು: ಮಾಧ್ಯಮ ವರದಿಗಳ ಮೇಲೆ ಒಂದು ನೋಟ’ ಎಂಬ ಈ ಮಧ್ಯಂತರ ವರದಿಯನ್ನು ಪ್ರಖ್ಯಾತ ಹಿರಿಯ ಪತ್ರಕರ್ತ ಕುಲದೀಪ್ ನಯ್ಯರ್‌ರವರು ಅಕ್ಟೋಬರ್ 3ರಂದು ಬಿಡುಗಡೆ ಮಾಡಿದರು. ಈ ವರದಿ ಇತ್ತೀಚೆಗೆ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಈ ಘಟನೆಯ ಬಗ್ಗೆ ಬಂದಿರುವ ವರದಿಗಳಲ್ಲಿರುವ ಲೋಪದೋಷಗಳನ್ನು ಕಟುವಾಗಿ ಟೀಕಿಸಿದೆ.

ಸಿಪಿಐ(ಎಂ) ಸಂಸತ್ ಸದಸ್ಯ ಹನ್ನನ್ ಮೊಲ್ಲಾ ಮಾತನಾಡುತ್ತಾ ಮಾಧ್ಯಮಗಳು ನಿಜ ಸಂಗತಿಗಳನ್ನು ಪರೀಕ್ಷಿಸದೆ ಪೈಪೋಟಿಯಿಂದ ವರದಿ ಮಾಡುವ ಭರದಲ್ಲಿ ಇಡೀ ಸಮುದಾಯವನ್ನೇ ಭಯೋತ್ಪಾದಕರು ಎಂದು ಚಿತ್ರಿಸಿದಂತಾಗಿದೆ ಎಂದು ಖೇದ ವ್ಯಕ್ತಪಡಿಸಿದರು. ಇದರಿಂದ ಈ ಸಮುದಾಯದಲ್ಲಿ ಭೀತಿ, ಅದರಿಂದ ಹತಾಶೆಯ ಭಾವನೆ ಸೃಷ್ಟಿಯಾಗಿದೆ ಎಂದರು. ವರದಿಗಳಲ್ಲಿ ಊಹಾಪೋಹಗಳು ಅಪಾಯಕಾರಿ ಎಂದರು.

ಆರಂಭ ಬಿಂದುವಾಗಲಿ

ಕುಲದೀಪ್ ನಯ್ಯರ್ ರವರು ವರದಿ ಬಿಡುಗಡೆ ಮಾಡುತ್ತಾ ತುರ್ತು ಪರಿಸ್ಥಿತಿಯ ಅನುಭವದ ನಂತರ ಮಾಧ್ಯಮಗಳ ಮೇಲೆ ಸರಕಾರದ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ ಹಣಕಾಸು ಒದಗಿಸುವವರ, ರಾಜಕೀಯ ಪಕ್ಷಗಳ ಮತ್ತು ಇತರರ ಒತ್ತಡಗಳು ಹೆಚ್ಚಿವೆ ಎಂದರು. ಇದು ಮಾಧ್ಯಮಗಳ ವಿಶ್ವಸನೀಯತೆಯನ್ನು ಕುಗ್ಗಿಸಿದ್ದು ಈ ವರದಿ ಅದನ್ನು ಮತ್ತೆ ಗಳಿಸುವಲ್ಲಿ ಆರಂಭ ಬಿಂದುವಾಗಲಿ ಎಂದರು. ಗುಜರಾತ್ ಹತ್ಯಾಕಾಂಡವನ್ನು ನೆನಪಿಸುತ್ತಾ ಗುಜರಾತಿ ಮಾಧ್ಯಮದಲ್ಲಿ ವಸ್ತುನಿಷ್ಠ ವರದಿಗಳ ಅಭಾವ ಕಂಡು ಬಂತು, ಆದರೆ ಇಂಗ್ಲಿಷ್ ಮಾಧ್ಯಮ ನ್ಯಾಯಪೂರ್ಣ ವರದಿಗಳ ಮೂಲಕ ಮಾನ ಉಳಿಸಿತು, ಗಲಭೆ ಸಂತ್ರಸ್ತ ಸಮುದಾಯದ ವಿಶ್ವಾಸ ಗೆದ್ದಿತು ಎಂದರು. ಜಾಮಿಯಾನಗರ ಮುಖಾಮುಖಿಯನ್ನು ಸ್ವಯಂಪ್ರೇರಣೆಯಿಂದ ಗಮನಕ್ಕೆ ತಗೊಂಡಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಪಾರದರ್ಶಕತೆಯಿರುವಂತೆ ಬಹಿರಂಗ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ಈ ಎನ್‌ಕೌಂಟರ್‌ನ ಮಾಧ್ಯಮ ವರದಿಗಳು ಮುಸ್ಲಿಮರಲ್ಲಿ ತಮ್ಮನ್ನು ಗುರಿಮಾಡಲಾಗುತ್ತಿದೆ, ದೇಶವಿರೋಧಿಗಳು ಎಂದು ಚಿತ್ರಿಸಲಾಗುತ್ತಿದೆ ಎಂಬ ಭಾವನೆಗಳನ್ನು ಉಂಟು ಮಾಡಿವೆ ಎಂದು ಜಾಮಿಯ ವಿಶ್ವವಿದ್ಯಾಲಯದ ಎ ಜೆ ಕಿಡ್ವಯಿ ಸಾಮೂಹಿಕ ಸಂಪರ್ಕ ಸಂಶೋಧನಾ ಕೇಂದ್ರದ ಪ್ರೊಫೆಸರ್ ಒಬೈದ್ ಸಿದ್ದಿಕಿ ಹೇಳಿದರು. ಇದು ಬಹುಪಾಲು ಮುಸ್ಲಿಮರು ರಾಷ್ಟ್ರೀಯವಾದಿಗಳು, ಸಿಮಿ ಅಥವ ಇಂಡಿಯನ್ ಮುಜಾಹಿದೀನ್‌ಗಳಂತಹ ಸಂಘಟನೆಗಳ ಅನುಯಾಯಿಗಳ ಸಂಖ್ಯೆ ನಗಣ್ಯ ಎಂಬ ನಿಜಸಂಗತಿಗೆ ವಿರುದ್ಧವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಅಜೊಯ್ ಬೋಸ್, ಅಂಜಲಿ ದೇಶಪಾಂಡೆ, ಸುಜಾತಾ ಮಧೋಕ್ ಮತ್ತು ಅಮಿತ್ ಪ್ರಕಾಶರವರಂತಹ ಹಿರಿಯ ಪತ್ರಕರ್ತರು ಚರ್ಚೆಯಲ್ಲಿ ಭಾಗವಹಿಸಿದರು. ಚರ್ಚೆಗಳನ್ನು ನಿರ್ವಹಿಸಿದ ಡಿಯುಜೆ ಅಧ್ಯಕ್ಷ ಎಸ್ ಕೆ ಪಾಂಡೆ ಕೋಮುವಾದೀಕರಣ ಕೆಟ್ಟದ್ದು, ಆದರೆ ವರದಿ ಮಾಡುವಲ್ಲಿ ಕೋಮುವಾದೀಕರಣ ಮತ್ತು ಭಾವೋದ್ರೀಕರಣ ಬಹಳ ಆತಂಕಕಾರಿ ಎಂದರು. ಭಯೋತ್ಪಾದಕತೆ ಹೊಲಸು ತಲೆಯೆತ್ತುತ್ತಿರುವಾಗ ಮಾಧ್ಯಮ ತನ್ನ ಪಾತ್ರದ ಬಗ್ಗೆ ಸ್ವಯಂಪರೀಕ್ಷೆ ನಡೆಸಬೇಕಾಗಿದೆ, ಅದು ಪರಿಹಾರದ ಭಾಗವಾಗಬೇಕೇ ಹೊರತು ಸಮಸ್ಯೆಯ ಭಾಗವೇ ಆಗಿ ಬಿಡಬಾರದು ಎಂದರು. ಈ ದಿಕ್ಕಿನಲ್ಲಿ ಡಿಯುಜೆ ವರದಿ ಈ ಪೋಲೀಸ್ ಕಾರ್ಯಾಚರಣೆಯ ಬಗ್ಗೆ ಮಾಧ್ಯಮ ವರದಿಗಳ ವಿಮರ್ಶೆಯ ಆರಂಭ ಎಂದ ಅವರು ಇದು ಮಧ್ಯಂತರ ವರದಿಯಷ್ಟೇ, ಬಹಳಷ್ಟು ಮಂದಿ ಇದರಲ್ಲಿ ಸಹಕರಿಸಿದ್ದಾರೆ ಎಂದರು.

ವೃತ್ತಿ ಹೊಣೆಗಾರಿಕೆ

ಮಧ್ಯಂತರ ವರದಿಯ ಮುನ್ನುಡಿ ಒಂದು ಡಜನ್ ಪತ್ರಿಕೆಗಳು, ಮ್ಯಾಗಜಿನ್ ಗಳು ಮತ್ತು ಉರ್ದು ಮಾಧ್ಯಮದಲ್ಲಿ ಈ ಘಟನೆಯ ವರದಿಗಳನ್ನು ಇಲ್ಲಿ ವಿಶ್ಲೇಷಣೆ ಮಾಡುವಾಗ ವರದಿಗಳ ಮಟ್ಟದಲ್ಲಿ ಅವನತಿ ಎದ್ದು ಕಾಣುತ್ತಿದೆ ಎಂದಿದೆ. ವರದಿಯಲ್ಲಿ ನಿಖರತೆ ಮಾಧ್ಯಮದ ಪ್ರಥಮ ಹೊಣೆ. ಸಂಗತಿಗಳಲ್ಲಿ ವಿವಾದವಿದ್ದಾಗ, ಅವನ್ನು ತೋರಿಸಬೇಕು, ಅವುಗಳ ಮೂಲಗಳನ್ನು ಪ್ರಶ್ನಿಸಬೇಕು. ಬಹು ಮೂಲಗಳನ್ನು ಬಳಸಿಕೊಂಡು ಘಟನೆಗಳ ವಿವಿಧ ಆವೃತ್ತಿಗಳನ್ನು ಮುಂದಿಡುವುದು ವಿಶ್ವಾಸಾರ್ಹ ವರದಿಗಾರಿಕೆಯ ಅಭಿನ್ನ ಅಂಗವಾಗಬೇಕು ಎಂದು ಅದು ಹೇಳಿದೆ.

ಸತ್ಯವನ್ನು ಅನಾವರಣಗೊಳಿಸುವುದು ಯಾವಾಗಲೂ ಮಾಧ್ಯಮದ ಕೆಲಸವಾಗಲಿಕ್ಕಿಲ್ಲ. ಕೆಲವು ಕ್ಲಿಷ್ಟ ಘಟನೆಗಳ ಹಿಂದಿರುವ ಸತ್ಯವನ್ನು ಹುಡುಕುವ ಸಾಧನಗಳು ಅದರ ಬಳಿಯಿರಲಿಕ್ಕಿಲ್ಲ. ಆದರೆ ಅದರ ವಿವಿಧ ಆಯಾಮಗಳು ಮೂಡಿ ಬರುತ್ತಿರುವಂತೆ ಅವನ್ನು ಮುಂದಿಡುವುದು ವೃತ್ತಿಯ ಹೊಣೆಗಾರಿಕೆ ಯಾಗಬೇಕು ಎಂದು ಮುನ್ನುಡಿ ಹೇಳುತ್ತದೆ.

ವಿಪರೀತ ಉತ್ಪ್ರೇಕ್ಷೆ

ದುರದೃಷ್ಟವಶಾತ್ ನೋಡುಗರನ್ನು, ಓದುಗರನ್ನು ಸೆಳೆಯುವ ಸ್ಪರ್ಧೆಯಲ್ಲಿ ಕೆಲವು ಸುದ್ದಿಗಳನ್ನು ಇಂತಹ ಸ್ಪರ್ಧೆಗಳಿಗೆ ಎಳೆಯುವುದು ಬಹಳ ಸ್ಫೋಟಕವಾಗಬಹುದು ಎಂಬುದನ್ನು ಮರೆಯಲಾಗುತ್ತದೆ ಎಂದು ಅದು ಖೇದ ವ್ಯಕ್ತಪಡಿಸಿದೆ. ಕೆಲವು ಪ್ರಶ್ನೆಗಳೇ ಸ್ಫೋಟಕವಾಗಿರಬಹುದು. ಅದಕ್ಕೆ ಮಾಧ್ಯಮಗಳು ಇನ್ನಷ್ಟು ಇಂಧನ ಸೇರಿಸಬೇಕಾಗಿಲ್ಲ. ದುರದೃಷ್ಟವಶಾತ್ ನಮ್ಮ ಮಾಧ್ಯಮಗಳಲ್ಲಿ ಇಂತಹ ಹಲವು ಉದಾಹರಣೆಗಳನ್ನು ಕಾಣಬಹುದು. ಈ ವರದಿ ಒಂದು ಉದಾಹರಣೆಯನ್ನು ಕೊಡುತ್ತದೆ. ಸೆಪ್ಟಂಬರ್ 20 ರ ಹಿಂದೂಸ್ತಾನ್ ಟೈಮ್ಸ್ ಪುಟ 3ನ್ನು ‘ಭಯೋತ್ಪಾದನೆ ಬೇಟೆ’ ಎಂಬ ದಪ್ಪಕ್ಷರಗಳ ಶಿರೋನಾಮೆಯಡಿ ಪೂರ್ಣವಾಗಿ ಭಯೋತ್ಪಾದನೆಗೆ ಮೀಸಲಿಟ್ಟಿತ್ತು. ‘ಭಾರತದ ಬಿನ್ ಲಾಡೆನ್ ಶಾಲೆಯಲ್ಲಿ ಒಬ್ಬ ಒಳ್ಳೆಯ ಹುಡುಗನಾಗಿದ್ದ’ ಇದು ಮುಂಬಯಿಯಲ್ಲಿ ಬಂಧಿತನಾದ ಶಂಕಿತ ಉಗ್ರವಾದಿ ಅಬ್ದುಸ್ ಸುಭಾನ್ ಖುರೇಶಿ ಬಗ್ಗೆ ಆತನ ಶಿಕ್ಷಕರ ಸಂದರ್ಶನಗಳನ್ನು ಆಧರಿಸಿದ ವರದಿಯ ತಲೆಬರಹ. ‘ವಿಶ್ವ ಆತನನ್ನು ಭಾರತದ ಬಿನ್ ಲಾಡೆನ್ ಎಂದು ಕರೆಯಬಹುದು. ಆದರೆ ಆತನ ಶಾಲಾದಿನಗಳ ವ್ಯಕ್ತಿತ್ವವನ್ನು ನೋಡಿರುವ ಆತನ ಶಿಕ್ಷಕರಿಗೆ ಅದನ್ನು ನಂಬಲಾಗುತ್ತಿಲ್ಲ’ ಎಂಬುದು ಈ ವರದಿಯ ಆರಂಭ ವಾಕ್ಯ. ಇದಕ್ಕೆ ಖಂಡಿತಾ ಆ ಶಿರೋನಾಮೆ ಬೇಕಿರಲಿಲ್ಲ. ಈ ಶಿರೋನಾಮೆ ಕೊಡುವವರು ತಮ್ಮದೇ ಲೋಕದಲ್ಲಿ ಇರುವವರು. ಇದುವರೆಗೆ ಸಾಮಾನ್ಯ ನಾಗರಿಕರಿಗೆ ಯಾರೆಂದೇ ತಿಳಿಯದಿದ್ದ ವ್ಯಕ್ತಿಯನ್ನು ಒಬ್ಬ ‘ಬಿನ್ ಲಾಡೆನ್’ ಎನ್ನುವುದು ವಿಪರೀತ ಉತ್ಪ್ರೇಕ್ಷೆಯಾಗುತ್ತದೆ.

ಆಗಾಗ ಘಟನೆಗಳು ಮತ್ತು ಅದರಲ್ಲಿ ಶಂಕಿತರ ಬಗ್ಗೆ ಬಳಸುವ ಭಾಷೆ ಮಾಧ್ಯಮಗಳನ್ನು ಪಕ್ಷಪಾತದ ಆಪಾದನೆಗೆ ಗುರಿ ಮಾಡುತ್ತವೆ ಎಂದು ಈ ಡಿಯುಜೆ ವರದಿ ಅಭಿಪ್ರಾಯ ಪಟ್ಟಿದೆ. ಬಹುತೇಕ ಪತ್ರಿಕೆಗಳು ‘ಶಂಕಿತ’, ‘ಆರೋಪಿತ’ ಎಂಬಿತ್ಯಾದಿ ಪದಗಳ ಬಳಕೆಯನ್ನೇ ಬಿಟ್ಟು ಬಿಟ್ಟಿವೆ. ದಿಲ್ಲಿಯಲ್ಲಿ ಹತರಾದ ಮತ್ತು ಬಂಧಿತರಾದ ವ್ಯಕ್ತಿಗಳನ್ನು ಹೆಚ್ಚಿನ ಪತ್ರಿಕೆಗಳು ಭಯೋತ್ಪಾದಕರೆಂದೇ ಬಣ್ಣಿಸಿದವು. ಯಾವುದೇ ವ್ಯಕ್ತಿಯನ್ನು ಅಪರಾಧಿ ಎಂದು ಸಾಬೀತು ಪಡಿಸುವವರೆಗೆ ಆತನನ್ನು ಅಪರಾಧಿ ಎನ್ನಲಾಗುವುದಿಲ್ಲ ಎಂಬುದು ಭಾರತೀಯ ಕಾನೂನಿನ ಮೂಲ ತತ್ವ. ಆದ್ದರಿಂದ ‘ಶಂಕಿತ’, ‘ಆರೋಪಿತ’ ಎಂಬ ಪದಗಳಿಲ್ಲದೆ ‘ಭಯೋತ್ಪಾದಕ’ ಎಂಬ ವರ್ಣನೆಗಿಳಿಯುವುದು ನ್ಯಾಯಾಲಯದ ವಿಚಾರಣೆಯಿಲ್ಲದೆ ತಪ್ಪಿತಸ್ಥ ಎಂದು ಸಾರಿದಂತಾಗುತ್ತದೆ. ಇದು ಮಾಧ್ಯಮ ವಿಚಾರಣೆಯಾಗುತ್ತದೆ. ಇದು ಸರಿಯಲ್ಲ ಎಂದು ಪತ್ರಕರ್ತರಿಗೇ ಎಲ್ಲರಿಗಿಂತ ಚೆನ್ನಾಗಿ ಗೊತ್ತು. ವರದಿ ಮಾಡಲು ಹೋಗುವ ವರದಿಗಾರರ ಮೇಲೆ ಮೊದಲು ಸುದ್ದಿ ಕೊಡುವ ವಿಪರೀತ ಒತ್ತಡವಿರುತ್ತದೆ ಎಂಬುದು ನಿಜ. ಆದರೆ ಬಳಸುವ ಪದಗಳ ಮೇಲೆ ಡೆಸ್ಕಿನಲ್ಲಿ ಸ್ವಲ್ಪ ಸಂಪಾದಕೀಯ ಹತೋಟಿಯಿರಬೇಕಾಗುತ್ತದೆ. ದುರದೃಷ್ಟವಶಾತ್ ಅದು ಹಲವು ವರದಿಗಳಲ್ಲಿ ಕಾಣೆಯಾದಂತಿದೆ. ಟಿವಿ ವರದಿಗಳಲ್ಲಿ ಇದು ಇನ್ನೂ ಹೆಚ್ಚಾಗಿ ಎದ್ದು ಕಾಣುತ್ತದೆ ಎಂದು ಡಿಯುಜೆ ವರದಿ ಖೇದ ವ್ಯಕ್ತಪಡಿಸಿದೆ.

ಮಾಧ್ಯಮ ಆಯೋಗ ಬೇಕು

ಮಧ್ಯಂತರ ವರದಿಯ ಹಿನ್ನುಡಿ ಈಗಿರುವ ಹಲ್ಲಿಲ್ಲದ ಪ್ರೆಸ್ ಕೌನ್ಸಿಲ್ ಸ್ಥಾನದಲ್ಲಿ ಒಂದು ಮಾಧ್ಯಮ ಆಯೋಗವನ್ನು, ಮಾಧ್ಯಮ ಮಂಡಳಿಯನ್ನು ರಚಿಸಬೇಕು ಎಂದು ಕರೆ ನೀಡಿದೆ. ಜಾಗತೀಕರಣದ ನಂತರ ಇದರ ಅಗತ್ಯ ಕಂಡು ಬಂದಿದ್ದರೂ ಕೇಂದ್ರದಲ್ಲಿ ಬಂದ ಸರಕಾರಗಳೆಲ್ಲಾ ಇದುವರೆಗೂ ಈ ಮನವಿಗಳಿಗೆ ಸ್ಪಂದಿಸಿಲ್ಲ. ಹೆಚ್ಚೆಚ್ಚು ಸುದ್ದಿ ವಾಹಿನಿಗಳು ಆರಂಭವಾಗಿರುವುದು, ಹಳೆಯ, ಹೊಸ ಪತ್ರಿಕೆಗಳ ಬೆಳವಣಿಗೆ ಇತ್ಯಾದಿಗಳಿಂದಾಗಿ ದೇಶದ ಮಾಹಿತಿ ಉದ್ದಿಮೆಯ ಪರಿಸ್ಥಿತಿಯಲ್ಲಿ ಭಾರೀ ಬದಲಾವಣೆಗಳಾಗಿವೆ. ದೇಶದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಬಲವಾಗುತ್ತಿರುವುದರಿಂದ ಹಾಗೂ ಮಾಹಿತಿ ಹಕ್ಕಿನ ಬಗ್ಗೆ ಜಾಗೃತಿ ಹೆಚ್ಚುತ್ತಿರುವುದರಿಂದ ಜನಗಳ ಆಕಾಂಕ್ಷೆಗಳು, ನಿರೀಕ್ಷೆಗಳು ಮತ್ತು ಬೇಡಿಕೆಗಳೂ ಅಪಾರವಾಗಿ ಹೆಚ್ಚುತ್ತಿವೆ. 1982ರಲ್ಲಿ ಎರಡನೇ ಪತ್ರಿಕಾ ಆಯೋಗ ತನ್ನ ವರದಿಯನ್ನು ಮಂಡಿಸಿದ ನಂತರ ದೇಶದ ರಾಜಕೀಯ, ಆರ್ಥಿಕ ಮತ್ತು ಮಾಧ್ಯಮದಲ್ಲಿ ಬದಲಾವಣೆಗಳಾಗಿವೆ, ರಾಜಕೀಯ ರಚನೆಯಲ್ಲೂ ಬದಲಾವಣೆಗಳಾಗಿವೆ. ಅಖಿಲ ಭಾರತ ಸುದ್ದಿ ಪತ್ರಿಕೆಗಳು ಮತ್ತು ಸುದ್ದಿ ಸಂಸ್ಥೆಗಳ ಒಕ್ಕೂಟ ಕೂಡಾ ಈ ನಿಲುವನ್ನು ಬೆಂಬಲಿಸಿದೆ. ಸರಕಾರ ಪರಿಸ್ಥಿತಿಯ ಗಂಭಿರತೆಯನ್ನು ಅರಿತು ಈ ದಿಕ್ಕಿನಲ್ಲಿ ತುರ್ತು ಕ್ರಮಗಳಿಗೆ ಮುಂದಾಗಬೇಕು ಎಂದು ಅದು ಆಗ್ರಹಿಸಿದೆ.

ಸರಕಾರ ಈಗಲಾದರೂ ಪರಿಸ್ಥಿತಿಯ ಗಂಭೀರತೆಯನ್ನ, ತುರ್ತನ್ನು ಅರಿತು ಆದಷ್ಟು ಬೇಗನೇ ಒಂದು ಮಾಧ್ಯಮ ಆಯೋಗವನ್ನು

ಪುಟ 15ಕ್ಕೆ

ಪುಟ 2 ರಿಂದ

ಬೆಂಗಳೂರು ವಿಶ್ವ ವಿದ್ಯಾಲಯದ ಸಂಶೋಧನೆಗಳು...

ಇದನ್ನು ಯಾವ ದುಷ್ಪ್ರೇರಣೆಯಿಂದ ಬರೆದುದೂ ಅಲ್ಲ. ಸತ್ಯದ ಸಂಶೋಧನೆಗೆ ಬೆಂಗಳೂರು ವಿಶ್ವವಿದ್ಯಾಲಯದ ಅತ್ಯಂತ ವಿನಮ್ರ ಕಳಕಳಿಯನ್ನು ತಾವು ಅರ್ಥ ಮಾಡಿಕೊಳ್ಳುತ್ತೀರೆಂದು ಬರೆದಿದ್ದೇವೆ.

ಈ ಕುರಿತು ತಮ್ಮಿಂದ ಜುಲೈ 19, 1976ರ ಒಳಗೆ ಯಾವುದೇ ಉತ್ತರ ಬರದಿದ್ದರೆ ಈ ಪತ್ರ ವ್ಯವಹಾರವನ್ನು ನಾವು ಪತ್ರಿಕೆಗಳಿಗೆ ಬಯಲು ಮಾಡಲೇಬೇಕಾದ ಒತ್ತಡಕ್ಕೆ ಒಳಗಾಗಿದ್ದೇವೆ.

ತಾವು, ಈಗಲಾದರೂ ನಮ್ಮ ಬೇಡಿಕೆಯನ್ನು ಮನ್ನಿಸಿ ತಮ್ಮ ನೈತಿಕ ಧೈರ್ಯವನ್ನು ಪ್ರಕಟಿಸಿ ನಮ್ಮೊಂದಿಗೆ ಸಹಕರಿಸುತ್ತೀರೆಂದು ನಂಬುತ್ತೇವೆ.?

ಆದರೆ ಇದಕ್ಕೂ ಯಾವುದೇ ಪ್ರತಿಕ್ರಿಯೆ 'ದೇವಮಾನವ' ನಿಂದ ಬರಲಿಲ್ಲ !

ಇದು ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಯ್ತು. ವಿಶೇಷ ವಾಗ್ವಾದಗಳು ನಡೆದುವು. ಬಹಳಷ್ಟು ಪತ್ರಕರ್ತರುಗಳು ಡಾ. ಎಚ್. ನರಸಿಂಹಯ್ಯನವರನ್ನು ಬಾಬಾರನ್ನು ಭೇಟಿ ಯಾದರು.

ವೈಟ್ ಫೀಲ್ಡ್‌ನ (ಬೆಂಗಳೂರು) ಶ್ರೀ ಸತ್ಯಸಾಯಿ ಕಾಲೇಜಿನಲ್ಲಿ ಒಂದು ಸಮಾರಂಭವಿತ್ತು. ಅಲ್ಲಿ ಪ್ರೇಕ್ಷಕರನ್ನುದ್ದೇಶಿಸಿ ಮಾತನಾಡುತ್ತಾ ಸಾಯಿ ಬಾಬಾ ಬೆಂಗಳೂರು ವಿಶ್ವವಿದ್ಯಾಲಯವನ್ನು ಅತಿ ಹೀನಾಯವಾಗಿ ಜರೆದ. ಡಾ. ಎಚ್. ಎನ್. ಮತ್ತು ಅವರ ಸಹೋದ್ಯೋಗಿಗಳನ್ನು ಈ 'ದೇವ ಮಾನವನು 'ನಾಯಿ' ಮತ್ತು 'ಇರುವೆ'ಗಳಿಗೆ ಸಮಾನ ರಾದವರು ಎಂದು ತೆಗಳಿದ. ಇವರಿಗೆಲ್ಲಾ ಹೋಲಿ ಸುವಾಗ - ತನ್ನನ್ನು ತಾನು ವಿಸ್ತಾರವಾದ ಸಾಗರ. ಮಿನುಗುವ ನಕ್ಷತ್ರ ಎಂದು ಬಣ್ಣಿಸಿಕೊಂಡ !

ಮೊದಲು ಗಂಟೆಗಟ್ಟಲೆ, ದಿನಗಟ್ಟಲೆ ಜನರು ದರ್ಶನಕ್ಕಾಗಿ ಇವರನ್ನು ಕಾಯುತ್ತಿದ್ದರೆ ಈ ಎಲ್ಲಾ ಘಟನೆಗಳ ನಂತರ ಸಾಯಿ ಬಾಬಾನನ್ನು ಸಂದರ್ಶಿಸಲು ಬರುವ ಜನರ ಸಂಖ್ಯೆ ಕಡಿಮೆಯಾಗುತ್ತಾ ಬಂತು.

ಒಟ್ಟಿನಲ್ಲಿ ಪತ್ರಿಕೆಗಳಲ್ಲಿ ಈ ಕುರಿತು ಚರ್ಚೆ ತಿಂಗಳುಗಟ್ಟಲೆ ನಡೆಯಿತು. ಕೊನೆಗೆ ವಿಶ್ವವಿದ್ಯಾಲಯದ ಸಮಿತಿ ಒಮ್ಮುಖವಾಗಿ 29 ಮೇ 1977 ರಂದು ಹತ್ತು ಗಂಟೆಗೆ ದರ್ಶನಕ್ಕೆ ಬರುವುದಾಗಿ ತಿಳಿಸಿತು. ಆದರೆ, ಸಮಿತಿಗೆ ಸಾಯಿಬಾಬಾ ತನ್ನ ಅರಮನೆಗೆ ಪ್ರವೇಶಿಸಲಿಕ್ಕೂ ಬಿಡಲಿಲ್ಲ. ಅವರ ಪರಿಚಾರಕರ ಭಯಂಕರ ಬೆದರಿಕೆಗಳಿಂದ ಹತಾಶರಾಗಿ ಸಮಿತಿ ಹಿಂತಿರುಗಬೇಕಾಯಿತು.

ಹದಿನೆಂಟು ತಿಂಗಳುಗಳ ತನಕ ನಡೆದ ಈ ವಿದ್ಯಮಾನ ಹಲವರ ಕಣ್ಣು ತೆರೆಸಿತು. ಸಾಯಿಬಾಬಾರ ಮಹಾ ಶಿಷ್ಯನಾಗಿದ್ದ - ಡಾ. ಎಸ್. ಭಗವಂತಮ್ (Director of Indian Institute of Science, Former Secretary of the Defense Department, Govt. of India) ಇವರನ್ನು ದೂರವಿರಿಸಿದ. ಸ್ವತಃ ಬಾಬಾ 'ಪವಾಡ' ಗಳನ್ನು ಮಾಡಬಾರದೆನ್ನುವಷ್ಟು ಮಾನಸಿಕ ಒತ್ತಡಗಳಿಗೆ ಒಳಗಾಗಿ ಆನಂತರ ಈತನ ಗಿಮಿಕ್ಸ್-ಮಾಜಿಕ್ಸ್‌ಗಳೆಲ್ಲಾ ನಿಧಾನವಾಗಿ ನಿಂತು ಹೋದವು.

. ಇದು ನಿಜವಾಗಿಯೂ ಎಚ್. ಎನ್. ನೇತೃತ್ವದ ಸಮಿತಿಯ ಮಹತ್ ಸಾಧನೆ. ಇಂತಹ ಕೆಲಸಗಳನ್ನು ಈಗ ಯಾವ ವಿಶ್ವವಿದ್ಯಾಲಯವೂ ಮಾಡುತ್ತಿಲ್ಲ. ಇದಕ್ಕೆ ತದ್‌ವಿರುದ್ಧವಾಗಿ ವಿ. ವಿ. ಗಳು ಮೌಢ್ಯದ ಕೇಂದ್ರಗಳಾಗಿವೆ. ಆದಾಗ್ಯೂ ಕೊಲೆಗಡುಕ ಹಾಗೂ ರೇಪಿಸ್ಟ್ ಆಗಿರುವ ಈ 'ದೇವಮಾನವ' ನು ಪುಟ್ಟಪರ್ತಿಯಲ್ಲಿ ಒಂದು ಅತಿ ದೊಡ್ಡ 'Cardiological Hospital' ತೆರೆದು ಜನತಾ ಸೇವೆ ಮಾಡುತ್ತಿರುವುದು, ಇಡೀ ಅನಂತಪುರ ಜಿಲ್ಲೆಗೆ ನೀರಿನ ವ್ಯವಸ್ಥೆ ಕಲ್ಪಿಸಿರುವುದು ಹಾಗೂ ಇನ್ನಿತರ ಹಲವಾರು ಸೇವಾ ಕಾರ್ಯಗಳಲ್ಲಿ ನಿರತವಾಗಿರುವುದು ತನ್ನ ಮೋಸವನ್ನು ಮುಚ್ಚಿಡುವ ಒಂದು ಪ್ರಕ್ರಿಯೆಯಾಗಿದ್ದರೂ ಅದರಿಂದ ಹಲವರಿಗೆ ಲಾಭವಾಗಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ■

ಪುಟ 14 ರಿಂದ

'ಮಾಧ್ಯಮಗಳು ಪರಿಹಾರದ ಭಾಗವಾಗಬೇಕು, ಸಮಸ್ಯೆಯ ಭಾಗವಾಗಬಾರದು'

ರಚಿಸಬೇಕಾಗಿದೆ, ಇದು ಮಾಹಿತಿ ಉದ್ದಿಮೆಯ ಎಲ್ಲಾ ಅಂಶಗಳನ್ನು ಪರಿಶೀಲಿಸುವ ಪೂರ್ಣ ಅಧಿಕಾರ ಹೊಂದಿರಬೇಕು ಎಂದು ಡಿಯುಜೆ ವರದಿ ಆಗ್ರಹಿಸಿದೆ. ಈಗಿರುವ ಪತ್ರಿಕಾ ಮಂಡಳಿಯನ್ನು ವಿಸ್ತರಿಸಿ ಅದರಲ್ಲಿ ಇಲೆಕ್ಟ್ರಾನಿಕ್ ಮತ್ತು ಪ್ರಸಾರ ಮಾಧ್ಯಮಕ್ಕೆ ಸಮಾನ ಪ್ರಾತಿನಿಧ್ಯ ಕೊಟ್ಟು ಒಂದು ಮಾಧ್ಯಮ ಮಂಡಳಿಯಾಗಿ ಮಾಡುವುದು ಒಂದು ಉತ್ತಮ ಆರಂಭವಾಗಬಹುದು ಎಂದು ಅದು ಹೇಳಿದೆ.

ಸೋಮಾರಿತನ ಮತ್ತು ದುರಾಸೆ

ವರದಿಯನ್ನು ಕೊನೆಗೊಳಿಸುತ್ತಾ, ಮಾಧ್ಯಮಗಳು ಸಮಾಜದ ಕಾವಲು ಪಡೆಯ ಪಾತ್ರ ವಹಿಸುವ ಬದಲು, ಹೆಚ್ಚೆಚ್ಚು ಸೋಮಾರಿಯಾಗಿ ಪೋಲೀಸ್ ಹೇಳಿಕೆಗಳನ್ನೇ ಅವಲಂಬಿಸುವಂತೆ ಕಾಣುತ್ತಿದೆ ಎಂಬುದನ್ನು ಜಾಮಿಯನಗರ ಘಟನೆ ತೋರಿಸಿದೆ ಎಂದು ಅದು ಅಭಿಪ್ರಾಯ ಪಟ್ಟಿದೆ. ಈ ಹೆಚ್ಚುತ್ತಿರುವ ಸೋಮಾರಿತನ, ಅದರ ಜೊತೆಗೆ ಭಾವೋದ್ರೇಕಗೊಳಿಸುವ ದೃಶ್ಯ ಮಾಧ್ಯಮಗಳ ಹೆಚ್ಚುತ್ತಿರುವ 'ದುರಾಶೆ' ಯಿಂದಾಗಿ ಸುದ್ದಿಗಳನ್ನು ಸರಿಯಾದ ಪರೀಕ್ಷಣೆಯಿಲ್ಲದೆ ಸಾರ್ವಜನಿಕರ ಮುಂದಿಡಲಾಗುತ್ತಿದೆ. ಇಲ್ಲಿ ಮಾಧ್ಯಮ ತನ್ನ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುವಲ್ಲಿ ವಿಫಲವಾಗುತ್ತದೆ ಎಂದು ಅದು ಹೇಳಿದೆ. ಪರೀಕ್ಷಣೆಯೆಂದರೆ ಪ್ರತಿಯೊಬ್ಬ ಮಾಧ್ಯಮ ವ್ಯಕ್ತಿ 'ತನಿಖಾ ವರದಿಗಾರ' ಆಗಬೇಕು ಎಂದಲ್ಲ. ಅದು ಪ್ರತಿದಿನ ವರದಿ ಮಾಡಬೇಕಾದ ವರದಿಗಾರನ ಕೆಲಸವೂ ಅಲ್ಲ. ಆದರೆ ಆತ ಯಾವುದೇ ಘಟನೆಯ ಕುರಿತಂತೆ ಆದಷ್ಟು ಹೆಚ್ಚು ಪ್ರತ್ಯಕ್ಷದರ್ಶಿಗಳನ್ನು ಪ್ರಶ್ನಿಸಿ ಅದರ ವಿವಿಧ ಆಯಾಮಗಳನ್ನು ಕೊಡಲು ಪ್ರಯತ್ನಿಸಬೇಕು.

ಹೆಚ್ಚಿನ ಪತ್ರಿಕೆಗಳಲ್ಲಿ ಮುಖಾಮುಖಿಯಲ್ಲಿ ಸತ್ತ ಹುಡುಗರು ಯಾರು ಎಂಬುದು ತಿಳಿಯುವ ಮೊದಲೇ ಅವರು ಭಯೋತ್ಪಾದಕರು ಎಂದು ಘೋಷಿಸಿ ಬಿಟ್ಟವು. ಪ್ರತಿಯೊಂದು ಸುದ್ದಿ ವಾಹಿನಿ ಅದನ್ನು ದೊಡ್ಡ ಸುದ್ದಿಯಾಗಿಸಲು ಪರಸ್ಪರ ಸ್ಪರ್ಧೆಗೆ ಇಳಿದವು, ಬಹುಶಃ ತಮ್ಮ ಜಾಹೀರಾತು ದರಗಳನ್ನು ಹೆಚ್ಚಿಸಿಕೊಳ್ಳಲಷ್ಟೇ ಈ ಸ್ಪರ್ಧೆ.

ಅಪವಾದಗಳೂ ಇವೆ

ಅದೃಷ್ಟವಶಾತ್, ಈ ಬಗ್ಗೆ ತಮ್ಮ ಸಹೋದ್ಯೋಗಿಗಳನ್ನು ಎಚ್ಚರಿಸುವ ಪತ್ರಕರ್ತರೂ ಇದ್ದಾರೆ. ಇದನ್ನು ಈ ಡಿಯುಜೆ ವರದಿ ಪ್ರಶಂಸಿಸಿದೆ. 'ದೈನಿಕ್ ಹಿಂದೂಸ್ತಾನ್'ನಲ್ಲಿ (ಸೆಪ್ಟಂಬರ್ 28) ಸೇವಂತಿ ನೈನನ್ ಮಾಧ್ಯಮಗಳ ವಿಮರ್ಶೆ ಮಾಡುತ್ತಾ ವರದಿಗಳಲ್ಲಿ ಮುಸ್ಲಿಮರ ವಿರುದ್ಧದ ನಿಲುವು ಕಂಡು ಬರುತ್ತದೆ ಎನ್ನುತ್ತಾರೆ. ಒರಿಸ್ಸ ಮತ್ತು ಕರ್ನಾಟಕದಿಂದ ಬರುವ ಭಜರಂಗ ದಳದ ಚಟುವಟಿಕೆಗಳ ಸುದ್ದಿಗಳಲ್ಲಿ ಅವುಗಳಲ್ಲಿ ತೊಡಗಿರುವ ವ್ಯಕ್ತಿಗಳು ಯಾರು ಎಂದು ನಮಗೆ ತಿಳಿಯುವುದೇ ಇಲ್ಲ. 'ಅವರ ಚಿತ್ರಗಳು, ವಿಳಾಸಗಳು, ಜೀವನ ಕಥೆಗಳು ಪತ್ರಿಕೆಗಳಲ್ಲಿ, ಟಿವಿ ವಾಹಿನಿಗಳಲ್ಲೆಲ್ಲಾ ರಾರಾಜಿಸುತ್ತವೆಯೇ? ಅವರ ಚಿತ್ರಣ ಯಾಕೆ ಮಾಡುವುದಿಲ್ಲ?' ಎಂದು ಅವರು ಕೇಳುತ್ತಾರೆ.

ಔಟ್‌ಲುಕ್ ಪತ್ರಿಕೆ ಒಂದು ಕುತೂಹಲಕಾರೀ ಅಂಶವನ್ನು ಹೇಳುತ್ತದೆ. ತನಿಖೆ ಆರಂಭದ ಘಟ್ಟದಲ್ಲಿ ಇರುವಾಗಲೇ, ಪೋಲೀಸರು ಕುರುಹುಗಳನ್ನು ಹಿಂಬಾಲಿಸುತ್ತಿರುವಾಗಲೇ ಇಂತಹ ವಿವರವಾದ ಪತ್ರಿಕಾ ಸಮ್ಮೇಳನಗಳನ್ನು ನಡೆಸುವುದು ಬೇಜವಾಬ್ದಾರಿತನ. ಅದು ಕೇವಲ ಭೀತಿ ಹುಟ್ಟಿಸುತ್ತದೆ ಮತ್ತು ಸಾಂಸ ತಿಕ ಪೂರ್ವಾಗ್ರಹಗಳನ್ನು ಗಟ್ಟಿಗೊಳಿಸುತ್ತದೆ' ಎಂದು ಒಬ್ಬ ಪೋಲೀಸ್ ಅಧಿಕಾರಿ ಹೇಳಿದರಂತೆ.

'ಭಯೋತ್ಪಾದನೆ ಕೆಟ್ಟದ್ದೇ. ಆದರೆ ನಿಜವಾಗಿ ಏನು ನಡೆಯಿತು ಎಂಬುದು ನಮಗೆಂದೂ ತಿಳಿಯಲಿಕ್ಕಿಲ್ಲ, ಭಯೋತ್ಪಾದನೆಯನ್ನು ಪರಿಶೀಲಿಸುವ ಬದಲು ನಾವು ಮೇಲುಮೇಲಿನ ಭದ್ರತೆಯನ್ನು ಪರಿಶೀಲಿಸುತ್ತಿರುವಾಗ ನಿಜವಾದ ಅಪರಾಧಿಗಳು ಮುಂದಿನ ಧಾಳಿಯ ಸಂಚು ಮಾಡುತ್ತಿರುತ್ತಾರೆ ಎಂಬ ಭಯಪೀಡಿತ ಸಂದೇಹ ಇನ್ನೂ ಕೆಟ್ಟದ್ದು' ಎಂದು ದಿ. ವೀಕ್ ಪತ್ರಿಕೆಯಲ್ಲಿ ಅಂತರಾ ದೇವ ಸೇನ್ ಹೇಳುತ್ತಾರೆ. 'ಏಕೈಕ ಮೂಲದ ವರದಿಯನ್ನು ಸಂದೇಹದಿಂದಲೇ ಕಾಣುವ ದಿನಗಳು ಕಳೆದುಹೋಗಿವೆ, ವರದಿಗಾರರು ಸಂಬಂಧಪಟ್ಟವರ ಪತ್ರಿಕಾ ಹೇಳಿಕೆಗಳನ್ನು ಮಾತ್ರ ಆಧರಿಸುವ ಸೋಮಾರಿತನದ ಪ್ರವೃತ್ತಿಯಿಂದ ಆರಂಭವಾದದ್ದು ಈಗ ಶಿಷ್ಟ ನಡವಳಿಕೆಯಾಗುತ್ತಿದೆ' ಎಂದು ಆಕೆ ಕಳವಳದಿಂದ ಹೇಳುತ್ತಾರೆ.

ಬಲೂನನ್ನು ಮಾರುವ ಒಬ್ಬ ಬಾಲಕನನ್ನು ಸಾಕ್ಷಿಯೆಂದು ತೋರಿಸುವುದಾದರೆ, ಕೆಲವು ವ್ಯಕ್ತಿಗಳ ಚಿತ್ರಗಳನ್ನು ಅರಬ್ ವೇಷಗಳಲ್ಲಿ ತೋರಿಸುವುದಾದರೆ ಮಾಧ್ಯಮ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಏಳುತ್ತದೆ ಎಂದಿರುವ ಡಿಯುಜೆ ವರದಿ ಹಲವಾರು ಪತ್ರಿಕೆಗಳಲ್ಲಿ ಇವೇ ಚಿತ್ರಗಳು ಬಂದವು, ಇದನ್ನೆಲ್ಲಾ ಯಾರು ಒದಗಿಸಿದದ್ದು ಎಂದು ಊಹಿಸುವುದು ಕಷ್ಟವಲ್ಲ ಎನ್ನುತ್ತದೆ. ಆದರೂ ಅವರಂತವರ ನಡುವೆಯೂ ಇಂತಹ ಮನವಿ ಮಾಡಿಕೊಳ್ಳುವ ಕೆಲವರಾದರೂ ಇದ್ದಾರೆ ಎಂಬುದು ತುಸು ಸಮಾಧಾನದ ಸಂಗತಿ ಎಂದು ಅದು ಹೇಳುತ್ತದೆ.

ಕವನ

ಅಲ್ಲೇ ಕುಂತವರೆ
ಅಲ್ಲೇ ಕುಂತವರೆ
ನನ್ನ ಜನ
ಊರಾಚೆಯ ಕೇರಿಗಳಲ್ಲಿ
ಉಳ್ಳವರ ಪಾದಗಳಿಗೆ
ಕೆರ ಹೊಲಿಯುತ್ತ
ದು:ಖ ತುಂಬಿದ ಮುಡುವುಗಳಲ್ಲಿ
ಮಲಿತ ಬದುಕಿನ ಪಾಪದ ಕೂಪಗಳಲ್ಲಿ
ಗವ್ವೆನ್ನುವ ಕತ್ತಲನ್ನು ಹೊದ್ದು
ಅಲ್ಲೇ ಕುಂತವರೆ
ನನ್ನ ಜನ ಮಠದ ಪೀಠದ ಕೆಳಗೆ
ಬಲಿ ಪಶುಗಳಂತೆ
ಶತಮಾನದ ಶೋಷಣೆಯ
ಉರುಳಿಗೆ ಕೊರಳನೊಡ್ಡುತ್ತ
ಸಾವು ಪ್ರಿಯವೆಂಬಂತೆ
ಅಲ್ಲೇ ಕುಂತವರೆ
ನನ್ನ ಜನ
ಸೆರಗು ಸೆಳೆಯುವ ಭೂಮಾಲೀಕ ದುಶ್ಯಾಸನರ
ಬದುಕ ಬಯಲಾಟದ
ಅಟ್ಟದ ಮುಂದೆ ಗಟ್ಟಿಯಾಗಿ
ನೆಲಕ್ಕೆ ಅಂಟಿಕೊಂಡವರಂತೆ
ಅಲ್ಲೇ ಕುಂತವರೆ
ನನ್ನ ಜನ
ಟಿ.ವಿ. ಜಾಹೀರಾತಿನ
ಕೃತಕ ಹಲ್ಲುಗಳ ಮುಂದೆ
ಹಲ್ಲುಗಿಂಜುತ್ತಾ
ತರ್ಕಕ್ಕೂ ನಿಲುಕದ್ದು
ಹೀಗೂ ಉಂಟೆ!
ಎಂಬುದನ್ನು ಪ್ರಶ್ನಿಸದೇ
ಎಲ್ಲದಕ್ಕೂ ತಲೆಹಾಕುತ್ತಾ
ಜೋತಿಷಿಗಳು
ಬಾಯಲ್ಲಿ ಬಿಟ್ಟ ಹೂಸಿಗೆ
ಮೂಗರಳಿಸುತ್ತಾ
ಕುಳಿತಿದ್ದಾರೆ.
ಮೂರ್ಖ ಪೆಟ್ಟಿಗೆಯ ಮುಂದೆ
ಮೂರ್ಖರಂತೆ :

ಹುಲಿಕಟ್ಟಿ ಚನ್ನಬಸಪ್ಪ
ಸಿರುಗುಪ್ಪ

JANASHAKTHI KANNADA VARA PATRIKE OCTOBER 19, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

ಸ್ವಾತಂತ್ರ್ಯ ಸಂರಕ್ಷಣೆಗಾಗಿ ಯುವಜನರ ಪಣ:

ರಾಷ್ಟ್ರವ್ಯಾಪಿ ಜಾಥಾಗೆ ಬೆಂಗಳೂರಿನಲ್ಲಿ ಸಂಭ್ರಮದ ಸ್ವಾಗತ

ವಿನಾಶಕಾರಿ ಅಣು ಒಪ್ಪಂದ ಬೆಲೆ ಏರಿಕೆ ಹಾಗೂ ಕೋಮುವಾದ ವಿರೋಧಿಸಿ



ಡಿವೈಎಫ್‌ಐ ಸಂಘಟಿಸಿದ್ದ ಅಖಿಲ ಭಾರತ ಸ್ವಾತಂತ್ರ್ಯ ಸಂರಕ್ಷಣಾ ಯುವಜನ ಜಾಥಾಗೆ ಬೆಂಗಳೂರಿನಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಹೈದ್ರಾಬಾದ್‌ನಲ್ಲಿ ಉದ್ಘಾಟನೆಗೊಂಡು ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಸಂಚರಿಸಿ ಚಿಕ್ಕಬಳ್ಳಾಪುರದ ಮೂಲಕ ರಾಜ್ಯದ ರಾಜಧಾನಿಗೆ ಆಗಮಿಸಿದ ಜಾಥಾವನ್ನು ವಿಶಿಷ್ಟವಾಗಿ ಆದರದಿಂದ ಬರ ಮಾಡಿಕೊಳ್ಳಲಾಯಿತು.

ಹೆಬ್ಬಾಳ ಫ್ಲೈಓವರ್‌ನಿಂದ ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿ ಆಯೋಜಿಸಿದ್ದ ಬೈಕ್‌ರ್‍ಯಾಲಿಯ ಮೂಲಕ ಜಾಥಾವನ್ನು ಬರ ಮಾಡಿಕೊಂಡು ಕಾರ್ಪೋರೇಷನ್ ವೃತ್ತದವರೆಗೆ ಕರೆತರಲಾಯಿತು. ಜಾಥಾ ವಾಹನದಿಂದ ನಾಯಕರು ಇಳಿಯುತ್ತಿದ್ದಂತೆ ಹೂಮಳೆಗೈದು ಘೋಷಣೆಗಳೊಂದಿಗೆ ಶ್ವೇತಪತಾಕೆಗಳನ್ನು ಹಿಡಿದು ನಗರದ ಟೌನ್‌ಹಾಲ್ ಬಳಿಗೆ ಮೆರವಣಿಗೆ ಹೊರಡಲಾಯಿತು.

ಟೌನ್‌ಹಾಲ್ ಎದುರು ಆಯೋಜಿಸಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ಅಖಿಲ ಭಾರತ ಅಧ್ಯಕ್ಷ ಪಿ.ಶ್ರೀರಾಮಕೃಷ್ಣನ್ ಇಡೀ ದೇಶಕ್ಕೆ ಅಪಾಯಕಾರಿಯಾಗಿರುವ ಭಾರತ ಅಮೇರಿಕಾ ನಡುವಣ ನಾಗರೀಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿರುವ ಕೇಂದ್ರದ ಯು.ಪಿ.ಎ ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ತ್ಯಾಗ ಬಲಿದಾನಗಳಿಂದ ಸಂಪಾದಿಸಿದ ಸ್ವಾತಂತ್ರ್ಯವನ್ನು ಅಮೇರಿಕಾಕ್ಕೆ ಒತ್ತೆ ಇಡಲು ಪ್ರಯತ್ನಿಸಿದೆ. ಸ್ವಾತಂತ್ರ್ಯದ ಕಾರಣಕ್ಕಾಗಿ ನಮ್ಮ ಸಹೋದರಿಯರು ವಿಧವೆಯರಾದರು, ಸಾವಿರಾರು ಮಕ್ಕಳು ಅನಾಥರಾದರು, ಆದರೆ ಕೇಂದ್ರದ ಯುಪಿಎ ಬಲಿದಾನದ ಸ್ವಾತಂತ್ರ್ಯವನ್ನು ಹರಣ ಮಾಡಲು ಹೊರಟಿದೆ.

ಈ ಹಿನ್ನೆಲೆಯಲ್ಲಿ ಡಿವೈಎಫ್‌ಐ ದೇಶದ ವಿವಿಧ ಭಾಗಗಳಲ್ಲಿ 7 ಅಖಿಲ ಭಾರತ ಜಾಥಾಗಳಲ್ಲಿ ಸಂಘಟಿಸಿದೆ.

ಅಣು ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ಪಾರ್ಲಿಮೆಂಟ್‌ನ ಒಪ್ಪಿಗೆ ಪಡೆಯಲಾಗುವುದು ಎಂದು ಹೇಳಿದ್ದ ಮನಮೋಹನ್‌ಸಿಂಗ್ ಪಾರ್ಲಿಮೆಂಟನ್ನು ಎದುರಿಸಲು ಹಿಂಜರಿದದ್ದೇಕೆ? ಅಮೇರಿಕಾದ ಸೆನೆಟ್‌ನಲ್ಲಿ ಪ್ರತಿಯೊಂದು ವಿವರಗಳನ್ನು ಮಂಡಿಸಲಾಗಿದೆಯಾದರೂ ದೇಶದ ಅತ್ಯುನ್ನತ ಸಂಸ್ಥೆ, ಸಂಸತ್ತಿಗೆ ತಿಳಿಸದಿರುವುದರ ಕುರಿತು ಮನಮೋಹನ್‌ಸಿಂಗ್ ದೇಶದ ಜನಕ್ಕೆ ಉತ್ತರಿಸಬೇಕಿದೆ.

ಈ ಒಪ್ಪಂದ ಮೂಲಕ 3 ಲಕ್ಷದ 30 ಸಾವಿರ ಕೋಟಿ ರೂಪಾಯಿಗಳನ್ನು ಅಮೇರಿಕಾದ ಬಾಯಿಗೆ ಸುರಿಯಲು ಹೊರಟಿದೆ. ಈ ಹಣದಿಂದ 2 ಲಕ್ಷ 50 ಸಾವಿರ ನವೋದಯ ಶಾಲೆಗಳನ್ನು ತೆರೆಯಬಹುದು. 75,000 ಅತ್ಯಾಧುನಿಕ ಆಸ್ಪತ್ರೆಗಳನ್ನು ನಿರ್ಮಿಸಬಹುದು. ಮುಂದಿನ 16 ವರ್ಷದವರೆಗೆ ಎಲ್ಲಾ ಜನರಿಗೆ ಪಡಿತರವನ್ನು ನೀಡಬಹುದು. ಆದರೆ ಪ್ರಧಾನಿಯವರಿಗೆ ಈ ಬಗ್ಗೆ ಒಲವಿಲ್ಲ. ದೇಶದ ಶೇ.78ರಷ್ಟು ಜನ ಕೇವಲ 20 ರೂಪಾಯಿ ಆದಾಯದಲ್ಲಿ ಬದುಕುತ್ತಿದ್ದಾರೆ. 1 ಲಕ್ಷ 40 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಧಾನಿಯವರಿಗೆ ಈ ಬಗ್ಗೆ ಕಾಳಜಿಯಿಲ್ಲ ಬದಲಾಗಿ ಅಮೇರಿಕಾ ಬಗೆಗಿನ ಪ್ರೀತಿ ತೋರಿಸುತ್ತಿದ್ದಾರೆ.

ಸಾಮ್ರಾಜ್ಯಶಾಹಿ ಪರ ಕೇಂದ್ರದ ವಿರುದ್ಧ ಡಿವೈಎಫ್‌ಐ ದೇಶವ್ಯಾಪಿ ಯುವಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ನಡೆಸುತ್ತಿರುವ ಈ ಸ್ವಾತಂತ್ರ್ಯ ಸಂರಕ್ಷಣಾ ಯುವಜನ ಜಾಥಾವನ್ನು ಅದ್ದೂರಿಯಾಗಿ ಸ್ವಾಗತಿಸಿದ ಬೆಂಗಳೂರು ಜನತೆಯನ್ನು ಅಭಿನಂದಿಸಿದ ಅವರು ಮುಂಬರುವ ದಿನಗಳಲ್ಲಿ ಇಂಥ ಜನವಿರೋಧಿ, ದೇಶವಿರೋಧಿ ನೀತಿಗಳ ವಿರುದ್ಧ ಯುವಜನ ಸಮರ ಸಾರಲಿದ್ದಾರೆ ಎಂದು ಯುಪಿಎ ಗೆ ಎಚ್ಚರಿಕೆ ನೀಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ ಮಾತನಾಡಿ ರಾಜ್ಯದಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಲು ಭಜರಂಗದಳ ವಿ.ಹೆಚ್.ಪಿ.ಗಳನ್ನು ಬಳಸುತ್ತಿರುವ ರಾಜ್ಯ ಸರ್ಕಾರದ ಅಲ್ಪಸಂಖ್ಯಾತ ವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಿದ ಇವರು, ಅಣುಬಂಧ, ಬೆಲೆ ಏರಿಕೆ ಹಾಗೂ ಕೋಮುವಾದ ದೇಶದ ಇಂದಿನ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡಿರುವ ಡಿವೈಎಫ್‌ಐ ಕಾರ್ಯ ಶ್ಲಾಘನೀಯ ಇಂಥ ಒಂದು ಚಳುವಳಿಯಲ್ಲಿ ನಾನೂ ಕೂಡ ಭಾಗಿದಾರನಾಗುತ್ತೇನೆಂದು ಹೇಳಿದ ಅವರು ಯುವಜನತೆ ಇಂಥ ಸಮಸ್ಯೆಗಳ ವಿರುದ್ಧ ಸಿಡಿದು ನಿಲ್ಲಬೇಕೆಂದು ಕರೆ ನೀಡಿದರು.

ಸಾಹಿತಿ, ಪತ್ರಿಕೋದ್ಯಮಿ ಜಿ.ಎನ್.ಮೋಹನ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಜನಶಕ್ತಿ ವಾರಪತ್ರಿಕೆ ಸಂಪಾದಕ ಎಸ್.ವೈ.ಗುರುಶಾಂತ್, ಡಿವೈಎಫ್‌ಐ ಮಾಜಿ ರಾಜ್ಯ ಅಧ್ಯಕ್ಷ ಹಾಗೂ ಕಾರ್ಮಿಕ ಮುಖಂಡ ಕೆ.ಎನ್.ಉಮೇಶ್ ಭಾಗವಹಿಸಿ ಮಾತನಾಡಿದರು. ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸಮುದಾಯ ರಾಜ್ಯ ಕಾರ್ಯದರ್ಶಿ ಸುರೇಂದ್ರರಾವ್, ವಿಮಾ ನೌಕರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಗೀತಾ, ಪತ್ರಕರ್ತೆ ಕಾತ್ಯಾಯಿನಿ ಚಾಮರಾಜ್, ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಹೆಚ್.ಆರ್.ನವೀನ್‌ಕುಮಾರ್ ಇತರ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ ಶುಭ ಕೋರಿದರು.

ಜಾಥಾದಲ್ಲಿ ಡಿವೈಎಫ್‌ಐ ತಮಿಳುನಾಡು ಕಾರ್ಯದರ್ಶಿ ಕಣ್ಣನ್, ಆಂಧ್ರಪ್ರದೇಶ ಅಧ್ಯಕ್ಷ ಪ್ರಸಾದ್ ಇತರರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಿವೈಎಫ್‌ಐ ಜಿಲ್ಲಾಧ್ಯಕ್ಷ ನಾಗರಾಜ್ ಸ್ವಾಗತಿಸಿ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ವಂದಿಸಿದರು. ಲಿಂಗರಾಜು ಕಾರ್ಯಕ್ರಮ ನಿರೂಪಿಸಿದರು.

ಲಿಂಗರಾಜು



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH